UNIVERSAL LIBRARY
OU_200137
UNIVERSAL LIBRARY

ಕ ಮ ಲ ಕು ಮಾ ರಿ

ಕಾದಂಬರೀಸಂಗ್ರಹ ಗ್ರಂಥಮಾಲಾ ನಂ|| ೨೧.

ಕಮಲಕುಮಾರಿ

ಪ್ರೇಮಪಿಪಾಸೆ, ಕ್ಷಾತ್ರತೇಜ, ವಿಷವಿವಾಹ ಮುಂತಾದ ಕಾದಂಬರಿಗಳ

ಲೇಖಕರಾದ.

ಎಂ. ಎಸ್. ಕಾಮತ್.

ಇವರಿಂದ ರಚಿತವಾದುದು.

ದ್ವಿತೀಯ ಮುದ್ರಣ

MADHURAVANI PRINTING WORKS.

Mysore.

1918

printed by Mr. HANUMAN at
THE MADHURA VANI PRINTING WORKS
MYSORE.

Checked 1969

ಪುಸ್ತಕವು ದೊರೆಯುವ ಸ್ಥಳ;—

ಎಂ. ಎಸ್. ರಾವ್ ಕಂಪೆನಿ,

ಪುಸ್ತಕ ವ್ಯಾಪಾರಿಗಳು,

ಅವೆನ್ಯುರೋಡ್, ಬೆಂಗಳೂರು ಸಿಟಿ.

ಭೂಮಿಕೆ.

ಸಾಂಘೀಕನ್ಯಾಸ ಸೃಷ್ಟಿಯಲ್ಲಿ ವಿಶೇಷವಾದ ಯಶಸ್ಸನ್ನು ಸಂಪಾದಿಸಿ ಕೊಂಡಿರುವ, ಬಾಬೂ ತಾರಕನಾಥವಿಶ್ವಾಸರವರ ಗ್ರಂಥಗಳಲ್ಲಿ ಸ್ವತ್ವಾಧಿಕಾರವನ್ನುಳ್ಳವರಿಂದ ಅನುಮತಿಯನ್ನು ಪಡೆದು ಕೊಂಡು, — "ಕಮಲಕುಮಾರಿ" ಯನ್ನು ಅನುವಾದಿಸಿ ಇದೀಗಲೇ ಪ್ರಚುರಗೊಳಿಸಿದುದಾಯ್ತು. ಈ ಗ್ರಂಥದಲ್ಲಿ ಜಹಾಂಗೀರ, ಮಾನಸಿಂಹ ಪ್ರಭೃತಿಗಳ ಗುಣದೋಷಗಳೂ ಪರಸ್ಪರೋದ್ದೇಶ ಸಾಧನೆಗಳ ಯುಕ್ತ್ಯಾಯುಕ್ತಿಗಳೂ. ಇತಿಹಾಸನಾಯಕರಾದವರ ಯೋಗ್ಯತಾನುಸಾರವಾಗಿಯೇ, ವರ್ಣಿತವಾಗಿವೆ. ಪ್ರಣಯಪಿಪಾಸಾತುರರಾದ ಸ್ತ್ರೀಪುರುಷರ ಜೀವನವು ಆಗೆಂತು ಕೊನೆಗಾಣಬಹುದೆಂಬುದು ಈ ಪುಸ್ತಕದಲ್ಲಿ ಸ್ಪಷ್ಟೀಕರಿಸಲ್ಪಟ್ಟಿದೆ.

ಗ್ರಂಥವು, ಕಾರ್ಯಬಾಹುಲ್ಯದಿಂದ ಇದಕ್ಕೆ ಮೊದಲಾಗಿಯೇ ಪ್ರಕಟಿಸಲಾರದಾಯ್ತು. ಆದರೂ ಕಾದಂಬರಿಗಳ ಮಾಲೆಯಲ್ಲಿ ಪೋಣಿಸಲ್ಪಡುವ ಅಮೋಘವಾದ ಪುಷ್ಪಗಳಲ್ಲಿ ಇದೊಂದಾಗಿ ಪರಿಗಣಿಸಲ್ಪಟ್ಟುದಕ್ಕೆ, ಆ ಮಾಲೆಯ ಸಂಪಾದಕರಿಗೆ ಕಮಲಕುಮಾರಿಯು ಚಿರಕೃತಜ್ಞಳಾಗಿರುವಳು. ಪಾಠಕಮಹಾಶಯರ ಉದಾರಹಸ್ತವು; ಕಮಲಕುಮಾರಿಯನ್ನು ಇದಕ್ಕೆ ಮೊದಲಿನ ಗ್ರಂಥಗಳನ್ನಾದರಿಸಿದಂತೆಯೇ ಪಾಲಿಸುವುದೆಂದು ಭರವಸೆ ಇದೆ.

ರಾಕ್ಷಸ ಜ್ಯೇಷ್ಠ,
ಬಂಟವಾಳ.

M. N. KAMATH.

ಎರಡನೆಯ ಮುದ್ರಣದ ಪೀಠಿಕೆ.

ಈ ಗ್ರಂಥವು ಮದರಾಸು ಯೂನಿವರ್ಸಿಟಿಯವರಿಂದ 1918-19ನೆ ಇಸವಿಯ ಐದನೇ ಫಾರಂಗೆ ಪಠ್ಯಪುಸ್ತಕವಾಗಿ ನಿಯಮಿತವಾದುದರಿಂದ ಎರಡನೆಯ ಮುದ್ರಣಕ್ಕೆ ಅವಕಾಶ ದೊರೆಯಿತು. ಇದಕ್ಕಾಗಿ ಗ್ರಂಥಕಾರರೂ, ಪ್ರಚಾರಕರೂ ಮದರಾಸು ಸರ್ಕಾರದವರಿಗೆ ಚಿರಕೃತಜ್ಞರಾಗಿರುತ್ತಾರೆ. ಕಾಲವು ಬಹು ವಿಷಮ ದೆಶೆಯಲ್ಲಿ ಸಿಕ್ಕಿ, ಮಹಾಸಮರಕಾರಣದಿಂದ ಕಾಗದದ ಬೆಲೆಯು ಪಂಚಗುಣವಾಗಿ ಪರಿವರ್ತಿತವಾದ ಪ್ರಯುಕ್ತ ಪೂರ್ವದ ಬೆಲೆಗಿಂತ ಸ್ವಲ್ಪ ಹೆಚ್ಚಿಸಬೇಕಾಗಿ ಬಂದಿತು. ಪಾಠಕರು ಎಂದಿನಂತೆ ಆದರಿಸಿ ಪ್ರೋತ್ಸಾಹಿಸುವರೆಂದು ನಂಬಿಕೆ.

ಕಾಳಾಯುಕ್ತಿ ಸಂವತ್ಸರ
ಆಷಾಢಮಾಸ } ಪ್ರಕಾಶಕ

॥ ಶ್ರೀ ॥

ಕಮಲಕುಮಾರಿ.

ಒಂದನೆಯ ಪ್ರಕರಣ.

ತಾಯಿಯೂ ಮಗಳೂ.

ಜ್ಯೇಷ್ಠಮಾಸ. ಹಗಲಿನ ಎರಡು ಪ್ರಹರಗಳು ಕಳೆದಿವೆ. ಮಹಾನಗರಿಯಾದ ಡಿಲ್ಲಿಯು ದಿವಾಕರನ ಪ್ರಖರಕಿರಣಗಳಿಂದ ವಿದಗ್ಧಪ್ರಾಯವಾಗಿದೆ. ಮನೆಯಿಂದ ಹೊರಕ್ಕೆ ಕಾಲಿಡಲು ಆರಿಗೂ ಸಾಹಸವಿಲ್ಲ. ರಾಜಪಥವು ಉತ್ತಪ್ತವಾಗಿದೆ; ಮನೆಗಳ ಗೋಡೆಗಳೂ ಉತ್ತಪ್ತವಾಗಿವೆ; ಕ್ಷೀಣಸಲಿಲೆಯಾದ ಯಮುನಾ ನದಿಯ ನಿರ್ಮಲೋದಕವೂ ಉತ್ತಪ್ತವಾಗಿದೆ "ವಾಯಸ" ಕ್ಕೆಂದು ಮಡಗಿದ್ದ ಅನ್ನಭಾಗವು ಒಣಗುತ್ತಿದೆಯಾದರೂ—ಕಾಗೆಗಳ ಸುಳಿವೇ ತೋರದು. ಅವುಗಳೆಲ್ಲ ವೃಕ್ಷಶಾಖೆಗಳ ಸ್ನಿಗ್ಧಛಾಯೆಯಲ್ಲಿ ಪ್ರಚ್ಛನ್ನಗೊಂಡಿವೆ. ಇಂತಹ ಸಮಯದಲ್ಲಿ ಸೌಧಕಿರೀಟಿನಿಯಾದಾ ರಾಜನಗರಿಯ ಉತ್ತರಪ್ರಾಂತದಲ್ಲಿಯದೊಂದು ಕುಟೀರದ್ವಾರದಲ್ಲಿ, ದೀನೆಯಾದ ಮಲಿನೆಯಾದೊಬ್ಬ ವೃದ್ಧೆಯು ವಿಷಣ್ಣಭಾವದಿಂದ ಕುಳಿತುಕೊಂಡಿರುವಳು ಘೋರದಾರಿದ್ರ್ಯದುಶ್ಚಿಂತೆಗಳೇ ಅವಳ ಜತೆಯ ಬಂಧುಗಳು ಕಂಕಾಲಸಾರವಾದಾಕೆಯ ಲಲಾಟದಲ್ಲಿ ವಿಧಾತನು ತನ್ನ ಲೋಹಲೇಖನಿಯಿಂದ ದಾರಿದ್ರ್ಯದ ಭೀಷಣಚಿತ್ರವನ್ನು ಅಂಕಿಸಿರುವನು ಆಕೆಯ ಜ್ಯೋತಿರ್ಹೀನವಾದ ಚಕ್ಷುಗಳು, ಈ ಜೀವನಪಥದಲ್ಲಿ, ಆಕೆಗೆ ಕೇವಲ ವಿಷಾದಮಯವಾದ ದೃಶ್ಯಗಳನ್ನೇ ಕಾಣಿಸಿರುವುವು. ವೃದ್ಧೆಯು ಸ್ಥಿರದೃಷ್ಟಿಯಿಂದ ಪಥದಕಡೆ ನೋಡುತ್ತ ಆರ ಆಗಮನವನ್ನೋ ನಿರೀಕ್ಷಿಸಿಕೊಂಡಿದ್ದಳು. ಮಧ್ಯೆಮಧ್ಯೆ ಆಕೆಯ ಹೃದಯಾಂತರ್ಯದಿಂದ ಒಂದೆರಡು ದೀರ್ಘನಿಶ್ವಾಸಗಳೂ ಹೊರಡುತಲಿದ್ದುವು.

ವಿಶ್ವಪತಿಯ ಕಾರ್ಯಗಳೆಲ್ಲವೂ ಅದ್ಭುತವಾದುವು ಅವನ ದಯೆಮಮತೆಗಳನ್ನು ಕುರಿತು ನಾವೇನನ್ನು ಹೇಳಬಲ್ಲೆವು? ಪ್ರಪಂಚದಲ್ಲಿ

ಕೆಲವರು ನಗುವರು; ಮತ್ತೆ ಕೆಲವರು ಅಳುವರು ಕೆಲವರು ನಗುತ್ತ ಸಂಗಡಲೇ ಕಣ್ಣೀರನ್ನಿಳಿಸುವರು. ಕೆಲವರು ಅತ್ತತ್ತು ಕಡೆಯಲ್ಲಿ ನಕ್ಕು ಬಿಡುವುದೂ ಉಂಟು. ಆದರೆ, ನಮ್ಮಲ್ಲಿ ಆರೇ ಆಗಲಿ, ಅಳುವನ್ನು ಮೆಚ್ಚುವುದಿಲ್ಲ; ಅನ್ಯರ ಅಳುವನ್ನೂ ಸಹಿಸಿಕೊಳ್ಳುವುದಿಲ್ಲ. ಕಿನ್ತು ಆವಾಗಲೂ ನಗುತ್ತಲೇ ಇರುವವರಿಗೆ ಮಾತ್ರ ಅನ್ಯರು ಅಳುತಲಿರುವುದೇಕೆಂದು ಅರಿವುದೇ ಇಲ್ಲ.

ಆ ವೃದ್ಧೆಯು ರೋದನವಾದರೋ, ಸಾಮಾನ್ಯವಾದುದಲ್ಲ. ಹಿಂದೆ ಅವಳ ಸಂಸಾರವು ಸುಖಮಯವಾಗಿಯೇ ಇದ್ದುದು ಅವಳ ಮನೆಯು ಅಂಗಳವು ಪುತ್ರ ಕನ್ಯೆಯರ ಸುಖದ ಆಟಗಳಿಂದಲೇ ಆವಾಗಲೂ ಸುಶೋಭಿತವಾಗಿಯೇ ಇದ್ದುದು. ತನ್ನ ಪತಿಯ ಮೇಲಣ ಪ್ರೇಮದಿಂದ ಅವಳ ಹೃದಯವು ಸದಾ ತುಂಬಿಕೊಂಡೇ ಇದ್ದಿತು. ಕಮಲೆಯ ಕೃಪೆಯಿಂದ, ದುಃಖವೆಂಬ ಶಬ್ದವೂ ಸಹಾ ಅವಳಿಗೆ ಗೋಚರವಾಗಿದ್ದುದಿಲ್ಲ. ಪರನ್ತು, ಆಕೆಯ ನಿರ್ಮಲವಾದ ಹೃದಯಾಕಾಶದಲ್ಲಿ ಚಿರದುಃಖದ ಕಾಲಮೇಘವೊಂದು ಅದೆಲ್ಲಿಂದ ಹರಿದುಬಂದುದೋ—ಆರರಿವರು? ಕಮಲೆಯ ಕೃಪೆಯೂ ಕಾಲಾಂತರದಲ್ಲಿ ಕುಂದುತ್ತ ಬಂಗುದು ವೃದ್ಧೆಯು ಪುತ್ರಕನ್ಯೆಯರು ಅಳಿದು ಹೋದರು. ತನ್ನ ಪ್ರಾಣಾಧಿಕನಾದ ಪತಿಯನ್ನೂ ಅವಳು ಕಳೆದುಕೊಂಡಳು. ಪುತ್ರಕನ್ಯೆಯರ ವ ಧುರಹಾಸದಿಂದ ಉಜ್ವಲಿತವಾದ ಆಕೆಯ ಗೃಹವು,—ಇಂದಿಗೆ ದರಿದ್ರತೆಯಿಂದುಂಟಾದ ತಪ್ತಶ್ವಾಸಗಳಿಂದ ಮಾತ್ರ ತುಂಬಿಕೊಂಡಿದೆ! ಅದುಕಾರಣ ಆಕೆಯು ಇಂದು ಪರ್ಣಕುಟೀರವಾಸಿನಿ; ಆಕೆಗೆ ಆರ ಸಹಾಯವೂ ಇಲ್ಲ, ಸಂಬಲವೂ ಇಲ್ಲ! ಮೊದಲಾದರೆ, ಅವಳ ಆಜ್ಞೆಗಳನ್ನು ಪ್ರತಿಪಾಲನೆಗೆಯ್ಯಲು ಎಷ್ಟೋ ದಾಸದಾಸೀ ಜನಗಳು ಪ್ರಸ್ಯಾರ್ಥಿಯರೆಂದೆಣಿಸಿಕೊಳ್ಳುತಲಿದ್ದರು! ಈಗ ಅವಳಿಗೆ ಒಂದು ಹಿಡಿಯ ತುಂಬ ಉದರಾನ್ನಕ್ಕೂ ಅಲಾಯಿತೆಯಾಗಿ ಬಿದ್ದುಕೊಂಡೇ ಇರಬೇಕಾಗಿದೆ. ಆಹಹ! ಇದಕ್ಕಿಂತಲೂ ಹೆಚ್ಚಿನ ದುರವಸ್ಥೆಯೂ ಉಂಟಾಗುವುದದೆಯೇ? ವೃದ್ಧೆಗೆ ಇನ್ನು ಕನ್ಯೆಯೊಬ್ಬಳೇ ಮಾತ್ರ ಉಳಿದಿರುವಳು. ತನಗೆ ಕಣ್ಣುಗಳು ಕಾಣವು; ನಡೆಯಲು ಬರಲಿಲ್ಲ;—ಬಾಲಿಕೆಯು ಬೇಡಿತರುವ ಭಿಕ್ಷಾ

ನ್ನವೇ ಅವಳಿಗೆ ಅದೊಂದೇ ಜೀವನೋಪಾಯ. ಇನ್ನೂ ಕಷ್ಟಗಳು ಒದಗಿ ಬರುವುವೋ ಏನೋ?

ಆದರೆ ತನಗೊಂದು ಪುತ್ರೀ ರತ್ನವು ಇನ್ನೂ ಇದೆಯೆಂಬುದೇ ಅವಳ ಹೃದಯಕ್ಕೆ ಯಥೇಷ್ಟವಾದುದಾಯ್ತು! ಈಶ್ವರನಿಂದ ತಾನು ಈ ವಿಧದಲ್ಲಿ ಅನುಗ್ರಹೀತಳಾಗಿಹೆನೆಂಬುದೇ ಅವಳಿಗೆ ಆನಂದಕರವಾದುದು. ಕಿನ್ತು ಆ ಬಾಲಿಕೆಯು ಇಂತಹ ದಾರುಣವಾದ ಬಿಸಿಲಿನಲ್ಲಿ ಅವಕಟೆಯಲ್ಲಿ ಸುತ್ತುತ್ತಲಿರುವಳೋ—ಎಲ್ಲಿ ಭಿಕ್ಷೆಯನ್ನೆತ್ತುವಳೋ ಅದು ಆರಿಗೆ ಗೊತ್ತಿದೆ? ಅಥವಾ ಅವಳು ಎಲ್ಲಿ ಮೂರ್ಛೆಗೊಂಡಿರುವಳೋ ಪಥದಲ್ಲೆ ಬಿದ್ದಿರುತ್ತ ಪ್ರಾಣವನ್ನು ಕಳೆದುಕೊಂಡು ಇರುವಳೋ? ಛೀ! ಇದೆಂತಹ ದುಶ್ಚಿಂತೆ! ವೃದ್ಧೆಯು ಎರಡೂ ಕಣ್ಣಿಳಿಂದ ದರದರನೆ ಅಶ್ರುಪಾತವುಂಟಾಗಲಾರಂಭಿಸಿತು.

ಕ್ರಮೇಣ ಅವೇ ಕಣ್ಣುಗಳು ಉಜ್ವಲತೆಯನಾಂತುವು ಅದೇಕೆ? ದ್ವಾದಶವರ್ಷೀಯಳಾದೊಬ್ಬ ಬಾಲಿಕೆಯು ಅಷ್ಟರಲ್ಲೆ ಆ ದ್ವಾರದ ಒಳ ಉಪಸ್ಥಿತಳಾದಳು. ಅಗಲಾ ಅಂಧಕಾರದ ಕುಟೀರದಲ್ಲಿ ಆಕಸ್ಮಿಕವಾಗಿ ಜ್ಯೋತಿರ್ಮಯಿಯಾದ ಸೌದಾಮಿನಿಯು ವಿಕಾಸಗೊಂಡಂತಾದುದು!

ಅಹುದು ಇವಳೇ ಆ ಬಾಲಿಕೆ! ಚಿಂದಿಚಿಂದಿಯಾದ ಬಟ್ಟೆಬರೆಗಳು; ಅಂಗಾಂಗಗಳೆಲ್ಲಲ್ಲ ದೂಳು; ತೀಕ್ಷ್ಣವಾದ ಕಿರಣಗಳಿಂದ ಕೆಂಪೇರಿದ ಮುಖಮಂಡಲ; ಲಲಾಟದಮೇಲೆ ಬಿಂದ ಬಿಂದ ವಾಗಿ ಹೊಂದಿರುವ ಸ್ವೇದ ಮಾಲೆ ವಿಶುಷ್ಕವಾದ ವದನ,—ಇಂತಹ ಹೀನಾವಸ್ಥೆಯುಲ್ಲೂ ಅವಳ ಸೌಂದರ್ಯವು ಮಾತ್ರ ಒಂದೇ ಒಂದು ಬಿಂದುವಿನ ಮಟ್ಟಿಗೂ ಕುಂದಿದುದಿಲ್ಲ ಅವೇ ದೀರ್ಘನಯನಗಳು; ವಕ್ರವಾದ ಸೂಕ್ಷ್ಮ ಭ್ರೂಯುಗಲ; ಚಂಪಕಾ ಕಲಿಕೆಯಂತಹ ನಾಸಿಕ; ಘುಟನಾಭೋಗಿಯನುಳ್ಳ ಲಲಾಟ; ಸ್ಫುರಿತ ಮನೋಮುಗ್ಧಕರವಾದ ಗಂಡಸ್ಥಲ! ಅಹ! ಸೃಷ್ಟಿಕರ್ತನು ಅಪಾರ ಅಧ್ಯವಸಾಯದಿಂದ ತನ್ನ ಶಿಲ್ಪನೈಪುಣ್ಯವನ್ನು ಇವಳಲ್ಲಿ ಪ್ರಕಾಶಗೊಳಿಸಿರುವನು. ಆದರೆ ಈ ಸ್ವರ್ಣಕಮಲವು ಇಂತು ದೂಳಿನಲ್ಲಿ ಬಿದ್ದುಕೊಂಡಿರುವುದದೇತಕ್ಕೋ? ಅಭಾಗಿನಿಯಾದಿವಳಿಗೆ ಇಂತಹ ಸೌಂದರ್ಯವೇಕೆಯೋ?

ವೃದ್ಧೆಯು ಬಾಲೆಯನ್ನು ಕಂಡೊಡನೆಯೆ,—"ಕಮಲೆ, ಬಂದೆಯಮ್ಮ!'' ಎಂದು ಉಲ್ಲಾಸಭರದಿಂದ ಅಂದಳು ಅಹುದು; ಈ ಬಾಲಿಕೆ

ಯ ಹೆಸರೇ ಕಮಲೆ.—ಕಮಲ ಕುಮಾರಿ. ಅನಂತರ ಮಗಳನ್ನು ಚುಂಬಿಸಿ ಅವಳ ತಲೆಗೂದಲ್ಗಳನ್ನು ತನ್ನ ಅಂಗೈಯಿಂದ ಸವರಿ—"ಅಮ್ಮ! ನಿನ್ನ ಯಾತನೆಗಳನ್ನು ನಾನಿನ್ನೆಷ್ಟುಕಾಲ ಕಾಣ ಬೇಕಾಗಿರುವುದೊ!" ಎಂದು ನಿಟ್ಟುಸಿರನ್ನಿಟ್ಟಳು.

ಕಮಲೆ:—ಯಾತನೆ! ಅದಾವುದು? ನನಗೆ ಅಂತಹುದಾವುದೂ ಬೋಧೆಯಾಗುವುದಿಲ್ಲ.

ವೃದ್ಧೆಯು ಕಣ್ಣೀರನ್ನೊರಸಿಕೊಂಡಳು ಮತ್ತೆ—"ನೀನು ಇಂತು ಭಿಕ್ಷೆಯನ್ನೆತ್ತಿ ಉದರಭರಣವನ್ನು ಮಾಡಿಕೊಳ್ಳಬೇಕಾಗಿ ಬರುವುದೆಂಬು ದನ್ನು ನಾನು ಸ್ವಪ್ನೇಪಿ ತಿಳಿದಿರಲಿಲ್ಲ!" ಎಂದಳು. ಬಳಿಕ ಪುನಃ ಅತ್ತು ಬಿಟ್ಟಳು.

ಕಮಲೆ:—ಅಳುವುದೇಕಮ್ಮ? ನಿನ್ನ ಕಣ್ಣುಗಳಿಂದ ನೀರಿಳಿವುದೆಂದರೆ ನನ್ನ ಹೃದಯದಲ್ಲುಂಟಾಗುವ ಕಳವಳವ್ಯಥೆಯು, ಮತ್ತಾವ ಪರಿಯಿಂದಲೂ ನನ್ನಲ್ಲುಂಟಾಗುವುದಿಲ್ಲ. ಅಳಬಾರದಮ್ಮ!

ವೃದ್ಧೆ:—ಇಲ್ಲ; ಅಳುವುದಿಲ್ಲ.

ಕಮಲೆ:—ನೀನು ಇನ್ನೂ ಆಹಾರವನ್ನುಂಡಿರುದಿಲ್ಲವೇ?

ವೃದ್ಧೆ:—ನಿನ್ನೊಡನೆಯೆ ಅಲ್ಲದೆ, ನಾನು ಉಣ್ಣುವೆನೆ?

ಕಮಲೆ:—ಛೀ! ನಾನು ಸಡೆದ ಬರುತ್ತ ಏನನ್ನಾದರೂ ತಿಂದಲ್ಲದೆ ಇತ್ತ ಬರುವುದಿಲ್ಲ.

ವೃದ್ಧೆ:—ಇದೂ ಅತುದೆ?

ಕಮಲೆ:—ಅಹುದು ಆದುದರಿಂದ ನೀನು ಅನುದಿತ್ಯವೂ ನನಗೆ ಮೊದಲಾಗಿಯೆ ಅನ್ನವನ್ನುಂಡರಾಗದೆ?

ವೃದ್ಧೆ:—ಇಂದಿಗೆ ಇರಲಿ ನೀನು ಬಂದು ಬಾ ಕೂಡ ನಾವಿಬ್ಬರೂ ಉಣ್ಣುವ.

ಕಮಲೆಯು ಇದಕ್ಕೆ ಮರುಮಾತನಾಡಲಾರದೆ ಕೇಳಿದಳು ಆವ ಳು ಬೆವತುಹೋದಳು. ಅವಳ ತುಟಿಗಳೊಣಗಿದುವು

ವೃದ್ಧೆ:—ಇದೇಕೆ ಸುಮ್ಮನಾದೆ? ಇಂದು ಭಿಕ್ಷೆಯು ದೊರೆತುದಿಲ್ಲವೆ?

ಕಮಲೆ:—ಬಂದು ಹಿಡಿಯತುಂಬ ಅಕ್ಕಿಕಾಳು ದೊರಕಿದೆಯಷ್ಟೆ!

ವೃದ್ಧೆಯು ಅಳಲು ತೊಡಗಿದಳು,—"ನಿನ್ನ ಹಣೆಯಲ್ಲಿ ಇಷ್ಟು ಬರೆದಿದ್ದಿತ ? ಕಮಲೆ ! ನೀನಾದರೋ ನನ್ನ ಎಳೆಕೂಸು ನೀನು ಬೇಡಿ ಬೇಡಿ ತಂದುದನ್ನು ನಿನ್ನನ್ನೇ ಪಾಲಿಸಬೇಕಾಗಿದ್ದ ನಾನು ಉಣಬೇಕಾಗಿ ಬಂದಿತೆ" ಎಂದುಕೊಂಡಳು.

ಕಮಲೆ;—ಅಷ್ಟು ನನಗೆ ಸಾಧ್ಯವಾದುದೆಲ್ಲಿ? ನಡೆದು ನಡೆದು ನನ್ನ ಪಾದಗಳು ಗಾಯವೊಡೆದಿವೆ. ಆದರೂ ಹೊಟ್ಟೆಯು ತುಂಬ ಅನ್ನಕ್ಕೆ ಗತಿ ದೋರದಾದುದು.

ನಿನ್ನ ಈ ಎರಡೇ ಎಲವುಗಳು, ಸರಿಯಾಗಿ ಉಂಡಿರದೆ, ಇನ್ನೆಷ್ಟು ದಿನ ಬದುಕಿ ಕೊಂಡಿರಲಾಪುವು.

ವೃದ್ಧೆ—ಅಷ್ಟನ್ನವು ನನಗೆ ಹೆಚ್ಚೇ ಸರಿ. ನಾನೇನು ಬಲಿಯನ್ನು ತಿಂಬಾಳೆಯೆ?

ಕಮಲೆ—ನಾನಾದರೆ ಪುನಃ ಭಿಕ್ಷೆಯನ್ನೆತ್ತಿಕೊಂಡು, ಮತ್ತೆ ಉಣ್ಣುವೆನು.

ವೃದ್ಧೆ—ಈಗತಾನೆ ಆ ಕಾಳುಗಳನ್ನು ಬೇಯಿಸಿ, ಅಡುಗೆಮಾಡುವೆನು. ನೀನೊಮ್ಮೆ ಬಾಯ್ತುಂಬ ಉಂಡು ಆ ಮೇಲೆ ಮರಳಿ ಭಿಕ್ಷೆಗೆಂದು ತೆರಳ ಬಹುದು.

ಕಮಲೆ—ಆದಾಗದು

ವೃದ್ಧೆ—ಹಾಗಿದ್ದರೆ, ನಾವಿಬ್ಬರೂ ಇಷ್ಟನ್ನೆ ಉಣ್ಣುವ.

ಈ ಸಂಭಾಷಣೆಯು ಇಲ್ಲಿಗೆ ಮುಗಿದ ಮೇಲೆ, ಆ ಕೆಲವೇ ಕಾಳುಗಳನ್ನು ಬೇಯಿಸಿದುದಾಯ್ತು. ಕಮಲೆಯು ಸ್ನಾನವನ್ನುಮುಗಿಸಿಕೊಂಡಳು. ಆಕೆಗಿರುವುದು ಅದೊಂದೇ ಛಿನ್ನವಸ್ತ್ರ; ಅದನ್ನೇ ಬಿಸಿಲಿನಲ್ಲಿಯೊಣಗಿಸಿಕೊಂಡು, ಮರಳಿ ತಾಯಿಯಿದ್ದೆಡೆಗೆ ಬಂದಳು.

ಕಮಲೆಯು ಮನಸ್ತುಷ್ಟಿಗೆಂದು ಮಾತ್ರ, ವೃದ್ಧೆಯು ಊಟಕ್ಕೆ ಕುಳಿತುಕೊಂಡಿದುದಲ್ಲದೆ—ಆಹಾರವು ಆವಳ ಗಂಟಲನ್ನು ದಾಟಿದುದಿಲ್ಲ. ತಾನೇಕೆ ಮಾತೆಯ ಜತೆಯಲ್ಲಿ ಊಟಕ್ಕೆ ಕುಳಿತು ಕೊಂಡೆನೆಂದು ಕಮಲೆಯು ವ್ಯಥೆಪಟ್ಟಳು. ಹೇಗೆಯೋ ಭೋಜನವು ಮುಗಿದಿತು.

ಆಹಾರಾಂತ್ಯದಲ್ಲಿ ಕಮಲೆಯು, ಆ ಅಸಹನೀಯ ಸೂರ್ಯಾತಪದಲ್ಲೀ ಮರಳಿ ಭಿಕ್ಷೆಗೆಂದು ಹೊರಟಳು. ಬಡಬಾಲಿಕೆಯ ಇಷ್ಟು ದುಃಖವನ್ನು ಕಣ್ಣಾರ ಕಂಡೂ ಭಗವಂತನಲ್ಲಿ ಇನ್ನೂ ದಯೆಯುಂಟಾಗಲಿಲ್ಲವದೇಕೆಯೊ?

ಎರಡನೆಯ ಪ್ರಕರಣ.

ವಿದ್ಯುಲ್ಲತೆ.

ಅಭಾಗಿಯಾದಾ ಕಮಲಕುಮಾರಿಯು ಕಂಬನಿಯನ್ನು ಸುರಿಸುತ್ತ, ಭಿಕ್ಷಾಟನೆಗೆ ಮುನ್ನಡೆದಳು. ಭಗವಂತನ ಲೀಲೆಯ ರಹಸ್ಯವನ್ನು ಭೇದಿಸಿ ಅರಿದವರದಾರು? ಬಾಲಕ ಬಾಲಿಕೆಯರೆಂದಿಲ್ಲ—ಎಲ್ಲರೂ ಆತನ ಅವಿಶ್ರಾಂತ ನಿಯತಿಚಕ್ರದಲ್ಲಿ ಸದಾ ಪ್ರದಕ್ಷಿಣೆ ಮಾಡುತ್ತಲೆ ಇದ್ದಾರೆ. ಈಗ ತಾನೆ ಅರಳಿದ ಪದ್ಮವನ್ನು ಕಂಡರೆ ನಮ್ಮೆಲ್ಲರಿಗುಂಟಾಗುವ ದುಃಖವು, ಬೆಂದೊಣಗಿದ ಮಲ್ಲಿಗೆಯನ್ನು ಕಂಡರೆ ಉಂಟಾಗುವುದಿಲ್ಲ. ಉಪಾಕ್ಷೇತ್ರದಲ್ಲಿ ಪಾರಿಜಾತವಿದೆಯಂತೆ—ಅದೇತಕ್ಕೆಯೊ? ಅದು ಬಾಡುವುದಿಲ್ಲೆಂದೇ ಸ್ವರ್ಗದಲ್ಲಿದೆಯೊ, ಏನು? ಜಗದೀಶನೆ, ನಿನ್ನ ತುಲಾದಂಡಕ್ಕೆ ಧನ್ಯವಾದಗಳಿರಲಿ! ನಿನ್ನ ನ್ಯಾಯಪರತೆಯು ಧನ್ಯವೇ ಇರಲಿ:—ನಿನ್ನ ವಿಚಾರವೇನೆಂಬುದಂತೂ ನನಗೆ ತಿಳಿಯ ಬರುವುದಿಲ್ಲ.

ಕಮಲೆಯು ಭಿಕ್ಷಾಟನೆ ಮಾಡುತಲಿದ್ದಾಳೆ ಎಲ್ಲಿ? ನಾಲ್ಕು ಮಂದಿಗಳು ಸೇರಿರುವ ಕಡೆಯಲ್ಲಿ ಅವಳ ಬಾಯಿಯಿಂದ ಒಂದು ಮಾತೂ ಹೊರಡದು. ಅವಳು ಅತ್ತ ಕಣ್ಣೆತ್ತಲೂ ಆರಳು. ಅಂತಹರ ನಡುವೆ ತನ್ನ ದುಃಖದ ಆವ ವೃತ್ತಾಂತವನ್ನೂ ಹೇಳಲು, ಅವಳಿಗೆ ಬರುವುದಿಲ್ಲ. ಒಂಟಿಯಾರಾದರೂ ದೊರೆತರೆ ಮಾತ್ರ, ಅಥವಾ ರಮಣೀ ಮಂಡಲದಲ್ಲಿ ಮಾತ್ರ, ಅವಳು ಯಾಚಿಸುವುದಿದ್ದಿತು. ತನಗೆ ಸಾಕಾಗಿರುವಷ್ಟು ದೊರೆತರೆಂದರೆ ಅವಳು ಸಂತುಷ್ಟೆಯಾಗುವಳು ಇಂದು ಅವಳಿಗೆ ಅರ್ಧಾಹಾರ; ದೊರೆತ್ತುದುದು ಕಡಿಮೆ. ಇಂತಹ ದಿನಗಳು ಕೆಲವೇ ಆಗಿರಲಿಲ್ಲ.

ಕಮಲೆಯು ಇಂತು ತನ್ನ ಭಿಕ್ಷಾಲಬ್ಧವಾದೊಡವೆಗಳನ್ನು ಕಯ್ಯಲ್ಲಿ ಹಿಡಿದು, ದ್ರುತಪದದಿಂದ ಸ್ವಕುಟೀರಾಭಿಮುಖವಾಗಿ ಮುನ್ನಡೆಯುತ್ತಿರು

ವಾಗ ಒಬ್ಬ ಮುದುಕಿಯು ಅವಳ ಕಡೆಗೆ ಬರುತಲಿದ್ದಳು. ಆಕೆಯು ಕಯ್ಯಲ್ಲೊಂದು ಊರುಗೋಲು; ಮಲಿನವಾದ ಉಡುಪು; ಒಂದೆರಡು ಹಿತ್ತಾಳೆಯ ತೊಡವೆಗಳು; ಕಪ್ಪಾದ ಅಂಗವರ್ಣ; ಕಣ್ಣುಗಳೆರಡೂ ಕೆಂಪಗೆ; ಇಂತಹರನ್ನು ಕಂಡರೆ ಆರಿಗೆ ತಾನೆ ಭೀತಿದೋರದು? ಮುದುಕಿಯಾದರೊ ಕಮಲೆಯನ್ನು ತನ್ನ ಎಡಗೈಯ ಸನ್ನೆಯಿಂದಲೇ ಸಮೀಪಕ್ಕೆ ಕರೆದುಕೊಂಡಳು. ಆದರೆ ಕಮಲೆಯ ಕಾಲುಗಳು ಮುಂದರಿಯಲಿಲ್ಲ.

ಮುದುಕಿ—ನಿನ್ನ ಹೆಸರೇನೆ?

ಕಮಲೆ—ಕಮಲಕುಮಾರಿ

ಮುದುಕಿ—ನೀನೆಲ್ಲಿಗೆ ಹೊರಟಿರುವಿ?

ಕಮಲೆ—ಭಿಕ್ಷಾಟನೆಗೆ.

ಮುದುಕಿ—ನಿನ್ನಂತಹ ಚೆಲುವೆಯೂ ಭಿಕ್ಷಾಟನೆಗೆ ಹೋಗಬೇಕಾಗಿದೆಯೆ?

ಕಮಲೆ—ಊಟಕ್ಕೆ ಬೇರೆ ಗತಿಯಿಲ್ಲ.

ಮುದುಕಿ—ನಿನಗೆ ಇನ್ನಾರು ಇರುವರು?

ಕಮಲೆ—ಒಬ್ಬ ಮುದಿ ಅಮ್ಮ ಮಾತ್ರ

ಮುದುಕಿ—ನಿನಗೆ ವಿವಾಹವಾಗಿಲ್ಲವೆ?

ಕಮಲೆ—ಇಲ್ಲ.

ಮುದುಕಿ—ವಿವಾಹ ಮಾಡಿಕೊಳ್ಳಲು ಇಚ್ಛೆಯಿದೆಯೆ?

ನಿರುತ್ತರ

ಮುದುಕಿ—ನಾನು ನಿನ್ನನ್ನು ಶ್ರೀಮಂತರಲ್ಲಿಗೆ ಕೊಡಿಸಿ ವಿವಾಹ ಮಾಡಿಸುವೆನು ಆಗ ನೀನು ಎಷ್ಟೋ ಅಲಂಕಾರವನ್ನು ತೊಟ್ಟುಕೊಳ್ಳಬಹುದು.

ಕಮಲೆ—ಇದೆಲ್ಲವೂ ನನಗೆ ತಿಳಿಯದು ಅಮ್ಮನೊಡನೆ ವಿಚಾರಿಸಬೇಕು.

ಮುದುಕಿ— ಅವಳೊಡನೆ ನಾನು ಬೇರೆ ವಿಚಾರಕ್ಕೆಂದು ಹೋಗಲಾರೆ! ನಿನ್ನ ಅಭಿಪ್ರಾಯವದೇನೆಂದು ಅರುಹಿಸು.

ಕಮಲೆ—ನಾನು ಏನನ್ನೂ ಅರಿಯೆ.

ಮುದುಕಿ—ನಿಮ್ಮ ಜಾತಿಯಾವುದು ?

ಕಮಲೆ—ನಾವು ರಾಜಪುತ್ರರು.

ಮುದುಕಿ—ಅದೂ ಒಳ್ಳೆತಾದುದಾಯ್ತು. ಒಂದು ಕೇಳಸವಿದೆ

ಕಮಲೆ—ಅದೇನು.

ಮುದುಕಿ—ನನ್ನೊಡನೆ ನೀನು ಬಂದು ನಮ್ಮ ಮನೆಯನ್ನು ಕಂಡು ತೆರಳು. ನಾಳೆ ನಿಮ್ಮಮ್ಮನೊಡನೆ ವಿಚಾರಿಸಿ ಅವಳ ಅಭಿಪ್ರಾಯವನ್ನು ನನಗೆ ತಿಳಿಸು. ಆಗದೆ ? ಹೇಗೆ—ರಾಜನ ಮನೆಯಲ್ಲಿ ನಿನಗೆ ವಿವಾಹವನ್ನು ಮಾಡಿಸಿಕೊಡುವೆನು

ಕಮಲೆ-ಇದೆಲ್ಲವನ್ನೂ ನೀನೇ ಅಮ್ಮನೊಡನೆ ಕೇಳಿಕೊಳ್ಳಲಾರೆಯಾ?

ಮುದುಕಿ—ನಾನು ಮುದುಕಿ; ನನ್ನಿಂದ ಅಷ್ಟು ದೂರಕ್ಕೆ ನಡೆಯಲಾಗುವುದೆ? ಬಾ, ನಮ್ಮಲ್ಲಿಗೆ ಬಾ.

ಹೊತ್ತು ಇಳಿಯುತ್ತ ಬಂದುದ. ಸುರಿವ ಕತ್ತಲಲ್ಲಿ ಮುಂದೆ ಹೋಗುವುದೆ? ಅಥವಾ ವೃದ್ಧೆಯ ಜತೆಯಲ್ಲಿ ಇರುವುದೆ? ವೃದ್ಧೆಯುತೊ ತನ್ನನ್ನು ಅರಸಿನಲ್ಲಿಗೆ ವಿವಾಹಮಾಡಿಕೊಡುವಳಂತೆ ! ಬಾಲಿಕೆಗೆ ಈ ಆಸೆಯಿಂದ ದಿಗ್ಭ್ರಮೆಯುಂಟಾಯ್ತು ಆದರೂ " ನಾಳೆ ಜವಹೊತ್ತಿಗೆ ಸರಿಯಾಗಿ ಬರಲಿ ? '' ಎಂದಳು.

ವೃದ್ಧೆ—ಅದನ್ನು ಹೇಗೆತಾನೆ ಹೇಳಲಿ ?

ಕಮಲೆ—ಅದೆಷ್ಟು ದೂರಕ್ಕೆ ನಡೆಯಬೇಕಾಗಿದೆ?

ವೃದ್ಧೆ—ಇದೇ ಬೈಲಿನ ಆಚೆ.

ಕಮಲೆ—ಮರಳುವಾಗ ರಾತ್ರಿಯಾಯ್ತೆಂದರೆ ?

ವೃದ್ಧೆ—ಅದಕ್ಕೆ ಭಯವೆ? ಛೆ, ನನ್ನ ಬಾಲಿಕೆಯನ್ನು ನಿನ್ನ ಜತೆಯಲ್ಲಿ ನಿನ್ನನ್ನು ಮುಟ್ಟಿಸಿ ಬರಲು ಕಳುಹುವೆನು.

ಕಮಲೆಯು ಇನ್ನು ವೃದ್ಧೆಯೊಡನೆ ಮುನ್ನಡೆಯಲು ಸಮ್ಮತಿಸಿದಳು.

ಮೂರನೆಯ ಪರಿಚ್ಛೇದ.

(ಮುದುಕಿಯ ಮನೆ)

ಕಮಲೆಯು ಮುದುಕಿಯ ಮನೆಗೆ ಮುಟ್ಟುವಾಗ ಹಗಲು ಕಳೆದಿದ್ದಿತು. ಆ ಮನೆಯು ಅದೊಂದು ನಿರ್ಜನಸ್ಥಾನದಲ್ಲಿದ್ದಿತು. ಅಗ ಜನಗಳ ಸಂಚಾರವಿರಲಿಲ್ಲ. ವೃದ್ಧೆಯು ತನ್ನ ಸೀರೆಯ ಸೆರಗಿಗೆ ಕಟ್ಟಿಕೊಂಡಿದ್ದ ಬೀಗದ ಕಯ್ಯಿಂದ ಬಾಗಿಲ ಬೀಗವನ್ನು ತೆರೆದಳು. ಆ ಮನೆಯಲ್ಲಿ ಮೂರು ಕೋಣೆಗಳು.

ವೃದ್ಧೆಯು ಒಂದು ಚಿಕ್ಕಮನೆಯನ್ನು ತೆರೆದು ಕಮಲಕುಮಾರಿಯನ್ನು ಅದರಲ್ಲಿ ಪ್ರವೇಶಿಸಲು ಹೇಳಿದಳು.

ಕಮಲೆ—ಈ ಮನೆಯಲ್ಲಿ ಆರೂ ಕಾಣುವುದಿಲ್ಲವಲ್ಲ ?

ವೃದ್ಧೆ—ಯಾರಿರಬೇಕು ? ಹೇಳು ?

ಕಮಲೆ—ನಿನ್ನ ಮಗಳು.

ವೃದ್ಧೆ—ಅವಳು ಇಷ್ಟರಲ್ಲೇ ಬಂದು, ನಿನ್ನನ್ನು, ನಿಮ್ಮ ಮನೆಗೆ ಕರೆದುಕೊಂಡು ಹೋಗುವಳು. ಭಯವೇಕೆ? ಎನಲು—ಕಮಲೆಯು ಕಣ್ಣುಗಳಿಂದ ನೀರು ಸುರಿಯಿಸುತ್ತಾ, “ನಾನು ಇಲ್ಲಿರಲಾರೆ. ನನ್ನ ತಾಯಿಯು ಹಗಲೆಲ್ಲವೂ ಉಪವಾಸದಿಂದಿರುವಳು” ನಾನು ಹೊರಡುವೆನು ಎಂದಳು ಅದಕ್ಕೆ—ವೃದ್ಧೆಯು ಸ್ವಲ್ಪ ವಿಶ್ರಮಿಸಿಕೊ. ನನ್ನ ಮಗಳು ಬೇಗ ಬರುವಳೆಂದು ಅವಳನ್ನು ನಿರ್ಬಂಧಿಸಲು, ಬಾಲಿಕೆಯು ಅಲ್ಲಿಯೇ ಉಳಿದುಕೊಳ್ಳಬೇಕಾಗಿ ಬಂದಿತು. ಆದರೆ ರಾತ್ರಿಯಹೊತ್ತು ಕತ್ತಲೆಯಲ್ಲಿ ಅನ್ಯರ ಮನೆಯಲ್ಲಿ ಇರಬಾರದೆಂದೂ ತನ್ನ ಕಯ್ಯಲ್ಲಿರುವ ಹಿಟ್ಟಿನ ಗಂಟನ್ನು ತಾಯಿಗೆ ಕೊಟ್ಟು ಅವಳ ಹಸಿವನ್ನಡಗಿಸಬೇಕೆಂದೂ ಯೋಚಿಸಿ ಕಮಲೆಯು ದುಃಖದಿಂದ ನಾನು ಖಂಡಿತವಾಗಿಯೂ ಹೊರಡಬೇಕೆಂದು ನುಡಿದಳು.

ಆಗ ವೃದ್ಧೆಯು ಮನೆಯಲ್ಲಿ ಹಾಸಿದ್ದೊಂದು ಚಾಪೆಯನ್ನು ಸುತ್ತಿ ಅಂಗಡಿಯಲ್ಲಿ ಇದ್ದ ಮಣ್ಣನ್ನು ಅಗೆಯಲು ಒಂದು ಹಲಗೆಯು ಕಂಡು

ಬಂದಿತು. ಅದನ್ನೆತ್ತಲು ನೆಲಮಾಳಿಗೆಯೊಂದು ಕಂಡು ಬಂದಿತು ಮುದುಕಿಯು ಒಂದು ದೀಪವನ್ನು ಹತ್ತಿಸಿ ಮತ್ತೊಂದು ದೀಪವನ್ನು ಕಮಲೆಯ ಕೈಲಿ ತಗೆಯಿಸಿಕೊಂಡು ನೆಲಮಾಳಿಗೆಗೆ ಇಳಿದಳು. ಅಲ್ಲೊಂದು ಕಿರುಮನೆಯಿದ್ದಿತು. ಬೆಳಕನ್ನು ಕಂಡೊಡನೆ ಎಷ್ಟೋ ಇಲಿಗಳು ದಿಕ್ಕುಕೆಟ್ಟವು. ಈ ಗಲಭೆಯಿಂದ ವೃದ್ಧೆಯ ಕಯ್ಯಲ್ಲಿದ್ದ ದೀಪವು ಆರಿಹೋಯಿತು. ಬಾಲಿಕೆಯು ಬೆದರಿ ನೀನೆಲ್ಲಿರುವೆಯೆಂದು ಕೂಗಿದಳು.

ಆವ ಉತ್ತರವೂ ಕೇಳಿಸಲಿಲ್ಲ. ವೃದ್ಧೆಯು ಮೇಲಕ್ಕೆ ಹತ್ತಿ ಮೇಲಿನ ಹಲಗೆಯನ್ನು ಮುಚ್ಚಿಬಿಟ್ಟಂತೆ ಸದ್ದಾಯಿತು. ಕಮಲೆಯು ತನ್ನ ಕಯ್ಗಳಿಂದ ವೃದ್ಧೆಯನ್ನು ಹುಡುಕಿದಳು. ಯಾರೂ ಇರಲಿಲ್ಲ. ಆದರೆ ಆರೋ ತನ್ನ ಮೈಯನ್ನು ಮುಟ್ಟಿದಂತಾಯ್ತು. ಬಾಲಿಕೆಯ ಹೃದಯದಲ್ಲಿ ಪಿಶಾಚ ಭಯವು ಉದಯಿಸಿತು

ಕಮಲೆಯು ಮತ್ತಷ್ಟು ಕಷ್ಟದಿಂದ ಏಣಿಯನ್ನು ಹತ್ತಿ ಮೇಲಕ್ಕೆ ಹೋದಳು. ತಲೆಗೆ ಹಲಗೆಯು ತಗಲಿತು. ಕಯ್ಗಳಿಂದ ಅದನ್ನು ಎತ್ತುವ ಪ್ರಯತ್ನ ಮಾಡಿದಳು. ಆದರದು ಸಾಧ್ಯವಾಗಲಿಲ್ಲ.

ಆಗ ಕಮಲೆಗೆ ತಾನು ವೃದ್ಧೆಯ ಕಯ್ಗೆ ಸಿಲುಕಿರುದು ತನ್ನ ದುರ್ಭಾಗ್ಯವೆಂದು ತಿಳಿದುಬಂದಿತು. "ಇವರು ದಸ್ಯುಗಳಾಗಿರಬಹುದು. ಆದರೆ ನನ್ನಲ್ಲಿ ಒಡವೆ ವಸ್ತುಗಳಾವುವೂ ಕಾಣುವುದಿಲ್ಲ. ತನ್ನನ್ನು ಕರೆದುಕೊಂಡು ಬಂದ ಕಾರಣವೇನಿರಬಹುದು ? ಅಥವಾ ಇದು ಭೂತಗಳ ಮನೆಯಾಗಿಯೂ ವೃದ್ಧೆಯು ಪಿಶಾಚಿನಿಯಾಗಿಯೂ ಇರಬಹುದು "

ನನ್ನ ಕೊರಳನ್ನು ಮುರಿದು ಈ ಭೂತಗಳು ರಕ್ತಪಾನವನ್ನು ಮಾಡುವಂತೆ ತೋರುತ್ತೆ. ನಾನು ಮಡಿದರೆ ಅದಕ್ಕಾಗಿ ಚಿಂತಿಸೆನು. ಆದರೆ ಅಮ್ಮನು ಆಹಾರದೊರೆಯದೆ ಸಾಯುವಳು. ಒಂದು ಕಡೆ ನನಗಾಗಿ ಶೋಕ; ಮತ್ತೊಂದು ಕಡೆ ಉದರಾನ್ನಕ್ಕೆ ಲೋಪ. ಅಮ್ಮಾ ! ನಿನ್ನ ಕಪಾಲದಲ್ಲಿ ಭಗವಂತನು ಇಷ್ಟು ಕಷ್ಟಗಳನ್ನೂ ಬರೆದಿದ್ದನೆ? ಎಂದು ಗಳಗಳನೆ ಅಳುತ್ತ ಕುಳಿತಿದ್ದಳು.

ಮೇಲಕ್ಕೆ ಬಂದ ವೃದ್ಧೆಯು ಪುನಃ ದೀಪವನ್ನು ಹತ್ತಿಸಿ ಗೃಹ ಕಾರ್ಯ ನಿರತಳಾದಳು. ಅಷ್ಟರಲ್ಲೇ ಭೀಷಣಾಕಾರರಾದ ನಾಲ್ಕು ಜನಗಳು

ಅಲ್ಲಿಗೆ ಬಂದರು. ಅವರಲ್ಲಿಯೊಬ್ಬನು—"ಏನಾಯ್ತಲೆ, ಮುದುಕಿ?" ಎಂದು ಕೇಳಿದನು.

ವೃದ್ಧೆ—ಇನ್ನಾಗುವುದೇನಿದೆ? ಅವಳನ್ನು ಉದ್ಯಾನವನದಲ್ಲಿ ನಾನು ಕಾಣಲೇ ಇಲ್ಲ.

ವ್ಯಕ್ತಿ—ಕಾಣಲಿಲ್ಲವೆಂದರೆ ನಾವು ಕೇಳೆನು.

ವೃದ್ಧೆ—ಏನು ಮಾಡುವೆ?

ವ್ಯಕ್ತಿ—ಅದಂತಿರಲಿ. ನೀನು ಐವತ್ತು ರೂಪಾಯಿಗಳನ್ನು ಪಡೆದು ಅವಳನ್ನು ಬಿಟ್ಟುಕೊಡು.

ವೃದ್ಧೆ—ನನಗೆ ಬೇಡ. ನೀನು ಅವಳನ್ನು ಏನು ಮಾಡುತ್ತೀ ಎಂಬುದನ್ನು ಮೊದಲೇ ನನಗೆ ಹೇಳಬೇಕು.

ವ್ಯಕ್ತಿ—ನಿಜವಾಗಿಯೂ ಅವಳನ್ನು ಒಂದು ಕಡೆಗೆ ಮದುವೆ ಮಾಡಿಸುವೆನು.

ವೃದ್ಧೆ—ಆರೊಡನೆ?

ವ್ಯಕ್ತಿ—ಮೋಹಿನೀವೇಶ್ಯೆಯ ಮಗನೊಡನೆ

ವೃದ್ಧೆ—ಕಟ್ಟಕಡೆಗೆ ಸಾಮಾನ್ಯ ನರ್ತಕಿಯ ಕಯ್ಗೆ ಇವಳನ್ನು ಒಪ್ಪಿಸುವೆಯಲ್ಲವೆ?

ವ್ಯಕ್ತಿ—ಅವಳು ಅದರಿಂದ ಸುಖಹೊಂದುವಳಲ್ಲವೆ?

ವೃದ್ಧೆ—ಎಷ್ಟು ಹಣ ಕೊಡುವೆ? ಪ್ರಮಾಣವಾಗಿ ಹೇಳು.

ವ್ಯಕ್ತಿ—ಐದು ನೂರು ರೂಪಾಯಿಗಳು.

ವೃದ್ಧೆ—ಇದು ಸುಳ್ಳು.

ವ್ಯಕ್ತಿ—ನಿನ್ನಾಣೆಯಾಗಿಯೂ ಹೇಳುವೆನು.

ವೃದ್ಧೆ—ನನಗೆ ಆ ಐದು ನೂರು ರೂಪಾಯಿಗಳೂ ಬೇಕಾಗಿವೆ.

ವ್ಯಕ್ತಿ—ಇದೆಲ್ಲಿಯದು? ನಿನಗೆ ಅಷ್ಟು ಕೊಡಲಾಗದು.

ವೃದ್ಧೆ—ಅದಕ್ಕೆ ಕಡಿಮೆಯಾದರೆ ಈ ಕಾರ್ಯವು ನನ್ನ ಕಯ್ಯಿಂದಾಗದು. ಅವಳಾದರೋ ಕುಲೀನ ಕನ್ಯೆ. ಈ ರಹಸ್ಯವು ಹೊರಬಿದ್ದಿತಾದರೆ ಖಾಜೀಸಾಹೇಬರು ನನ್ನ ತಲೆಯನ್ನೇ ಕತ್ತರಿಸುವರು.

ವ್ಯಕ್ತಿ—ಆ ಭಯವು ನಿನಗೆ ಬೇಡ.

ವೃದ್ಧೆ—ನನಗೆ ಭರವಸೆಯೂ ಕಡಿಮೆ

ವ್ಯಕ್ತಿ—ಒಮ್ಮೆ ಅವಳನ್ನು ಆ ಮನೆಯಲ್ಲಿ ಸೇರಿಸಿಬಿಟ್ಟರಾಯಿತು. ಮತ್ತೆ ಅವಳು ಅಲ್ಲಿಂದ ಹೊರಡುವುದೆಂದರೇನು? ಈ ಗರೀಬರ ಹುಡುಗಿ ತನ್ನ ಅಮ್ಮನನ್ನು ಮಾತ್ರವಲ್ಲ; ತನ್ನ ಕುಲವನ್ನೇ ಆನಂದದಿಂದ ಮರೆತು ಬಿಡುವಳು.

ವೃದ್ಧೆ—ಅದೆಲ್ಲವೂ ಹಾಗಿರಲಿ, ಬಹುಮಾನದ ವಿಷಯವಾಗಿ ಹೇಳು.

ವ್ಯಕ್ತಿ—ಅದನ್ನು ಮತ್ತೆ ವಿಚಾರಿಸಬಹುದು.

ವೃದ್ಧೆ—ನಾನು ಅವಳನ್ನು ಕರೆದು ತಂದಿರುವೆನು ಹಾಗೆಯೇ ಬಿಟ್ಟು ಕೊಡಲಾರೆನು.

ವ್ಯಕ್ತಿ—ಅದೇಕೆ ?

ವೃದ್ಧೆ—ನೀನು ಕೊಡುವುದು, ಬರೀ ಐನೂರೇ ಅಲ್ಲವೇ ?

ವ್ಯಕ್ತಿ—ಐದು ನೂರು !

ವೃದ್ಧೆ—ಐವತ್ತು ಸಾವಿರವನ್ನು ನನ್ನ ಕಾಲ್ಬುಡದಲ್ಲಿ ಇಟ್ಟಿಲ್ಲದೆ ಮೋಹನನು ಮಗನು ಇಂತಹ ಬ್ರಾಹ್ಮಣ ಕನ್ಯೆಯನ್ನು ಪಡೆಯಲಾರ ನೆಂದು ತಿಳಿ

ವ್ಯಕ್ತಿ—ಇರಲಿ, ಅದರಂತೆ ಅಷ್ಟನ್ನೇ ಕೊಡುವೆನು.

ಆಗ ವೃದ್ಧೆಯು ಅವರೆಲ್ಲರನ್ನೂ ಆ ಗುಪ್ತಗುಹೆಗೆ ಕರೆದುಕೊಂಡು ಹೋದಳು ಕಮಲೆಯನ್ನು ಕಂಡು ಅವರಿಗೆ ಸೀಮಾತೀತವಾದ ಆನಂದ ಪ್ರಾಪ್ತವಾಯಿತು. ಆದರೆ ಕಮಲೆಯು ಆಗ ಗಾಢನಿದ್ರೆಯಲ್ಲಿದ್ದಂತೆ ಕಂಡು ಬಂದಿತು. ಅದರ ದೇಹವನ್ನು ಅಲುಗಿಸಿದರೂ ಅವಳಲ್ಲಿ ಚೇತನವಿರುವ ಚಿಹ್ನೆಗಳೇ ತೋರಲಿಲ್ಲ ಕಮಲೆಗೆ ಜ್ಞಾನವಿಲ್ಲವೆಂದು ತೋರಿತು, ಕಮಲೆ; ಈಶ್ವರನ ಅತುಲದಯೆಯಿಂದ ನೀನು ಮೂರ್ಛಿತಳಾಗಿರುವೆ. ಆದುದರಿಂದ ನಿನಗೆ ಈಗ ಉಂಟಾಗುವ ಯಾತನೆಯು ನಿನಗೆ ಅರಿಯದೆ ಇರುವುದು. ಇದೂ ಒಂದು ನಿನ್ನ ಭಾಗ್ಯವೇ ಸರಿ !

ನಾಲ್ಕನೆಯ ಪರಿಚ್ಛೇದ.

(ಕಮಲೆಯ ಅವಸ್ಥೆ)

ಈ ಸಮಯಕ್ಕೆ ಸರಿಯಾಗಿ ದಿಲ್ಲಿಯ ಸುಪ್ರಸಿದ್ಧವಾದ ಕುತುಬ ಮೀನಾರದ ಉತ್ತರಭಾಗದಲ್ಲಿ ಎರಡು ಗಾವುದದ ದೂರದಿಂದ ಎರಡು ಬಂಡಿಗಳು ಬರುತ್ತಿವೆ. ಒಂದರಲ್ಲಿ ಮೂರು ಮಂದಿ ಪುರುಷರೂ ಮತ್ತೊಂದರಲ್ಲಿ ಒಬ್ಬ ಪುರುಷನೂ ಒಬ್ಬ ಬಾಲಿಕೆಯೂ ಇರುವರು. ಈ ಬಾಲಿಕೆಯೇ ನಮ್ಮ ಕಮಲೆ. ಆಕೆಯು ಇನ್ನೂ ಜ್ಞಾನಶೂನ್ಯಳಾಗಿಯೇ ಇರುವಳು. ಕ್ರಮೇಣ ಎರಡು ಬಂಡಿಗಳೂ ಒಂದು ಮಂದಿರದ ಸಮ್ಮುಖದಲ್ಲಿ ಉಪಸ್ಥಿತವಾದುವು. ಮಂದಿರದಿದಿರಿಗೆ ಯಮುನೆಯು ತನ್ನ ಸಹಸ್ರ ಬಾಹುಗಳಿಂದಲೂ ಕುಣಿಕುಣಿದು ಪ್ರವಹಿಸುತ್ತಲಿರುವಳು. ಉಳಿದ ಮೂರು ಕಡೆಗಳಲ್ಲಿ ವಿಸ್ತಾರವಾದುದೊಂದು ಬಯಲು. ಮಂದಿರಕ್ಕೆ ಎರಡು ಮಹಡಿಗಳಿದ್ದುವು. ಅದು ಅಷ್ಟೊಂದು ದೊಡ್ಡದಲ್ಲ. ಅದರಲ್ಲಿ ಎಷ್ಟೋ ಮಂದಿ ದಾಸದಾಸೀ ಜನಗಳು ನಿದ್ರಿಸುತ್ತಿರುವರು.

ಗಾಡಿಗಳೆರಡೂ ಆ ಮಹಡಿಯ ಬಾಗಿಲಿನಲ್ಲಿ ಬಂದು ನಿಂತಾಗ ಪ್ರಾತಃಕಾಲವು ಸಮೀಪಿಸುತ್ತಿದ್ದಿತು. ಜ್ಯೋತ್ಸ್ನೆಯು ಮಲಿನೆಯಾದಳು. ಆಕಾಶವು ಪಾಂಡುವರ್ಣವನ್ನು ಧರಿಸಿಕೊಂಡಿತು. ಕ್ಷುದ್ರ ನಕ್ಷತ್ರಗಳು ಅಂತರಾಳದಲ್ಲೇ ಲೀನವಾದುವು. ದೊಡ್ಡವಾದ ಕೆಲವು ತಾರೆಗಳು ಮಾತ್ರ ಖದ್ಯೋತದಂತೆ ಮಿಟಮಿಟೆಂದು ಮಿನುಗುತಲಿದ್ದುವು. ರಾತ್ರಿಕಾಲದಲ್ಲಿ ದ್ರುಮವೆಂಬ ದೇಹಗಳ ಮೇಲೆ ಕೌಮುದೀರಾಶಿಯು ರಜತಾಭರಣದಂತೆ ಶೋಭಿಸುತ್ತಿದ್ದಿತು; ಆದರೆ, ಈಗ ಅದು ವಿವರ್ಣಗೊಂಡುದು. ಚಂದ್ರಿಕೆಯ ಮನೋಹರಕರಜಾಲದಿಂದ ಭೂಮಿ, ಆಕಾಶಗಳೆರಡೂ ದಿಙ್ಮಂಡಲವೂ ದೇದೀಪ್ಯಮಾನವಾಗಿದ್ದುವು. ಆದರೆ ಅದು ಈಗ ಮೆಲ್ಲಮೆಲ್ಲನೆ ಎಲ್ಲಿಗೋ ಸರಿದುಹೋಯಿತು. ಕ್ರಮವಾಗಿ ಶೀತಲಪ್ರಭಾತಸಮೀರವು ಮಂದವಾಗಿ ಬೀಸುತ್ತ ನದೀಜಲವನ್ನೂ ತರುಪಲ್ಲವಗಳನ್ನೂ ಕಂಪಿಸುತ್ತ ಪೂರ್ವದಿಕ್ಕನ್ನು ಪರಿಷ್ಕಾರಗೊಳಿಸಿತು. ಜ್ಯೋತಿರ್ಹೀನವಾದ ವಿವರ್ಣಗೊಂಡ

ಒಂದು ಗೋಳಪದಾರ್ಥವು ಆಕಾಶರಂಗದಲ್ಲಿ ಕಾಣ ಬಂದಿತು. ಅದೂ ಮೇಲಕ್ಕೆ ಏರುತಲಿದ್ದಿತು ನೋಡುತಲಿದ್ದಂತೆಯೇ ಅದರ ಪ್ರಭೆಯು ವೃದ್ಧಿಸಲಾರಂಭಿಸಿತು;- ಜೀವಗಣದ ಪ್ರಾಣಸ್ವರೂಪನಾದ ಜ್ಯೋತಿರ್ಮಯನಾದ ಪ್ರಭಾಕರನು, ತನ್ನ ಕಿರಣಜಾಲದಿಂದ ಮೇದಿನಿಯಲ್ಲಿ ಚೇತನವನ್ನುಂಟುಮಾಡಲು ಪುನಹ ಅವತೀರ್ಣನಾದನು.

ಈ ಸಮಯದಲ್ಲಿ ಕಮಲೆಯು ಸ್ವಲ್ಪ ಎಚ್ಚೆತ್ತು 'ಅಮ್ಮಾ, ಅಮ್ಮಾ' ಎನ್ನುತ್ತ ಚೀತ್ಕರಿಸಲಾರಂಭಿಸಿದಳು. ಆದರೆ ಅಮ್ಮನೆಲ್ಲಿರುವಳು! ತನ್ನ ಕಣ್ಣುಗಳನ್ನು ಉಜ್ಜಿಕೊಂಡು ಕಮಲೆಯು ಅವುದನ್ನು ನೋಡಿದಳೋ ಅದನ್ನು ನಂಬುವದೆಂದರೆ ಕಮಲೆಗೆ ವಿಶ್ವಾಸವು ಉಂಟಾಗಲಿಲ್ಲ. ಪುನಃ ಚಕ್ಷುಗಳನ್ನು ಮುಚ್ಚಿ, ತೆರೆದು ನೋಡಿದಳು. ಅದೇ ಅದ್ಭುತದೃಶ್ಯ! ಅವಳೆದುರಿನಲ್ಲಿ ಎಷ್ಟೋ ಅಪರಿಚಿತ ಜನರು ತುಂಬಿದ್ದವರು ಸುಂದರವಾದ ಗೃಹ! ವಿಸ್ತೃತವಾದ ನದಿ! ಅವಳೋಬ್ಬ ರಮಣಿಯು ಅವಳ ಮಗ್ಗುಲಲ್ಲಿ ನಿಂತಿರುವಳು ಅವಳು, "ಬಾರಮ್ಮ, ಬಾ" ಎಂದು ಕಮಲೆಯನ್ನು ಕರೆದಳು ಈ ಸ್ನೇಹಮಯವಾದ ಸಂಭಾಷಣೆಯಿಂದ ಕಮಲೆಯು ತನ್ನನ್ನೇ ಮರೆತಳು. ಕಳೆದ ರಾತ್ರಿಯಲ್ಲಿ ತಾನು ಅನುಭವಿಸಿದ ಆ ಅಂಧಕಾರಾಗೃಹದ ನೆನಪು ಅವಳ ಹೃದಯದಲ್ಲಿ ಎಚ್ಚರಗೊಂಡಿದ್ದರೂ, ಈ ಸುಂದರಿಯ ರಮಣೀಯಕಾಂತಿಯು ಆಕೆಯ ಮನಸ್ಸನ್ನು ಮೋಹಿಸಿತು ಕಮಲೆಗೆ ಅವಳನ್ನು ಅನುಸರಿಸಿ ನಡೆಯಲು ಸಾಹಸವುಂಟಾದುದು ಬಳಿಕ ಆ ರಮಣಿಯುರಿಬ್ಬರೂ ಆ ಮಂದಿರದೊಳಕ್ಕೆ ಪ್ರವೇಶಿಸಿದರು.

ಐದನೆಯ ಪರಿಚ್ಛೇದ.

(ಗುಪ್ತಕಲ್ಪನೆ)

ಯಮುನಾತಟದಲ್ಲಿ ಒಂದು ದಿನ ಪ್ರಾತಃಕಾಲದಲ್ಲಿ ಅಶ್ವಾರೋಹಿಯರಿಬ್ಬರು ಮೃದುಮಂದಭಾವದಿಂದ ಅಶ್ವಚಾಲನೆಯನ್ನು ಮಾಡುತ್ತಲಿದ್ದರು ಅಶ್ವಗಳೆರಡೂ ಸುಂದರ; ಅವುಗಳಂತೆಯೆ ಅಶ್ವಾರೋಹಿಗಳು. ಅವರಲ್ಲಿ ಒಬ್ಬನು

ಯುವಕನು ; ಮತ್ತೊಬ್ಬನಿಗೆ ಪ್ರೌಢಾವಸ್ಥೆಯು ಮೀರಿಗೆ ಇಬ್ಬರೂ ಸಾಮಾನ್ಯ ರಾಜಪುತ್ರರ ವೇಷಭೂಷಗಳನ್ನೇ ತೊಟ್ಟುಕೊಂಡಿರುವರು. ಆದರೆ ಈ ವೇಷವು ಅವರಿಗೆ ಒಪ್ಪುತ್ತಿದ್ದಿತೋ ಅಥವಾ ಅವರಿಗೆ ಯೋಗ್ಯವಾಗಿದ್ದಿತೋ ನಾವು ಹೇಳಲಾರೆವು

ವಯಸ್ಕನಾದ ಅಶ್ವಾರೋಹಿಯೇ ಜಯಪುರಾಧಿಪತಿಯಾದ ಮಹಾರಾಜ ಮಾನಸಿಂಹನು;—ಮತ್ತಾ ಯುವಕನು ಸಮ್ರಾಜನಾದ ಅಕಬರಷಹನ ಪೌತ್ರನಾದ ಖುಸುರು

ಮಾನಸಿಂಹ—ನಾನು ಪುನಹ ಹೇಳುವೆನು ಕಾಶ್ಮೀರಕ್ಕೆ ನೀನು ತೆರಳಲಾಗದು.

ಖುಸುರು—ಅದೇತಕ್ಕೆಂದು ತಿಳಿಸಬಾರದೆ ?

ಮಾನಸಿಂಹ—ತಿಳಿಸಲು ಈಗ ಅವಕಾಶವಿಲ್ಲ.

ಖುಸುರು—ಅದೇಕೆ ?

ಮಾನಸಿಂಹ—ಅದೆಲ್ಲವೂ ಅತೀವಗೋಪನಿಯವಾದ ಕಥೆ.

ಖುಸರು—ಹಾಗಿದ್ದರೆ, ಈ ವಿಷಯದಲ್ಲಿ ನನಗೆ ಸಮ್ಮತಿಯಿಲ್ಲವೆಂಬುದು ಜ್ಞಾಪಕದಲ್ಲಿರಲಿ.

ಮಾನಸಿಂಹ—ಖುಸರು, ಏನನೆನ್ನುವೆ ? ನಾನಾರೆಂದು ತಿಳಿದಿರುವುದೆ?

ಖುಸರು—ತಾವು ನನ್ನ ಪರಮಪೂಜ್ಯರಾದ ಮಾತುಲರೆಂಬುದು ತಿಳಿದೇ ಇದೆ. ಆದರೆ ನಾನು ಯಾರೆಂಬುದು ತಮಗೆ ನೆನಪಿದೆಯೆ ? ನಾನು ಬಾದಷಾಹನ ಪುತ್ರನು ! ರಾಜ್ಯಾಕಾಂಕ್ಷೆಯು ನಮ್ಮ ಜೀವನದ ಲಕ್ಷ್ಯವೇ ಆಗಿದೆ. ನನ್ನ ಪಿತೃಪಿತಾಮಹರಿಂದ ಕಾಶ್ಮೀರ ರಾಜ್ಯಕ್ಕೆ ತೆರಳಲು ನಾನು ಅಪ್ಪಣೆ ಪಡೆದಿರುವೆನು. ಹೀಗಿರುವಲ್ಲಿ ತಾವು ಅದೇಕೆ, ಅಂತಹ ಆಜ್ಞೆಗೆ ವಿರೋಧವಾಗಿ ಬೋಧಿಸುತ್ತಲಿರುವಿರಿ.

ಮಾನಸಿಂಹನ ವದನದ ಮೇಲೆ ವಿಷಾದಚಿಹ್ನೆಗಳು ಅಂಕಿತವಾದವು ಆತನು ಸ್ಥಿರದೃಷ್ಟಿಯಿಂದ ಯುವಕನನ್ನು ಕಂಡು, " ಖುಸುರು, ನೀನೇನೋ ಅನ್ಯಾಯವನ್ನು ಎಣಿಸಿದೆ. ನಾನು ಹಿಂದುವು; ನೀನು ಮುಸಲಮಾನನು. ನಾನೂ ಒಬ್ಬ ಪ್ರತಾಪಾನ್ವಿತ ಸ್ವಾಧೀನ ನೃಪತಿಯಲ್ಲವೆ ? ಆದರೆ ಅವ

ಸ್ವಾರ್ಥಸಿದ್ಧಿಗಾಗಿ ನಾನು ನಿನ್ನ ತಂದೆಯ ಕಯ್ಯಲ್ಲಿ ಪ್ರಿಯತಮೆಯಾದ ನನ್ನ ಭಗಿನಿಯನ್ನು ಸಮರ್ಪಿಸಿದೆನೆಂಬುದು ನಿನಗೆ ತಿಳಿದಿರುವುದೆ? ನಾನು ಇಂದು ಸರ್ವಲೋಕನಿಂದಿತನು. ಇದನ್ನು ಯಾರೂ ಬಾಯಿಯಿಂದ ಹೇಳದೆ ಹೋದರೂ, ಅಂತರಂಗದಲ್ಲಿ ಎಲ್ಲರೂ ನನ್ನನ್ನು ದ್ವೇಷಮಾಡುವರು. ಕೌಶಲದಿಂದಲಾದರೂ, ನನ್ನ ಆತಿಥ್ಯವನ್ನು ಅರೂ ಸ್ವೀಕರಿಸುವುದಿಲ್ಲ ನನ್ನೊಡನೆ ಭೋಜನವನ್ನೂ ಮಾಡುವುದಿಲ್ಲ. ಇದೆಲ್ಲವನ್ನೂ ತಿಳಿದು ಅವ ಪ್ರತ್ಯಾಶೆಯ ದೆಶೆಯಿಂದ ನಾನು ಇಷ್ಟು ಯಾತನೆಯನ್ನೂ ಸಹಿಸಿಕೊಂಡಿರುವೆನೆಂಬುದನ್ನು ನಿನಗೆ ತಿಳಿಸುವುದೆ?

ಕುಸರು—ತಾವು ನನ್ನನ್ನು "ನೀನು" ಎಂದೇ ಕರೆಯಿರಿ; ಆದರೂ ನಾನು ತಮ್ಮನ್ನು "ತಾವು" ಎನ್ನುವೆನು. ತಮ್ಮನ್ನು ಕಂಡೊಡನೆ ನಾನು ಸುಸನ್ಮಾನನಾಗಿ ಎದ್ದು ಸ್ವಾಗತ ಮಾಡುವೆನು. ತಾವಾದರೋ ನಮ್ಮ ಪಿತಾಮಹನ ದಕ್ಷಿಣ ಹಸ್ತ. ಐದುಸಾವಿರ ಅಶ್ವಾರೋಹಿಗಳ ದಳಪತಿಗಳು. ಬಾದಷಾಹನ ಯಾವ ಅಂತಃಪುರದಲ್ಲಿ ವನವಿಹಂಗಗಳಿಗೂ ಸಹ ಪ್ರವೇಶವು ನಿಷೇಧವಾಗಿರುವುದೋ ಅಲ್ಲಿ ತಮಗೆ ಪ್ರವೇಶಿಸಲು ಅಧಿಕಾರವಿದೆ. ಇದಕ್ಕಿಂತಲೂ ಹೆಚ್ಚಿನ ಆವ ಬಗೆಯ ಆಸೆಗಳು ತಮ್ಮಲ್ಲಿರಬಹುದು? ಹಿಂದೂ ಮುಸಲಮಾನರು ಇನ್ನೂ ಏಕಾಕಾರಗೊಂಡಿರದೆ ಇರುವುದು ತಮ್ಮಂತಹರ ಅನುಗ್ರಹದ ಫಲ. ಬಾದಷಹನು ಇಚ್ಛೆಸಿದರೆ ಫಿರಂಗಿಗಳ ಪ್ರಹರದಿಂದ ಒಂದೇ ಒಂದು ಮುಹೂರ್ತದೊಳಗಾಗಿ ಜಾತಿಯನ್ನು ನಿರ್ಮೂಲಗೊಳಿಸಲು ಸಮರ್ಥನಾಗಿಯೇ ಇರುವನು.

ಮಾನಸಿಂಹನ ಅಧರಪ್ರಾಂತದಲ್ಲಿ ಕ್ಷೀಣವಾದ ನಗುವು ಪ್ರತಿಭಾಸಿತವಾದುದು. "ಹಿಂದೂಗಳಿಗೆ ಈಗಲೂ ಬಹುಬಲವು ಇದ್ದೇ ಇದೆ. ನೀನು ಬಾಲಕನು. ನಿನಗೆ ಇದನ್ನು ಹೇಗೆತಾನೇ ಬೋಧಿಸಲಿ? ಮೇವಾರದಲ್ಲಿ ನಡೆದ ಭೀಷಣಯುದ್ಧದ ಸ್ಮರಣೆಯು ನಿನಗಿಲ್ಲವೇ? ನಾನೇ ಕ್ಷತ್ರಿಯ ರಾಜರನ್ನು ದಂಡಿಸಿ ದೇಶದಲ್ಲೆಲ್ಲ ಶಾಂತಿಯನ್ನು ನೆಲೆಗೊಳಿಸಿರುವೆನು. ಇಲ್ಲವಾದರೆ ಕಾಶ್ಮೀರರಾಜ್ಯವೇಕೆ? ಇಂದು ಬಾದಷಹನು ದಿಲ್ಲಿಯಲ್ಲಿಯೂ ನಿರ್ವಿಘ್ನದಿಂದ ಖೋಸ್‌ರೋಜದ ವಿಲಾಸದಲ್ಲಿ ಹೊತ್ತು ಕಳೆಯಲು ಬಾರದೆ

ಇರುತ್ತಿದ್ದಿತು. ನೀನು ಇದಕ್ಕೆ ಒಪ್ಪದೇ ಇದ್ದರೆ ಬಾದಷಹನು ಒಪ್ಪುವನು. ಎಂದನು.

ಖುಸರು—ಈ ವೃತ್ತಾಂತಕ್ಕೂ ನನ್ನ ಕಾಶ್ಮೀರಗಮನಕ್ಕೂ ಸಂಬಂಧವೇನಿರಬಹುದು?

ಮಾನಸಿಂಹ—ಇದ್ದೇ ಇದೆ. ಬಾದಷಹನಿಗೆ ಸ್ವಾಸ್ಥ್ಯಭಂಗವುಂಟಾಗಿದೆ. ಈ ಸಮಯದಲ್ಲಿ ನೀನು ವಿದೇಶದಲ್ಲಿರುವುದು ನಿನ್ನ ಕರ್ತವ್ಯವೇ?

ಖುಸರುವು ಕ್ಷಣಕಾಲ ಚಿಂತಿಸಿ, ಅಮೇಲೆ; ಅಹುದು, ಆದರೆ ನಾನು ರಣವಿಜಯಿಯಾಗಿ ಇಲ್ಲಿಗೆ ಮರಳುವಾಗ ಬಾದಷಹನನ್ನು ಕಾಣದಿರುವೆನೆಂದು ಹೇಳಲಾಗುವುದಿಲ್ಲ. ಅಥವಾ ಕಾಣಲಾರದೇ ಹೋದರೆ ಅದು ನನ್ನ ದುರ್ಭಾಗ್ಯವೇ ಆಗುವುದು, ಅಷ್ಟೆ.

ಮಾನಸಿಂಹ—ದೈವಕೃಪೆಯಿಂದ ಹಾಗೆ ಆಗದಿರಲಿ ಹಾಗೆಯೇ ಆದರೆ ರಾಜ್ಯದಲ್ಲಿ ವಿಶೃಂಖಲೆಯುಂಟಾಗಲಾರದೆ?

ಖುಸರು—ಆದಾಗದು. ಪಿತನಂತೂ ಇರುವನು. ಡಿಲ್ಲಿಯ ಸಿಂಹಾಸನದ ಮೇಲೆ ವೀರನಾದ ಅಧೀಶ್ವರನು ಇರುವಲ್ಲಿ ವಿಶೃಂಖಲೆಯುಂಟಾಗುವುದೆಂದರೇನು?

ಮಾನಸಿಂಹ—ನಿಮ್ಮ ಪಿತನು ಡಿಲ್ಲಿಯ ಸಿಂಹಾಸನವನ್ನೇರಿದರೆ ನನಗೆ ಸುಖವೆಲ್ಲಿಯದು? ನಾನು ಸ್ವರಾಜ್ಯವನ್ನು ತ್ಯಜಿಸಿ ಸೇನಾನಾಯಕನಾಗಿ ಕಾಲಯಾಪನೆ ಮಾಡುತ್ತಿರುವುದು ಸಲೀಮನ ಪುರೋಭಿವೃದ್ಧಿಗೆಂದು ಎಣಿಸಿಕೊಂಡಿರುವಿಯೋ?

ಖುಸರುವಿನ ಕಣ್ಣುಗಳು ಕೆಂಪಗಾದುವು. "ನಾನು ಸಾಂಸಾರಿಕ ಸ್ನೇಹವನ್ನೂ ಮಮತೆಯನ್ನೂ ಮರೆಯಬೇಕೆಂದು ಹೇಳುವಿರೇನು? ನನ್ನ ಪಿತನಿಗೆ ವಿರುದ್ಧವಾಗಿ ಅಸ್ತ್ರಧಾರಣೆ ಮಾಡಿ ತಸ್ಕರನಂತೆ ಡಿಲ್ಲಿಯ ಸಿಂಹಾಸನವನ್ನು ಅಪಹರಿಸಲು ನನಗೆ ಆಜ್ಞೆ ಮಾಡುವಿರೇನು?" ಎಂದನು.

ಮಾನಸಿಂಹ—ಸ್ನೇಹಮಮತೆಗಳು ಬಾದಷಹಪುತ್ರನಿಗೆ ಮಾತ್ರ ಉಂಟಾಗಿಲ್ಲ. ಅವೆಲ್ಲವೂ ಸಾಮಾನ್ಯ ಗೃಹಸ್ಥರಿಗೇ ಹೊರತಾಗಿ, ನಮ್ಮ ನಿನ್ನಂತಹರಿಗಲ್ಲ. ಸಾಹಸವಿದ್ದವನನ್ನು ರಾಜಲಕ್ಷ್ಮಿಯು ವರಿಸುವಳು! ಎಂಬೀ ಗಾದೆಯು ಸತ್ಯವೇ ಆಗಿದೆ.

ಖುಸರು—ಮಾನ! ನನ್ನನ್ನು ಕ್ಷಮಿಸಿ! ಈ ಕಾರ್ಯವು ನನ್ನ ಕಯ್ಯಲ್ಲಾಗದು. ಕಿನ್ತು, ಇನ್ನು ಎಂದಾದರೂ ಇಂತಹ ಮಾತುಗಳನ್ನು ನಿಮ್ಮ ಬಾಯಿಯಿಂದ ಕೇಳಿದರೆ ತಾವು ರಾಜದ್ರೋಹಿಗಳೆಂದು ವಿವೇಚನೆ ಮಾಡಬೇಕಾಗುವುದು ಬಾದಷಹ ಪುತ್ರನು ಅವ ರೀತಿಯಲ್ಲಿ ಅಂತಹವನನ್ನು ದಂಡಿಸಲಾಪನೋ, ಹಾಗೆಯೇ ನಾನೂ ಮಾಡಬೇಕಾಗಿ ಬರುವುದು.

ಮಾನಸಿಂಹ—ನಿನ್ನ ತಾಯಿಯ ಮಾತನ್ನಾದರೂ ಕೇಳುವೆಯೋ?

ಖುಸುರುವು ವಿಸ್ಮಿತನಾಗಿ, ಮಾತೆಯೂ ನನ್ನ ಪಿತನಿಗೆ ವಿರುದ್ಧವನ್ನು ಆಚರಿಸಲಾಶಿಸುವಳೋ?

ಮಾನಸಿಂಹ—ಉದ್ದೇಶವಿದ್ದರೆ ಹಾಗೆಯೇ ಮಾಡಬೇಕಾಗುವುದು.

ಖುಸರು—ತಮ್ಮ ಉದ್ದೇಶಕ್ಕೆ ಧಿಕ್ಕಾರವಿರಲಿ! ತಮ್ಮ ಹಿಂದುಗಳ ಆಚಾರವ್ಯವಹಾರಗಳ ಸ್ನೇಹಮಮತೆಗಳಿಗೆಲ್ಲ ಧಿಕ್ಕಾರವಿರಲಿ! ಪತಿಯನ್ನು ಆವ ನಾರಿಯು ದೇವತೆಯೆಂದು ಭಾವಿಸಲರಿಯಳೊ, ಅಂತಹಳ ಜೀವನವೇ ವ್ಯರ್ಥ. ಆಕೆಯು—ದರಿದ್ರ ಕುಟೀರವಾಸಿನಿಯೇ ಆಗಲಿ, ಅಥವಾ ಪ್ರತಾಪಾನ್ವಿತ ಬಾದಷಹನ ಅಂಕಸುಶೋಭಿತೆಯೇ ಆಗಲಿ ನಮ್ಮ ಮಾತೆಯು ಮುಸಲಮಾನ ಕನ್ಯೆಯಾಗಿದ್ದರೆ ಇಂತಹ ವೃತ್ತಾಂತವನ್ನು ನಾನು ಕೇಳಬೇಕಾಗಿರಲಿಲ್ಲ. ಪರಶುರಾಮನು ಪಿತ್ರಾಜ್ಞಾಪಾಲನಕ್ಕಾಗಿ ಮಾತೃ ಶಿರಚ್ಛೇದನವನ್ನು ಮಾಡಿದ್ದನೆಂದು ಮಾತೆಯ ಮುಖದಿಂದಲೇ ತಿಳಿದಿರುವೆನು ಅವಶ್ಯವಿದ್ದರೆ ನಾನೂ ಅಂತೆಯೇ ಮಾಡಬಲ್ಲೆನು.

ಮಾನಸಿಂಹ—ನೀನು ಶುದ್ಧಮೂರ್ಖನೆಂದು ಈಗತಾನೇ ತಿಳಿದುಕೊಂಡೆ!

ಖುಸುರುವಿನ ಹಸ್ತವು ಕತ್ತಿಯ ಕಡೆಗೆ ಹೊರಟಿತು, ರೋಷಕಷಾಯಿತನೇತ್ರಗಳಿಂದ ಮಾನಸಿಂಹನ ಕಡೆಗೆ ದೃಷ್ಟಿನಿಕ್ಷೇಪವನ್ನು ಮಾಡಿ "ಖುಸುರುವು ಮಾತೃಹತ್ಯೆಗೆ ಮೊದಲು ಮಾತುಲಹತ್ಯೆಯನ್ನು ಮಾಡುವನು. ಇನ್ನು ಇದನ್ನು ಸಹಿಸಲಾಗುವುದಿಲ್ಲ" ಎಂದನು.

ಮಾನಸಿಂಹನ ಕಣ್ಣುಗಳಲ್ಲಿ ನೀರು ತುಂಬಿತು ಖುಸುರುವು ವಿಸ್ಮಿತನಾಗಿ, "ಒಳ್ಳೆಯದು, ನಾನು ಬಾದಷಹನಾದರೆ ತಮಗೆ ಉಂಟಾಗಬಹುದಾವ ಸುಖವಾವುದು?" ಎಂದು ಕೇಳಿದನು.

ಮಾನಸಿಂಹ:—ನನ್ನ ಭಗಿನಿಯು ಗರ್ಭಜಾತನು ಬಾದಷಹನಾಗುವುದಕ್ಕಿಂತಲೂ ಹೆಚ್ಚಿನ ಸುಖವು ನನಗೆ ಅವುದು ತಾನೇ ಇರಬಹುದು ?

ಖುಸರು:—ಪಿತನ ಜೀವನಕಾಲದಲ್ಲಿ ಹಾಗೆ ಆಗುವುದೆಂತು ?

ಮಾನಸಿಂಹ—ಅದೊಂದು ದುರಾಶೆ ಅನೇಕ ಮುಸಲಮಾನರು, ನಿನ್ನನ್ನು ಬಾದಷಹನನ್ನಾಗಿಸದೆ ಸಲಿಮುನ ಅನ್ಯಪುತ್ರರಿಗೆ ಆಗುವಂತೆ ಇಚ್ಛೆಗೊಂಡಿರುವರು.

ಖುಸುರು—ಅದೇಕೆ ?

ಮಾನಸಿಂಹ—ನೀನು ಹಿಂದೂ ನಾರಿಯ ಗರ್ಭಜಾತನಾದ್ದರಿಂದ ; ಈಗಲಾದರೋ, ನಾನು ಜೀವಿತನಾಗಿರುವಾಗಲೇ ಕೆಲವರು ಭಯದಿಂದಲೋ ಅಥವಾ ಮೈತ್ರಿಯಿಂದಲೋ ಆ ಪ್ರಸ್ತಾಪವನ್ನೆತ್ತಲು ಹೆದರುವರು. ಆದರೆ, ಆಮೇಲೆ ನಿನ್ನ ಪಿತನ ಅನ್ಯಪುತ್ರರಿಗೆ ಸಿಂಹಾಸನವು ದೊರಕಿದರೆ ನನ್ನ ಆತ್ಮಕ್ಕೆ ಸುಖವೆಲ್ಲಿಯದು? ನನಗೆ ಪರಲೋಕದಲ್ಲಿಯೂ ಕಷ್ಟವುಂಟಾಗುವುದು.

ಖುಸರು—ಪಿತನು ನನ್ನನ್ನು ಅಸೀಮಪ್ರೇಮದಿಂದ ಪ್ರೀತಿಸುತ್ತಿರುವನು ಇಂಥವರಲ್ಲಿ ರಾಜ್ಯವನ್ನು ಕೊಡದಿರುವನೆ ?

ಮಾನಸಿಂಹ—ನಿನಗೆ ರಾಜ್ಯವು ದೊರೆಯದಂತೆ ನಿನ್ನ ಪಿತನ ಅಭಿಪ್ರಾಯವೂ ಇರುವುದನ್ನು ನಾನು ತೋರಿಸಿಕೊಟ್ಟರೆ ? ಇದನ್ನು ಕೇಳಿ ಖುಸರುವು ಸುಮ್ಮನಾದನು ; ಅವನ ಮಾತನ್ನು ಎತ್ತಲಿಲ್ಲ. ಇನ್ನು ಇಲ್ಲಿಗೆ ಈ ಮಾತು ಸಾಕೆಂದು ಮಾನಸಿಂಹನೂ ಎಣಿಸಿದನು

ಖುಸರು—ಅದು ಹೇಗೇ ಇರಲಿ. ಈಗ ನಾನು ಕಾಶ್ಮೀರಕ್ಕೆ ಹೋಗಿಯೇ ಹೋಗುವೆನು

ಮಾನಸಿಂಹ—ಆಗಲಿ; ಕಿನ್ತು, ನಾನು ಹೇಳಿಕಳುಹಿದೊಡನೆ ಕೂಡಲೇ ಬರುವೆಯಾ ?

ಖುಸರು—ತಮ್ಮ ಆದೇಶವು ಶಿರೋಧಾರ್ಯವೇ ಅಹುದು.

ಇಷ್ಟಾದಮೇಲೆ ಹರ್ಷೋತ್ಫುಲ್ಲಚಿತ್ತನಾದ ಮಾನಸಿಂಹನು ಅಲ್ಲಿಂದ ತೆರಳಿದನು. ಖುಸುರುವು ಆತನ ಕಡೆಗೆ ಏಕದೃಷ್ಟಿಯಿಂದ ನೋಡುತಲಿದ್ದನು. ಹೀಗೆ ನೋಡುತಲಿದ್ದಂತೆಯೇ ಮಾನಸಿಂಹನ ಅಶ್ವವು ಅದೃಶ್ಯಗೊಂಡುದು.

ಆರನೆಯ ಪರಿಚ್ಛೇದ.

ಮುನ್ನಾ (ಮೋಹನ) ಬಾಯಿ ವೇಶ್ಯೆ.

ಮುನ್ನಾಬಾಯಿಯ ಹೆಸರನ್ನು ಆ ಸಮಯದಲ್ಲಿ ಡಿಲ್ಲಿಯಲ್ಲಿ ತಿಳಿಯದವರು ವಿರಳ. ಕೋಕಿಲಕಂಠ, ಸುಶಿಕ್ಷಿತೆ, ಸಚ್ಚರಿತೆಯುಳ್ಳವಳು. ಅವಳ ಗಾನವನ್ನು ಕೇಳದವರು ಮೋಹಿತರಾಗದೆ ಇರಲಿಲ್ಲ. ಸಂಗೀತದ ಪರೀಕ್ಷೆಯು ಬಾಲಕರಿಂದಲೂ, ಗಾಯನದ ಪರೀಕ್ಷೆಯು ಅನಭಿಜ್ಞರಿಂದಲೂ ಆಗುವುದು ಸ್ವಾಭಾವಿಕವಾಗಿಯೇ ಇದೆ. ಗಾಯಕರು ಹಾಡಿದರೆ, ರಸಜ್ಞನನ್ನು ಮುಗ್ಧನನ್ನಾಗಿ ಮಾಡಬಹುದು. ಕಿನ್ತು, ಕಂಠವು ಮಧುರವಾಗಿರದಿದ್ದರೆ, ಪಾಮರರೇ ಆದಿಯಾದ ಸಾಧಾರಣರು ಮೋಹಿತರಾಗುವುದಿಲ್ಲ. ಆರ ಗಾನಗಳು ಬಾಲಕರ ಪ್ರೀತಿಯನ್ನು ಸಂಪಾದಿಸಲು ಸಮರ್ಥವಾಗಿರುವುವೊ, ಅಂತಹ ಗಾನಗಳೇ ಪ್ರಶಂಸಾರ್ಹವಾದುವು. ಮುನ್ನಿಗೆ ಇಂತಹ ಸಾಮರ್ಥ್ಯವಿದ್ದಿತು. ನರ್ತನದಲ್ಲಿ ಆಕೆಗೆ ಪ್ರತಿಯಾಗಿ ಆರೂ ಇರಲಿಲ್ಲ. ಬಾದಷಹನು ಅವಳ ನರ್ತನವನ್ನು ನೋಡಿ ಸಂತೃಪ್ತನಾಗಿ ತಿಂಗಳು ತಿಂಗಳಿಗೂ ಒಂದು ಸಹಸ್ರಮುದ್ರೆಗಳನ್ನು ಅವಳಿಗೆ ವೇತನವಾಗಿ ಕೊಡುತಲಿದ್ದನು. ಅದೂ ಇಲ್ಲದೆ ಬಹು ಬೆಲೆಯ ಅನೇಕ ರತ್ನಾಲಂಕಾರಗಳನ್ನೂ ಕೊಡುತ್ತಿದ್ದನು ಅದೂ ಸಾಲದೆಂಬಂತೆ ಸಮ್ರಾಜನ ಅನುಜ್ಞೆಯ ಮೇರೆಗೆ ಸಭಾನರ್ತನವಾದರೆ ಪ್ರತಿರಾತ್ರಿಗೂ ಐದುನೂರು ವರಹಗಳು ಅವಳಿಗೆ ಸಲ್ಲುತ್ತಿದ್ದುವು ಪ್ರತಿವಾರಕ್ಕೂ ಇಂತಹ ಎರಡು ಮೂರು ನರ್ತನಗಳು ಇದ್ದೇ ಇದ್ದುವು. ಹೀಗೆಂದಮೇಲೆ ಅವಳಿಗೆ ಎಷ್ಟು ಐಶ್ವರ್ಯ ಇರಬಹುದು?

ಮೇನಕೆಯೇ ಮುನ್ನಿಯೆಂದು ಅವಳ ಸೌಂದರ್ಯವನ್ನು ಕಂಡವರು ಹೇಳುತಲಿದ್ದರು. ಹಲವು ಧನಿಕರು ಅವಳ ಸೌಂದರ್ಯವನ್ನು ಮೋಹಿಸಿ ಹರ್ಷಸ್ವಾಂತರಾಗಿದ್ದರು. ಶ್ರೀಮಂತರನ್ನು ಫಕೀರರನ್ನಾಗಿ ಮಾಡುವ ಬಗೆ ಅದ್ಭುತಮಾಯೆಯು ಆಕೆಯಲ್ಲಿದ್ದಿತು. ಇಂಥವಳ ಮನೆಯು ರಾಜಪ್ರಾಸಾದದಂತಿರದೆ? ಅಸಂಖ್ಯದಾಸದಾಸಿಯರೂ ಅವಳಿಗೆ ಇರರೆ?

ಅವಳಿಗೆ ಹದಿನಾಲ್ಕು ವತ್ಸರಗಳು ಮುಗಿವುತಿದ್ದಂತೆ ಮೊದಲನೆಯ ಬಾರಿಗೆ ಬಸಿರಾದಳು. ಇನ್ನು ಅವಳ ಸೌಂದರ್ಯವು ಹೇಗೆ ಉಳಿಯುವುದು ? ಇದೊಂದು ಕ್ಷೋಭೆಗೆ ಕಾರಣವಾಯಿತು, ಆದರೆ ಪುತ್ರವತಿಯಾದರೂ ಅವಳ ದೇಹರಲ್ಲಿ ವಿಶೇಷವಾದ ಪರಿವರ್ತನಗಳಾವುವೂ ಉಂಟಾಗಿರಲಿಲ್ಲ. ಆ ಮೇಲೆ ಅವಳು ಗರ್ಭವತಿಯಾಗಲೇ ಇಲ್ಲ.

ತನಗೆ ಕನ್ಯೆಯಾಗುವುಳೆಂದು ಅವಳು ಭಾವಿಸಿದ್ದಳು. ಆದರೆ ವಿಧಿಯು ಬೇರೆ ಸಾಧನೆ ಮಾಡಿದನು. ಕನ್ಯೆಯು ಬದಲಾಗಿ ಪುತ್ರೋತ್ಸವವಾಯಿತು. ಈ ಗಂಡು ಮಗುವಿನಿಂದ ಅವಳು ಮಾಡುವುದೇನು ? ಇದೊಂದು ಮಹದಾಪತ್ತು. ಅವಳಾದರೋ ಎಳೆಯ ಯುವತಿಯಂತೆ ಕಾಣುತಲಿದ್ದಳು. ಆ ಪುತ್ರನು ದೊಡ್ಡವನಾದ ಮೇಲೆ ಅವಳು ಎಷ್ಟೇ ಗದರಿಸಲಿ, "ಅಮ್ಮಾ, ಅಮ್ಮಾ" ಎಂದು ಅವಳ ಕಡೆಗೆ ಓಡಿಯೇ ಬರುವನು. ಆಗ ಪ್ರಿಯರಾದವರಾರಾದರೂ ಸಮೀಪದಲ್ಲಿದ್ದರೆ ಅವಳ ಲಜ್ಜೆಗೆ ಅಂತ್ಯವೇ ತೋರದು; ಅವಳು ಅಧೋವದನೆಯಾಗುವಳು. ಆದರೆ ಮಗನು ತನ್ನವನಲ್ಲವೆಂದು ಅವರೊಡನೆ ಕೌಶಲ್ಯದಿಂದ ತಿಳುಹಿಸುತ್ತಿದ್ದಳು.

ಇಂದು ಆ ಪುತ್ರನಿಗೆ ಇಪ್ಪತ್ತುನಾಲ್ಕು ವರ್ಷಗಳ ಪ್ರಾಯವು ಮೀರಿದೆ. ಅವಳಾದರೊಬ್ಬ ಸುಂದರಿಯಾದ ಕನ್ಯೆಯೊಡನೆ ಇವನಿಗೆ ವಿವಾಹ ಮಾಡಿಸಬೇಕೆಂದು ಅವಳ ಇಚ್ಛೆ. ಆದರೆ ಮಧುವೇ ದೊರೆಯಲಿಲ್ಲ. ಅನ್ಯ ವೇಶ್ಯೆಯರ ಕನ್ಯೆಗಳನ್ನು ಇವಳು ಅಂಗೀಕರಿಸಳು. ಅವನಾದರೊಬ್ಬ ದರಿದ್ರಗೃಹಸ್ಥನ ಸರ್ವನಾಶವನ್ನು ಸಾಧಿಸಬೇಕೆಂಬುದೇ ಅವಳ ಪ್ರಾಣದ ಆಶೆ; ದೇಶವು ಇನ್ನೂ ರಸಾತಲಕ್ಕೆ ಇಳಿದಿಲ್ಲವೆಂಬುದೇ ಅವಳ ದುಃಖ.

ಈಗಲಾದರೋ ಸುಂದರಿಯಾದ ಕಮಲೆಯು ಕೇಳಿಯ ಮುಷ್ಟಿಯಲ್ಲಿ ಅಡಗಿರುವಳು. ಆದರೆ ಮಾಡುವುದೇನು ? ಕಮಲೆಯು ಈ ವಿವಾಹಕ್ಕೆ ಸಮ್ಮತಿಸುವುದಿಲ್ಲ, ಆಕೆಯಾದರೊ, ತನ್ನ ತಾಯಿಯು ಜೀವನವನ್ನು ಕುರಿತು ಚಿನ್ತಿಸಿ, ಚಿನ್ತಿಸಿ ಅಸ್ಥಿರಳಾಗಿಹಳು. ಅಂತಹಳು ಮದುವೆಯ ಸಂಭ್ರಮಕ್ಕೆ ಒಪ್ಪುವಳೆ? ವಿಶೇಷತಃ ವೇಶ್ಯಾಪುತ್ರನೊಡನೆ! ಮುನ್ನೆಗಿಂತಲೂ ಅವಳ ಪುತ್ರನೇ ಸುಂದರನು ಆದರೆ ಅವನು ಎಷ್ಟೇ ಉಪಾಯ ಮಾಡಿದರೂ ಇವಳು

"ನಿನ್ನ ಅನ್ನವನ್ನು ಉಣ್ಣುವುದಕ್ಕಿಂತ ನನಗೆ ಮೃತ್ಯುವೇ ಶ್ರೇಯಸ್ಕರವಾದುದು" ಎಂದು ತಿಳಿಸಿದಳು. ಆಮೇಲೆ ಕಮಲೆಯನ್ನು ಅನಾಹಾರದಿಂದ ಇರಿಸುವೆನೆಂದು ಗದರಿಸಿ ಅವನು ಅವಳನ್ನು ಬೇರೇ ಒಂದು ಕೋಣೆಯಲ್ಲಿ ಬಂದಿಯಾಗಿ ಇರಿಸಿದನು. ಬಂದಿಯಾಗಿದ್ದರೂ ಕಮಲೆಯನ್ನು ಪುತ್ರೀಸಮವಾಗಿ ಪೋಷಿಸಲು ಮನಸ್ಸು ಬಟ್ಟಿದ್ದರೂ, ಕಮಲೆಯು ಮಾತ್ರ ಆವ ತಿಂಡಿಯನ್ನೂ ಮುಟ್ಟಳು. ಆದರೆ ಕ್ರಮೇಣ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ದುರಾಲೋಚನೆಯು ಕಮಲೆಯಲ್ಲಿ ಮೂಡಿಬಂದಿತು. ವೀರಕೇಸರಿಯರಾದ ಕ್ಲೈವ್, ನೆಪೋಲಿಯನ್ ಮುಂತಾದವರು ಆತ್ಮಹತ್ಯೆಯನ್ನು ಮಾಡಲುದ್ಯೋಗಿಸಿದರೂ ಕೊನೆಗೆ ವಿಶೇಷ ಸೌಭಾಗ್ಯಗಳನ್ನು ಅನುಭವಿಸಿದ್ದರು. ಕಮಲೆಯ ಹೃದಯದಲ್ಲೂ ಆತ್ಮಹತ್ಯೆಯ ಇಚ್ಛೆಯು ಪ್ರಬಲಗೊಂಡಿದೆ. ಸ್ವಘಾತವನ್ನು ಮಾಡಿಕೊಳ್ಳುವಳೋ ಏನೋ?

ಏಳನೆಯ ಪರಿಚ್ಛೇದ.

(ಆಪದ್ಬಾಂಧವ.)

ಆ ವೇಶ್ಯೆಯ ಮನೆಯ ಎರಡನೆಯ ಮಹಡಿಯಲ್ಲೊಂದು ಕೊಟಡಿಯಲ್ಲಿ ಕಮಲಕುಮಾರಿಯು ಕುಳಿತು ದೂರದಲ್ಲಿ ಕಾಣುತಲಿದ್ದ ಗೊಡ್ಡಾದ ಬಯಲನ್ನು ನೋಡುತ್ತಿರುವ ಸಮಯದಲ್ಲಿ ಆಪಥದಲ್ಲೇ ಅಶ್ವಾರೋಹಿಯಾದೊಬ್ಬನು ಬರುತಲಿದ್ದನು. ಇಷ್ಟು ಕಾಲವೂ ಈ ಮನೆಯಲ್ಲಿದ್ದ ಕಮಲೆಯು ಆವ ಪುರುಷನ ಮುಖವನ್ನೂ ಕಂಡಿರಲಿಲ್ಲ. ಆದುದರಿಂದ ಈತನನ್ನು ಕಂಡೊಡನೆಯೆ ಅವಳ ಮನಸ್ಸು ಪ್ರಫುಲ್ಲಿತವಾಯಿತು. ಆಗ ಅವಳು, "ಈತನಿಗೆ ಬಿನ್ನವಿಸಿಕೊಂಡರೆ ತನ್ನ ಉದ್ಧಾರವಾಗದೆ? ಇಂತಹ ಸುರೂಪಿಯಾದ ಪುರುಷನ ಹೃದಯವೂ ಕಠಿಣವಾಗಿರಬಹುದೆ? ಎಂದು ಯೋಚಿಸುತ್ತಿರಲು, ಯುವಕನು ಆಕಡೆಗೆ ಬಂದನು. ಸೌಭಾಗ್ಯವಿಶೇಷದಿಂದ ಆವನು ಊರ್ಧ್ವದೃಷ್ಟಿಯಿಂದ ಆ ವಾತಾಯನಪಥದಲ್ಲಿ ತನ್ನ ದೃಷ್ಟಿಯ ಸಂಚಾಲನಮಾಡಿದನು. ಕಮಲೆಯನ್ನು ಕಂಡವನಿಗೆ ಅವಳ ಮೊಗವನ್ನು ಪುನಃ ಪುನಃ ಕಾಣದೆ ಇರಲಾಗು

ವುದೆ ? ಕ್ರಮೇಣ ಅವನು ವಾತಾಯನದ ಕೆಳಗೆ ಬರುತ್ತಲೇ ಬಾಲಿಕೆಯು ಸಜಲನಯನಳಾಗಿ "ನನ್ನನ್ನು ರಕ್ಷಿಸಬೇಕು" ಎಂದು ಕರುಣಕಂಠದಿಂದ ಬೇಡಿಕೊಂಡಳು.

ಕುದುರೆಯು ಮುಂದರಿಯಲಿಲ್ಲ. ಅಲ್ಲಿಯೇ ನಿಂತು ಯುವಕನು "ನೀನಾರು" ಎಂದನು.

ಕಮಲೆ—ದುಃಖಿನಿಯಾದೊರ್ವ ಕನ್ಯೆಯು.

ಯುವಕ—ಇಲ್ಲೇತಕ್ಕೆ ನಿಂತುಕೊಂಡಿರುವೆ ?

ಕಮಲೆ—ಈ ಗೃಹಸ್ವಾಮಿನಿಯು ಪುತ್ರನೊಡನೆ ನನಗೆ ಲಗ್ನಮಾಡಿ ಕೊಡಲು, ಬಲಾತ್ಕರಿಸಿ ಹಿಡಿದುತಂದು, ಬಂದಿಯಲ್ಲಿರಿಸಿರುವರು.

ಯುವಕನು ಈ ಮಾತಿಗೆ ಅವ ಉತ್ತರವನ್ನೂ ಕೊಡದೆ ಕ್ಷಣಾರ್ಧದಲ್ಲೀ ಅತಿವೇಗದಿಂದ ತನ್ನ ಕುದುರೆಯನ್ನು ಅಲ್ಲಿಂದ ಓಡಿಸಿದನು. ಕಮಲೆಯ ಆಸೆಯು ತನ್ನಷ್ಟಕ್ಕೆ ತಾನೇ ಅಡಗಿಹೋಯಿತು.

ರಾತ್ರಿ ಹತ್ತು ಗಳಿಗೆಗಳ ಹೊತ್ತಿನಲ್ಲಿ ವೇಶ್ಯೆಗೆ ದಾಸಿಯು ಸುವಾಸಿತತೈಲವನ್ನು ತೊಡೆಯುತ್ತಲಿದ್ದಾಳೆ. ಅವಳೂ ಅವುದೋ ಒಂದು ರಾಗವನ್ನು ಆಲಾಪನೆಮಾಡುತ್ತಲಿದ್ದಾಳೆ ಅಷ್ಟರಲ್ಲಿ ಅವಳ ಗೃಹದ್ವಾರದೇಶದಲ್ಲಿ ಹತ್ತುಮಂದಿ ಸಶಸ್ತ್ರರಾದ ಅಶ್ವಾರೋಹಿಗಳು ಬಂದಿಳಿದು ಮನೆಯೊಳಕ್ಕೆ ನುಗ್ಗಿದರು ಬ್ಬರೂ ಉಸಿರನ್ನು ಎತ್ತಲಿಲ್ಲ. ನಿರಾತಂಕವಾಗಿ ಮಾಳಿಗೆಯ ಮೇಲಕ್ಕೆ ಹತ್ತಿದರು. "ನಮ್ಮಮನೆಗೆ ಬಂದುದೇತಕ್ಕೆ ?" ಎಂದು ವೇಶ್ಯೆಯು ಕೇಳಿದಳು ಸೈನಿಕರಲ್ಲೊಬ್ಬನು, "ಈ ಮನೆಯಲ್ಲಿ ಯಾರಾದರೂ ಬಂದಿಯಾಗಿ ಇದಾರೆಯೆ ?" ಎಂದು ಕೇಳಿದನು. ಮುನ್ನೆಯು ಪ್ರತ್ಯುತ್ತರಕೊಡಲು ಪ್ರಯತ್ನಮಾಡಿದಳು ಆದರೆ ಆಗಲಿಲ್ಲ. "ಉತ್ತರವಿಲ್ಲವೇಕೆ ?" ಎಂದು ಸೈನಿಕನು ಕೇಳಿದನು.

ವೇಶ್ಯೆ—ನಮ್ಮ ಮನೆಯಲ್ಲಿ ಬಂದಿಯೆಂದರೇನು ?

ಸೈನಿಕ—ನಿನಗೆ ಕೇಳಿಸಲಿಲ್ಲವೆ ? ಅವಳೋ ಬ್ಬಳು ಬಾಲಿಕೆಯು ಇಲ್ಲಿ ಬಂದಿಯಾಗಿ ಇರುವುದಿಲ್ಲವೆ ?

ವೇಶ್ಯೆ—ಇರಬಹುದು.

ಸೈನಿಕ—ಅವಳನ್ನು ಕರೆತರುವೆವಾಗು.

ವೇಶ್ಯೆ—ನಾನೆ ?

ಸೈನಿಕ—ಅವಮಾತನ್ನೂ ಆಡದೆ, ಅವಳನ್ನು ಹೊರಕ್ಕೆ ಕರೆದುತಾ.

ವೇಶ್ಯೆ—ಅವಳನ್ನು ಕರೆದೊಯ್ಯುವಿರಿ ?

ಸೈನಿಕ—ಆ ಮಾತುಗಳನ್ನು ನೀನು ಕೇಳಬೇಕಾದುದಿಲ್ಲ.

ವೇಶ್ಯೆ—ನಾನು ಅನೇಕ

ಅವಳು ಈ ಶಬ್ದಗಳನ್ನು ಆಡುವಷ್ಟರಲ್ಲೇ ಹತ್ತು ಕತ್ತಿಗಳು ಅವವುಗಳ ಕೋಶದಿಂದ ಹೊರಕ್ಕೆ ಬಂದುವು. ದಾಸಿಯು "ಅಯ್ಯೋ ! ಕೆಟ್ಟೆನಲ್ಲಾ ! ಎಂದು ಚೀರುತ್ತ ಎಲ್ಲಿಗೋ ಓಡಿಹೋದಳು. ವೇಶ್ಯೆಯು ಅವರನ್ನು ಕಮಲೆಯಿದ್ದ ಕಕ್ಷಕ್ಕೆ ಕರೆದೊಯ್ದಳು. ಸೈನಿಕರನ್ನು ಕಂಡಾ ಬಾಲಿಕೆಯು ಮೊದಲು ಭಯಗೊಂಡಳು. ಆಮೇಲೆ ಇದೆಲ್ಲವೂ ಆ ಯುವಕನ ಕಾರ್ಯವೆಂದು ತಿಳಿದುಕೊಂಡು, ಅವನನ್ನು ತನ್ನ ಮನಸ್ಸಿನಲ್ಲೇ ಸ್ತುತಿಸತೊಡಗಿದಳು ಬಳಿಕ ಸೈನಿಕನು ಅವಳನ್ನು ತನ್ನ ಜತೆಯಲ್ಲಿ ನಡೆಯೆಂದು ಕೇಳಲು, ಬಾಲಿಕೆಯು ಅಂತೆಯೇ ಮಾಡಿದಳು

ಮನೆಯಹೊರಗೆ ಒಂದು ಶಿಬಿಕೆಯು ಸಿದ್ಧವಾಗಿ ಇರಿಸಲ್ಪಟ್ಟಿದ್ದಿತು ಅದನ್ನು ಅವಳು ಹತ್ತಿದಳು ಯಮುನಾ ತೀರ್ಥದಲ್ಲಿ ಬಾಲಿಕೆಗೆ ಸುಸ್ವಾದುವಾದ ಫಲಮೂಲಾದಿಗಳ ಆಹಾರವನ್ನು ಮಾಡಿಸಿ ಶಿಬಿಕೆಯು ಮುಂದರಿಸಿತು.

ನಾಲ್ಕು ಗಳಿಗೆಗಳ ಹೊತ್ತು ಇನ್ನೂ ಇರುವಾಗಲೇ ಆ ಶಿಬಿಕೆಯು ಒಂದು ಚಿಕ್ಕ ಮನೆಯ ಬಳಿ ಬಂದಿತು. ಆ ಯುವಕನು ಗೃಹದ್ವಾರದಲ್ಲೇ ಸಹಾಸ್ಯವದನನಾಗಿ ನಿಂತುಕೊಂಡು, ಕಮಲೆಯನ್ನು ಶಿಬಿಕೆಯಿಂದ ಕೆಳಗಿಳಿಯಲು ಹೇಳಿದನು. ಕಮಲೆಯು ಇಳಿದೊಡನೆ ಸೈನಿಕರು ಶಿಬಿಕೆಯನ್ನು ಹೊತ್ತುಕೊಂಡು ಎಲ್ಲಿಗೋ ತೆರಳಿದರು

ಯುವಕ ಸೆರೆಮನೆಯಿಂದ ಸರಾಗವಾಗಿ ಬಿಡಿಸಲ್ಪಟ್ಟೆಯಾ ?

ಕಮಲೆಯು ಇದಕ್ಕೆ ಆವ ಉತ್ತರವನ್ನು ತಾನೆ ಕೊಟ್ಟಾಳು ? ಅವಳ ಬಾಯಿಯಿಂದ ಒಂದು ಮಾತೂ ಹೊರಡಲಿಲ್ಲವಾದರೂ ಕಣ್ಣಿನಿಂದ ಬಿಸಿ

ಯಾದ ಅಶ್ರುಗಳಧಾರೆಯು ದರದರನೆ ಸುರಿದಿತು. ಕಮಲೆಗೆ ಇನ್ನಾವ ಭಯವೂ ಇರಲಿಲ್ಲ. ಅವಳು ಭಯದಿಂದ ಅಳಲಿಲ್ಲ. ಏತಕ್ಕೆ ಅತ್ತಳೋ ಅದೂ ಅವಳಿಗೆ ತಿಳಿಯಲಿಲ್ಲ.

ಯುವಕ—ಅಳಬೇಡ. ನಿನ್ನ ಹೆಸರೇನು?

ಕಮಲೆ—ಕಮಲಕುಮಾರಿಯೆಂದು.

ಯುವಕ—ನಿನಗೆ ಸಂಬಂಧಿಗಳು ಯಾರು ಇರುವರು?

ಕಮಲೆ—ತಾಯಿಯೊಬ್ಬಳು ಮಾತ್ರ.

ಯುವಕ—ಆ ದುಷ್ಟರು ನಿನ್ನನ್ನು ಹೇಗೆ ಒಯ್ದಿದ್ದರು?

ಕಮಲೆಯು ಆಗ ಸಮಸ್ತ ಘಟನೆಗಳನ್ನೂ ನಿರೂಪಿಸಿದಳು.

ಯುವಕ—ನಿನ್ನ ಮನೆಗೆ ಇಲ್ಲಿಂದ ಎಷ್ಟು ದೂರವಿದೆ?

ಕಮಲೆ—ಸಮೀಪದಲ್ಲೇ ಇದೆ.

ಯುವಕ—ನಿನಗೆ ದಾರಿ ತಿಳಿಯುವುದೆ? ಒಬ್ಬಳೇ ಹೋಗಬಲ್ಲೆಯಾ?

ಕಮಲೆ—ಅಹುದು, (ಎಂದು ತಲೆಯನ್ನಲ್ಲಾಡಿಸಿದಳು.)

ಯುವಕ—ಹಾಗಿದ್ದರೆ, ನಿಮ್ಮ ತಾಯಿಯಿರುವಲ್ಲಿಗೆ ನಿನ್ನನ್ನು ಬಿಟ್ಟು ಬರುವೆನು

"ಹಾಗೆಯೇ ಆಗಲಿ" ಎಂದು ಕಮಲೆಯು ಅತನೊಡನೆ ಅಲ್ಲಿಂದ ಮುಂದರಿಸಿದಳು.

ಎಂಟನೆಯ ಪರಿಚ್ಛೇದ.

(ನೂತನ ಜನರು)

ಕಮಲೆಯು ಕುಟೀರದ್ವಾರದಲ್ಲಿಗೆ ಬಂದು ಮುಟ್ಟಿದೊಡನೆ ಯುವಕನು "ನಿಮ್ಮ ಮನೆಯು ಇದೇಯೋ?" ಎಂದು ಕೇಳಿದನು. ಕಮಲೆಯು ಅಹುದೆಂದಳು. ಯುವಕನು ಆ ಕುಟೀರದ ಶೋಚನೀಯಾವಸ್ಥೆಯನ್ನು ಕಂಡು ನಿಟ್ಟುಸಿರನ್ನು ಬಿಟ್ಟನು. ಆ ಮೇಲೆ ಅಲ್ಲಿ ಕಮಲೆಯ ಮಾತೆಯು ನೆಲದಮೇಲೆ

ವೈಚಿತ್ರ ಬಿದ್ದುಕೊಂಡಿರುವುದನ್ನು ಕಂಡನು. ಕಮಲೆಯ ಕಂಠಸ್ವರವು ಅವಳ ಕಿವಿಯನ್ನು ಪ್ರವೇಶಿಸುವಷ್ಟರಲ್ಲೇ ಅವಳು ಎಚ್ಚರಗೊಂಡು ತಲೆಯನ್ನೆತ್ತಿ ಸುತ್ತಲೂ ನೋಡಿದಳು. ಇದನ್ನೆಲ್ಲ ತಾನು ಕಾಣುವೆನೆಂಬ ಆಸೆಯು ಅವಳಲ್ಲಿ ಇರಲಿಲ್ಲವೋ ಏನೊ! ಚಕ್ಕನೆದ್ದು, ತನ್ನ ಬಾಲಿಕೆಯನ್ನು ಆಲಿಂಗಿಸಿ "ಕಮಲೆ, ಕಮಲೆ" ಎಂದಳು. ಕಮಲೆಯು "ಅಮ್ಮಾ, ಅಮ್ಮಾ" ಎನ್ನುತ್ತ ತಕ್ಕೈಸುತ್ತಿರುವಷ್ಟರಲ್ಲಿ, ಮುದುಕಿಯು ಮೂರ್ಛೆಬಿದ್ದಳು. ಕಮಲೆಯು ನೀರು ತಟ್ಟಿದಳು. ಯುವಕನು ಗಾಳಬೀಸಿದನು. ಕೆಲವು ಹೊತ್ತಿನನಂತರ ಅವಳಲ್ಲಿ ಜ್ಞಾನಸಂಚಾರವುಂಟಾಯಿತು. ಆ ಮೇಲೆ ಔತ್ಸುಕ್ಯದಿಂದ "ಎಲ್ಲಿ, ನನ್ನ ಕಮಲೆಯೆಲ್ಲಿ?" ಎಂದಳು ಕಮಲೆಯು "ಇಲ್ಲೇ ಇರುವೆನಮ್ಮಾ" ಎಂದು ಉತ್ತರವೀಯಲು, "ಇಂದಿಗೆ ಎರಡು ದಿನಗಳಿಂದ ನೀನು ಎಲ್ಲಿ ಇದ್ದೆ" ಎಂದು ಕೇಳಿದಳು.

ಎಲ್ಲಾ ಘಟನೆಗಳೂ ವಿವರಿಸಲ್ಪಟ್ಟವು ಮತ್ತೀಯುವಕನ ಸಾಹಾಯ್ಯದಿಂದ ಹೇಗೆ ತಾನು ಉದ್ಧಾರಹೊಂದಿದೆನೆಂಬುದು ತಿಳಿಸಲ್ಪಟ್ಟಿತು ವೃದ್ಧೆಯು ಅಳುತ್ತಲೇ ಇದ್ದಳು

ವೃದ್ಧೆ—ಅಪ್ಪಾ, ನಿನ್ನನ್ನು ಕುಳ್ಳಿರಿಸುವೆನೆಂದರೆ, ನಮ್ಮ ಮನೆಯಲ್ಲಿ ಒಂದು ಮಣೆಯಾದರೂ ಇಲ್ಲವಲ್ಲ

ಯುವಕನು ಒಂದು ಹಳೆ ಚಾಪೆಯ ಮೇಲೆ ಕುಳಿತು "ನಾನು ಉಚಿತವಾದ ಆಸನದ ಮೇಲೆಯೇ ಕುಂಡಿಸಿ ಇರುವೆನು" ಎಂದನು.

ವೃದ್ಧೆ—ಇದು ಕುಳಿತಹಾಗಾಯಿತೇ?

ಯುವಕ—ಆದಿರಲಿ' ಇನ್ನುನಾನು ತೆರಳಲೇ? ಎಂದು ಕಮಲೆಯನ್ನು ಕೇಳಿದನು

ಕಮಲೆಯು ಯೋಗ್ಯವಾದ ಉತ್ತರವನ್ನುಕೊಡಬೇಕೆಂದು ಎಷ್ಟೋ ಪ್ರಯತ್ನಮಾಡಿದಳು. ಆದರೆ ಅವಳಿಗೆ ತಕ್ಕ ಶಬ್ದಗಳೇ ದೊರಿಯಲಿಲ್ಲ. ಆದರೆ ಕಡೆಗೆ, "ಅದು ನಿಮ್ಮ ಮನೆಯೋ?" ಎಂದು ಕೇಳಿದಳು. "ಸಮಯಕ್ಕೆ ತಕ್ಕಂತೆ ನಾನು ಅಲ್ಲಲ್ಲಿ ಇರುವೆನು." ಎಂದು ಯುವಕನು ಹೇಳಿದನು

ಕಮಲೆ—ಹಾಗಾದರೆ, ನಾನು ಇನ್ನು ತಮ್ಮನ್ನು ಮುಂದಕ್ಕೆ ಕಾಣು ವೆನೋ ? ಇಲ್ಲವೊ?

ಯುವಕ—ಅದೇಕೆ ? ಹೀಗೆ ಹೇಳುತ್ತೀ ?

ಕಮಲೆ—ತಾವು ಹಾಗಾದರೆ ಆಗಾಗ್ಗೆ ಇತ್ತ ದಯಮಾಡುವಿರೇನು ?

ಯುವಕ—ಬಾರದೆ ಇರಲಾಪೆನೆ ? ಬರುವುದರಲ್ಲಿ ದೋಷವೇನಿದೆ ?

ಕಮಲೆಯು ಶಿರವನ್ನು ಬಾಗಿಸಿ ನಿಂತುಕೊಂಡಳು. ಯುವಕನು ವೃದ್ಧೆಯ ಕಯ್ಯಲ್ಲಿ ಒಂದು ಸ್ವರ್ಣಮುದ್ರೆಯನ್ನಿತ್ತು ಹೊರಡುವೆನೆಂದು ಕೇಳಿಕೊಂಡನು. ತಾಮ್ರದ ಒಂದು ಚಿಕ್ಕಾಸನ್ನೂ ಅಪರೂಪವಾಗಿ ಕಾಣದ ವೃದ್ಧೆಯು ಚಿನ್ನದ ಮೊಹರನ್ನು ಕಂಡು ವಿಸ್ಮಯದಿಂದ ಇದು ಚಿನ್ನದ ಮೊಹರು, ಇದರಿಂದ ನಮಗೆ ಉಪಯೋಗವಿಲ್ಲ. ನಾವು ಇದಕ್ಕೆ ಚಿಲ್ಲರೆ ಮಾಡಲಾರೆವು ಇದನ್ನು ಕಂಡರೆ ನಗರದ ಕೊತವಾಲನು ನಮ್ಮನ್ನು ಕಳ್ಳ ರೆಂದು ಕೈದು ಮಾಡಬಹುದು, ಎನಲು, ಯುವಕನು, " ನಾನು ಕೊತವಾಲ ನಿಗೆ ಮೊದಲೇ ಇದನ್ನು ತಿಳಿಸುವೆನು. ನಾನೂ ರಾಜನ ಬಳಿಯಲೊಬ್ಬ ಪದವೀಧರನು '' ಎಂದು ಹೇಳಲು ಇದನ್ನು ಕೇಳಿ,

ಕಮಲೆ—ಅದೆಂತಹ ಪದವಿ?

ಯುವಕ—ನಾನೊಬ್ಬ ಅಶ್ವಾರೋಹಿಯಾದ ಸೈನಿಕನು.

ಕಮಲೆ—ಆದರೂ, ಆ ಮೊಹರನ್ನು ನಾವು ಪರಿಗ್ರಹಿಸಲಾರೆವು.

ಯುವಕನು ಅದುಕಾರಣ ಆ ಸ್ವರ್ಣಮುದ್ರೆಯನ್ನು ತಾನೇ ಪುನಃ ತೆಗೆದುಕೊಂಡು ಅಲ್ಲಿಂದ ಹೊರಟುಹೋದನು ಅವನಲ್ಲಿ ಮೊಹರು ವಿನಾ ಬೇರೆ ನಾಣ್ಯಗಳಾವುವೂ ಇರಲಿಲ್ಲ. ತಾನು ಹೊರಡುವಾಗ ಪುನಃ ಶೀಘ್ರ ದಲ್ಲಿಯೇ ಬರುವೆನೆಂದು ತಿಳಿಸಿದ್ದರಿಂದ ಕಮಲೆಗೆ ಮನಸ್ತುಷ್ಟಿಯಾದುದು.

ಸೂರ್ಯನು ಅಸ್ತನಾಗುತ್ತಿದಾನೆ. ಪಶ್ಚಿಮಾಕಾಶದಲ್ಲಿ ಕೆಂಪೆಳಕು ಇನ್ನೂ ರಂಜಿಸುತ್ತಿದೆ ಗಗನಮಂಡಲವೆಲ್ಲವೂ ಪಕ್ಷಿಗಣದ ಕಲಕಲರವದಿಂದ ಪೂರ್ಣವಾಗಿದೆ. ದೂರದಲ್ಲಿ ಸೌಧಕಿರೀಟಿಣಿಯಾದ ಡಿಲ್ಲಿಯ ರಾಜಗೃಹ ಗಳ ಮೇಲೆ ಸೂರ್ಯನ ಕಿರಣಗಳು ಕ್ರೀಡಿಸುತಲಿವೆ. ಅಂಧಕಾರವು ಪ್ರಕೃತಿಯನ್ನು ಆವರಿಸಲು ಇನ್ನು ಸ್ವಲ್ಪಕಾಲ ವಿಳಂಬವಿದೆ. ಅಷ್ಟರಲ್ಲಿ

ಹಲವು ಜನಗಳು ಬಗೆಬಗೆಯ ಆಹಾರ್ಯ ವಸ್ತುಗಳನ್ನೂ ವಸನಭೂಷಣ ಗಳನ್ನೂ ವೃದ್ಧೆಯ ಕುಟೀರದಲ್ಲಿಗೆ ತಂದೊಪ್ಪಿಸುವರಾದರು.

ವೃದ್ಧೆ—ಇದನ್ನೆಲ್ಲ ಕಳುಹಿಸಿದವರಾರು ?

ಉತ್ತರ—ಯುವಕನೊಬ್ಬನು.

ವೃದ್ಧೆ—ಅವನಾರು ?

ಉತ್ತರ—ಅದು ನಮಗೆ ತಿಳಿದಿಲ್ಲ.

ವೃದ್ಧೆಯು ಇದೂ ಆ ದಯಾಳುವಾದ ಯುವಕನ ಕೆಲಸವೆಂದು ತಿಳಿದುಕೊಂಡಿದ್ದುದರಿಂದ ಆ ಒಡಿವೆಗಳನ್ನೆಲ್ಲ ಪರಿಗ್ರಹಿಸಿದಳು.

ಅಲ್ಪ ದಿನಗಳಲ್ಲಿಯೇ ವೃದ್ಧೆಯು ಕುಟೀರಪಾರ್ಶ್ವದಲ್ಲಿ ಅವರ ನಿವಾಸಕ್ಕೆಂದೇ ಒಂದು ಸುಂದರವಾದ ಮನೆಯು ನಿರ್ಮಿತವಾಯಿತು. ವೃದ್ಧೆಯು ಶುಭಮುಹೂರ್ತದಲ್ಲಿ ಆ ನೂತನ ಗೃಹವನ್ನು ಪ್ರವೇಶಿಸಿದಳು. ಅನೇಕ ಹೋಮಗಳೂ ಸಂತರ್ಪಣೆಗಳೂ ನಡೆದುವು. ಹಬ್ಬಗಳ ಕಾಲದಲ್ಲಿ ದಕ್ಷಿಣೆಯೇ ದೊರೆವುದಿಲ್ಲವೆಂದು ಪುರೋಹಿತಮಹಾಶಯರು ಮೊದಲು ಅತ್ತಕಡೆ ಬರುತ್ತಿರಲಿಲ್ಲ. ಅವರು ವೃದ್ಧೆಯನ್ನು ಎಷ್ಟೋ ವಿಧವಾಗಿ ತಿರಸ್ಕರಿಸುತ್ತಿದ್ದರು; ಆದರೆ ಈಗ ಆ ಪುರೋಹಿತರನ್ನು ಕರೆಯಬೇಕಾದುದೇ ಇಲ್ಲ,—ಅವರಾಗಿಯೇ ಬಂದರು. ನೆರೆಯವರೂ ಅವಳ ಕುಟೀರವನ್ನು ಪ್ರವೇಶಿಸುತ್ತಲೇ ಇರಲಿಲ್ಲ;—ಈಗ ಆ ಪ್ರಾಂತದ ಸಕಲರೊಡನೆಯೂ ಅವರ ಆತ್ಮೀಯತೆಯು ಬೆಳೆದಿದೆ. ಅವರನ್ನು ಕರೆಯಿಸಿ ಅವರಿಗೆ ಭೋಜನ ಮಾಡಿಸುವುದರಲ್ಲೇ ತಾಯಿ ಮಗಳಿಬ್ಬರೂ ವ್ಯಸ್ತರಾಗಿರುವರು.

ಈ ಸಂಸಾರದಲ್ಲಿ ಸುಖದ ಆಟವನ್ನು ನೋಡಲು ಎಲ್ಲರಿಗೂ ಪ್ರೀತಿಯು ಇದ್ದೇ ಇದೆ ಸುಸಮಯದಲ್ಲಿ ಆಪ್ತರು ಹೆಚ್ಚಾಗಿ, ಮನೆಯು ಅವಿಶಾಲವಾಗುವುದು. ಆದರೆ ದುರ್ದಿನದಲ್ಲಿ ಆರೊಬ್ಬನೂ ಅತ್ತಸುಳಿವುದಿಲ್ಲ. ವಸಂತ ಕಾಲದಲ್ಲಿ ವನೋಪವನಗಳು ನವಪಲ್ಲವಗಳಿಂದ ಪರಿಶೋಭಿತವಾದುವೆಂದರೆ, ಮಲಯಮಾರುತನು ಸುಮಂದಹಿಲ್ಲೋಲದಿಂದ ಪ್ರವಹಿತನಾಗಿ ಜೀವದೇಹದಲ್ಲಿ ತೃಪ್ತಿಯನ್ನುಂಟುಮಾಡಿದನೆಂದರೆ, ಆಗ ಕೋಗಿಲೆಯು ಬಂದು ತನು ಕುಹೂರವದಿಂದ ಮಧುರವಾದ ಗೀತೆಗಳನ್ನು ಹಾಡುವಳು.

ಆದರೆ ನಿಬಿಡವಾದ ಮೇಘಗಳಿಂದ ಆಚ್ಛನ್ನವಾದ ವಿದ್ಯುಲ್ಲತಾಪ್ರಭಾಸಿತ ವರ್ಷರ್ತುವಿನ ದಿನಗಳಲ್ಲಿ ಕೋಗಿಲೆಯ ಸುಳಿವು ಕಾಣಲಾರದು. ಆಗಲದು ನಮ್ಮನ್ನು ಮೊದಲಿನ ಆ ಪಂಚಮುರವದಿಂದ ಮೋಹಗೊಳಿಸುವುದಿಲ್ಲ. ಸೃಷ್ಟಿಯಲ್ಲಿಯು ಈ ವಿಚಿತ್ರಸ್ಥಿತಿಯು ಸಂಸಾರದಲ್ಲಿಯೂ ಪ್ರತಿಬಿಂಬಿತವಾಗಿಯೇ ಇದೆ

ಆದರೆ,—ಈ ಮಂದಿರವನ್ನು ಕಟ್ಟಿಸಿ ಪ್ರತ್ಯಹವೂ ಆಹಾರಧನಗಳ ಸಾಹಾಯ್ಯವನ್ನು ಮಾಡುತ್ತ ಅನಾಥರಾದವರ ದಾರಿದ್ರ್ಯವನ್ನು ಅಳಿಸುತ್ತಿರುವ ಇವನು ಯಾರಿರಬಹುದು ? ಎಂಬೀ ಪ್ರಶ್ನೆಯು ವೃದ್ಧೆಯಲ್ಲಿಯೂ ಇತರರಲ್ಲಿಯೂ ಉದಯಿಸುತ್ತಿದ್ದರೂ, ಅರಿಗೂ ಇದರ ಯಥಾರ್ಥವಾದ ಉತ್ತರವನ್ನು ಕೇಳಲು ಬರಲಿಲ್ಲ. ಆ ಯುವಕನನ್ನು ಒಮ್ಮೆ ಹಲವು ಮಂದಿಗಳು ಎಷ್ಟೋ ವಿಧವಾಗಿ ಬೇಡಿಕೊಂಡಿದ್ದರೂ ನಾಳೆಗೆ ಪರಿಚಯವನ್ನು ಕೊಡುವೆನೆಂದು ಹೇಳಿದನಲ್ಲದೆ, ಮರುದಿನ ಬೆಳಗ್ಗೆ ಪೋಲೀಸು ಕರ್ಮಚಾರಿಗಳನ್ನು ವೇಶ್ಯೆಯ ಮನೆಗೆ ಕಳುಹಿಸಿ ಆ ಯುವಕರನ್ನೆಲ್ಲ ಕೈದಿಗಳನ್ನಾಗಿ ಕೊಂಡೊಯ್ಯುವಂತೆ ಮಾಡಿದನು.

ಯುವಕನು ತಾನು ರಾಜಪೂತ ಜಾತಿಯವನೆಂದೂ, ತನ್ನ ಹೆಸರು ಪ್ರತಾಪಸಿಂಹನೆಂದೂ ಪರಿಚಯವನ್ನಿತ್ತಿದ್ದನು. ವೃದ್ಧೆಯೂ ಕಮಲೆಯೂ ಅದನ್ನೇ ನಂಬಿಕೊಂಡಿದ್ದರು. ಇದನ್ನು ಸುಳ್ಳೆನ್ನುವ ಕಾರಣವೂ ಇರಲಿಲ್ಲ. ವೃದ್ಧೆಯ ಮನೆಗೆ ಬರುವ ಆಹಾರಸಾಮಗ್ರಿಗಳು ಒಂದು ದೊಡ್ಡ ಕುಟುಂಬಕ್ಕೆ ಸಾಕಾಗುವಷ್ಟು ಇದ್ದುವು. ವೃದ್ಧೆಯು ಈ ಜಿನಸುಗಳನ್ನು ಕುರಿತು ಪ್ರತಾಪನನ್ನು ಕೇಳಿದರೆ ತಾನು ಏನನ್ನೂ ಕಳುಹಿಸುವುದಿಲ್ಲವೆಂದು ಅವನು ನಗುತ್ತ ಹೇಳುತಲಿದ್ದನು ಅಂತಹ ಸಮಯದಲ್ಲಿ ಕಮಲೆಯು, ಮತ್ತಾರು ಕಳುಹಿಸುವರು ? ಎಂದು ಕೇಳಿದರೆ ಅದು ನನಗೆ ತಿಳಿಯದೆಂದು ಪ್ರತಾಪನು ಹೇಳುತಲಿದ್ದನು ಪ್ರತಾಪನು ಈಚೀಚೆಗೆ ಪ್ರತ್ಯಹವೂ ಕಮಲೆಯನ್ನು ನೋಡಲು ಬರುವನು. ಕಮಲೆಯೂ ಅತನನ್ನು ಕಂಡು ಪುಲಕಿತೆಯಾಗುವಳು. ವೃದ್ಧೆಯ ಮನಸ್ಸಿನಲ್ಲಿಯೂ ಆನಂದದ ಉದ್ರೇಕವಾಗುತ್ತಿದ್ದಿತು. ಕಮಲೆಯು ಈಗ ಭಿಕ್ಷೆಯೆತ್ತಲು ಹೊರಡುವುದಿಲ್ಲ ಇನ್ನು ಒಡವೆಗಳನ್ನು ಇಡಲು ಅವಳ ಮನೆಯಲ್ಲಿ ಸ್ಥಳವೂ ಇರಲಿಲ್ಲ. ಆದರೆ ಹೆಚ್ಚಿನವು

ಗಳನ್ನು ದರಿದ್ರರಿಗೆ ಪರಿತೋಷವಾಗಿ ಕೊಡುತ್ತಿರುವಳು. ಮೊದಲು ಭಿಕ್ಷಾವೃತ್ತಿಯಲ್ಲೇ ಕಮಲೆಯ ಅನೇಕ ಸಮಯವು ಕಳೆದುಹೋಗುತ್ತಿದ್ದಿತು. ಅದರಿಂದ ತನ್ನ ಮಾತೆಯನ್ನು ಯಥಾರ್ಥವಾಗಿ ಶುಶ್ರೂಷೆಮಾಡಲು ಅವಳಿಗೆ ಆಗುತ್ತಿರಲಿಲ್ಲ. ಆದರೆ ಈಗ ಆ ಕುಂದಕವು ಕಳೆದಿದೆಯಾದುದರಿಂದ ಕಮಲೆಯು ಮಾತೃ ಸೇವೆಯಲ್ಲೇ ಪೂರ್ಣನಿರತೆಯಾಗಿರುವಳು. ಆಕೆಗೆ ಇದೇ ಒಂದು ಮಹಾಸುಖ.

ಒಂಭತ್ತನೆಯ ಪರಿಚ್ಛೇದ.

(ಪರಿವರ್ತನ)

ಈ ಪ್ರಪಂಚದಲ್ಲಿ ಅದೃಷ್ಟದ ದಾಸರಲ್ಲದಿರುವವರಾರು ? ಅದೃಷ್ಟವನ್ನು ಸ್ವೀಕರಿಸಿರಲಿ, ಇಲ್ಲದಿರಲಿ,—ವಿಯತಿಯ ಮೇಲೆ ಸ್ವಾಧಿಕಾರವನ್ನು ನಡೆಯಿಸುವ ಪ್ರತಾಪಶಾಲಿಯಾದವನಾವನಾದರೂ, ಇದಾನೆಯೆ ? ನಾವಾರು ? ನಮ್ಮ ಕ್ಷಮತೆಯಿಂದ ಮಾತ್ರವೇ ಅವ ಕಾರ್ಯವನ್ನಾದರೂ ಸಿದ್ಧಮಾಡಿಕೊಳ್ಳಲಾಪೆವೆ? ಆಗಲಿಕ್ಕಿರುವುದು ತಾನಾಗಿ ಆಗಿಯೇ ಹೋಗುವುದು. ಅದನ್ನು ತಿಳಿಯದ ನಾವು ಅಹಂಕಾರದಿಂದ ಹಲವು ಸಲ ಮತ್ತರಾಗುವೆವು; ಕೆಲವು ಬಾರಿ ದುಃಖದಿಂದಲೂ ಕ್ಷೋಭೆಯಿಂದಲೂ ಘೃಣೆಯಿಂದಲೂ ವ್ಯತಿಕಾಸಮವಾಗುವೆವು ನೆಪೋಲಿಯನ್ ಅದೃಷ್ಟವನ್ನು ಮಾನಿಸುತ್ತಿದ್ದನು ; ಗ್ರಹಗಳ ಪ್ರಸನ್ನತೆಯನ್ನು ಸ್ವೀಕರಿಸುತಲಿದ್ದನು; ಕಿನ್ತು, ಅವುಗಳ ಅಪ್ರಸನ್ನತೆಯ ಕಾಲದಲ್ಲಿ ತನ್ನ ಕಾರ್ಯವನ್ನು ನಡೆಯಿಸಲು ಕೈಗೊಂಡು ಕೃತಕಾರ್ಯನಾಗಲಾರದೆ ಹೋದನು. ಅದೃಷ್ಟವು ಪ್ರಸನ್ನವಾದುದೇ ಆದರೆ ಸಂಸಾರವು ಸುಖಮಯವಾಗುವುದು ; ಅದು ವಿರೂಪಗೊಂಡರೆ ನಮಗೆ ದುಃಖವುಂಟಾಗುವುದು. ಸಸಾಗರಧರಾಧೀಶ್ವರನಾದ ಅವನ ಪದತಲದಲ್ಲಿ ನೂರಾರು ನೃಪತಿಗಳು ನತಶಿರರಾಗಿರುವರೋ, ಅನುಗ್ರಹಪ್ರತ್ಯಾಕಾಂಕ್ಷಿಗಳಾಗಿರುವರೋ, ಅವನ ಅತುಲಸುಖೈಶ್ವರ್ಯವನ್ನು ಕಂಡು ಜಗತ್ತೆಲ್ಲವೂ

ವಿಸ್ತೃತವಾಗಿರುವುದೋ, ಅವನ ಪ್ರಬಲಪ್ರತಾಪದಿಂದ ಲೋಕವೆಲ್ಲ ನಡುಗುತ್ತಲಿರುವುದೋ, ಅಂತಹನ ಭಾಗ್ಯವಿಪರ್ಯಾಸವೂ ಸಂಭವಿಸುವಂತಿದೆ. ಈಶ್ವರಾವತಾರನಾದ ರವಿಕುಲತಿಲಕನಾದ ಸ್ವಯಂ ರಾಮಚಂದ್ರನೇ ತನ್ನ ರಾಜ್ಯಾಭಿಷೇಕದ ದಿನ ವನಚಾರಿಯಾಗಿ ಅಶೇಷಕಷ್ಟಗಳನ್ನನುಭವಿಸಿದನೆಂದ ಮೇಲೆ, ನಮ್ಮಂತಹರ ಪಾಡೇನು ? ಕನಕಮಯಿಯಾದ ರತ್ನಕಿರೀಟನಿಯಾದಾಲಂಕಾಪುರಿಯುದೆಲ್ಲಿ ? ದೇವಗಣಪರಿಸೇವಿತನಾದ ಅಮಿತತೇಜನಾದ ರಾವಣೇಶ್ವರನೆಲ್ಲಿ ? ಅವನ ಲಕ್ಷಸಂಖ್ಯಾಕ ಪುತ್ರರೂ ಅವರೆಲ್ಲಿ ? ಅವಂಶವೇ ಇಂದಿಗೆ ನಿರ್ಮೂಲಗೊಂಡಿದೆ. ಕುರುಪತಿಯಾದ ಧೃತರಾಷ್ಟ್ರನ ಶತಪುತ್ರರೂ ಎಲ್ಲಿ ? ಮತ್ತು "ದಿಲ್ಲೀಶ್ವರೋ ವಾ ಜಗದೀಶ್ವರೋವಾ" ಎಂಬೀ ಆಖ್ಯಾಪ್ರಾಪ್ತನಾದ ಅಕಬರಶಾಹನ ವಂಶಧರರು ಇಂದೆಲ್ಲಿರುವರು ? ಅವನ ಪ್ರಾಸಾದಗಳೆಲ್ಲೆಲ್ಲ ಅನ್ಯಜನಗಳು ಮುಂದೆ ತುಂಬುವರೆಂದು ಮೊದಲು ಅರಾದರೂ ತಿಳಿದುಕೊಂಡಿದ್ದರೇ ? ಆದುದರಿಂದಲೇ, ಧನ, ಮಾನ, ಜನ, ಮರ್ಯಾದೆ ವಿಷಯಸಂಪತ್ತು, ಮುಂತಾದುವುಗಳೆಲ್ಲಾವುದೂ ಅದೃಷ್ಟದ ದೆಸೆಯಿಂದ ಸ್ಥಿರಗೊಂಡಿರುದಿಲ್ಲ. ಅದೃಷ್ಟವು ಎಲ್ಲವನ್ನೂ ತೃಣದಂತೆಣಿಸುವುದು. ಅದು ಪ್ರಸನ್ನವಾದುದೇ ಆದರೆ, ಅಗದ ಕಾರ್ಯವು ಅದಾವುದು ? ನಮ್ಮ ಕಮಲೆಯು ಅದೃಷ್ಟಪ್ರಸನ್ನತೆಯೂ ಅದೊಂದು ಆಶ್ಚರ್ಯವೇ ?

ಕಮಲೆಯು ಈಗಣ ಸ್ಥಿತಿಯಾದರೂ ಅದಾವುದು ? ಅವಳು ಇನ್ನೂ ಅವಿವಾಹಿತೆ, ಇನ್ನೂ ಅತುಲೈಶ್ವರ್ಯಶಾಲಿನಿಯೂ, ಸುಧಾಧವಲಿತಸೌಧಶಿಖರವಿಹಾರಿಣಿಯಾಗಿ ಅವಳಿರುವುದಿಲ್ಲ ಭಿಕ್ಷಾವೃತ್ತಿಯು ಮಾತ್ರ ಕಳೆದು ಹೋಗಿದೆ. ಆರ ಮನಸ್ಸಿನಲ್ಲಿ ಕಪಟತೆಯಿಲ್ಲವೊ, ಆರ ಮಾತೃಭಕ್ತಿಯು ಅತುಲವಾಗಿ ನೆಲೆಗೊಂಡಿರುವುದೊ, ಅಂತಹರಿಗೇ ಅದೃಷ್ಟವು ಪ್ರಸನ್ನವಾಗದೆ ಇದ್ದರೆ ಮತ್ತಾರಿಗೆ ತಾನೆ ಪ್ರಸನ್ನವಾಗಬಹುದು ? ಆದರೆ ಇದೊಂದು ಭಯಭರಿತ ಪ್ರಸಂಗ ! ಸುಧಾಂಶುಕುಲಭೂಷಣನಾದ ಧರ್ಮಾತ್ಮನಾದ ಯುಧಿಷ್ಠಿರನು ಜಗತ್ತಿನ ಯಾವತ್ತು ಜನಗಳಿಗೂ ಆದರ್ಶಸ್ವರೂಪನೇ ಆಗಿದ್ದರೂ ಕೊನೆಗೆ ರಾಜ್ಯಚ್ಯುತನಾಗಿ ವನವಾಸಿಯಾಗಿದ್ದನಲ್ಲ ! ! ಅವನು ದಾಸ್ಯವೃತ್ತಿಯನ್ನವಲಂಬಿಸಿ, ಅಜ್ಞಾತರೂಪದಿಂದ ವಿರಾಟನ ಮನೆಯಲ್ಲಿ ಕಾಲಹರಣ ಮಾಡಬೇಕಾಗಿದ್ದಿತು !! ಹೀಗಾದಮೇಲೆ, ನಮ್ಮ ಕಮಲೆಯು ಆಸೆಯದೆಲ್ಲಿ ?

ಧನವಂತೆಯಾಗಿ, ಪ್ರತಾಪನ ಸಹವಾಸಸುಖದಿಂದ ಇಂದಿಗೆ ಒಂದು ವರ್ಷಕಾಲದಿಂದಲೂ ಕಮಲೆಯು ಸುಖದಿಂದಿರುವಳು. ಇಂತಹ ಅವಳ ಜೀವನದ ವಸಂತಕಾಲದಲ್ಲಿ ಪುನಃ ವರ್ಷಾಕಾಲವು ಬರುವುದೊ ಏನೋ ? ಆ ಬಾಲಿಕೆಯ ಕೋಮಲ ಪ್ರಾಣದ ಸುಖಸ್ವಪ್ನವು ಆ ಸಮಯದಲ್ಲಿ ಭಂಗಗೊಳ್ಳುವುದೊ ಏನೋ ?

ವಸಂತಕಾಲವು ನವೀನವಾಗಿ ಅಭ್ಯುದಯಗೊಂಡಿದೆ. ನವವಿಕಸಿತ ಕೋಮಲಪಲ್ಲವಗಳಿಂದ ಕಮಲಲತೆಗಳು ನೂತನಶೋಭೆಯನ್ನು ತಳೆದಿವೆ. ಚ್ಯುತಕಲಿಕೆಯು ಪುನಃ ಅಂಕುರಿತೆಯಾಗಿ, ಪ್ರಣಯಾಕಾಂಕ್ಷಿಗಳಾದ ಮಧುಕರರೊಡನೆ ಪ್ರೇಮಸಂಭಾಷಣೆಯನ್ನು ಮಾಡುತ್ತಲಿದೆ. ನಾಲ್ಕು ಮಾಸಗಳಿಂದಲೂ ತಮ್ಮ ಗಾಯನೋಪಕರಣಗಳ ಸನ್ನಾಹಮಾಡುತಲಿದ್ದ ಪಿಕಕುಲವು ಇಂದು ಮುಕುಲಿತ ಸಹಕಾರಶಾಖೆಗಳ ಮೇಲೆ ತಮ್ಮ ಕೃಷ್ಣಕಲೇವರವನ್ನು ಅಡಗಿಸಿಕೊಂಡಿದ್ದು, ತಮ್ಮ ಕಂಠಮಾಧುರ್ಯವನ್ನು ಪ್ರದರ್ಶಿಸುತ್ತಲಿವೆ. ಎಲ್ಲಾ ಪಕ್ಷಿಗಳೂ, ಸಂಜೆಯೆಂದಿಲ್ಲ, ಮುಂಜಾನೆಯೆಂತಿಲ್ಲ ಕೇವಲವಾಗಿ "ರಿಹರ್ಸಲಿ'' ನಲ್ಲಿ ವ್ಯಸ್ತಗೊಂಡಿವೆ. ಸಿರಿವಂತರ ಮಾತನ್ನು ಏನೆಂದು ತಿಳಿಸಲಿ ? ಋತುರಾಜನ ಆಗಮನವು ಅವನ ಸಹಚರಿಯಿಂದಲೇ ತಿಳಿದಿದೆ. ಮಲಯಗಿರಿಯು ವ್ಯಜನಕರದಿಂದ ತನ್ನ ದಾಸ್ಯವನ್ನು ಕೈಗೊಂಡಿದೆ; ಅದುದರಿಂದ ಮಂದಹಿಲ್ಲೋಲದಿಂದ ದಕ್ಷಿಣಾನಿಲವು ಜರಜರನೆ ವಹಿಸುತ್ತ ಶರೀರವನ್ನು ಹರ್ಷಗೊಳಿಸುತಲಿದೆ. ಅದೇನು ನಿಮ್ಮ ನಮ್ಮ ಸೇವೆಮಾಡುತಲಿದೆಯೆ ? ಅಲ್ಲ, ಅಲ್ಲ ಸುಧಾಂಶುದೇವನು ಕ್ಷೀಣದೇಹನೇ ಆಗಿದ್ದರೂ ಉದಿಸಿ ಅತ್ತವಿಸಿ ಜ್ಯೋತ್ಸ್ನೆಯನ್ನು ಸೂಸುತ್ತಲೇ ಇದ್ದಾನೆ; ಮಣಿಮುಕ್ತಖಚಿತವಾದ ಸುನೀಲ ಚಂದ್ರಾತಪದಲ್ಲಿ ಉದಯಿಸಿ. ಸುಂದರವಾದ ನೈಶಾಲೋಕದಿಂದ ಮೇದಿನಿಯನ್ನು ಹಾಸ್ಯಮುಖಿಯಾಗಿ ಅಲಂಕರಿಸುವನು. ಇಂತಹ ಕಾಲದಲ್ಲಿ ಉದ್ಯಾನಗಳಲ್ಲೆಲ್ಲ ಅಪೂರ್ವ ಶೋಭೆಯು ಇರುವುದು. ಪುಷ್ಪವತಿಯಾದ ಮಾಧವಿಯು ತನ್ನ ಸೌರಭಭರದ ಗಾಢಾಲಿಂಗನದಿಂದ ಸಹಕಾರನಿಗೆ ಸಹಾಯಕಳಾಗಿಯೇ ಇರುವಳು. ಮಲ್ಲಿಕಾಮಾಲತಿ ಮೊದಲಾದ ಕುಸುಮಕುಲವು ಪ್ರೇಯಸಿಯಾದೊಬ್ಬ ಕನ್ಯೆಯು ಮೃದುನಗುವಿನಿಂದ ಜನಗಳನ್ನು ಮೋಹಿಸುತ್ತಿದೆ. ಕಮಲಿನಿಯು ತನ್ನ ಪ್ರಾಣನಾಥನ ಅತ್ಯಾಯು

ವಿನ ದೆಸೆಯಿಂದುಂಟಾದ ಖೇದದಿಂದ ತನ್ನ ಪ್ರಾಣವನ್ನು ಕಳೆದುಕೊಳ್ಳುವೆ ನೆಂದಿದ್ದಳು; ಆದರೆ ಈಗ ಅವಳಿಗೆ ನವಜೀವನವುಂಟಾಗಿ, ಸರೋವರಕ್ಕೆ ಶೋಭೆಯನ್ನುಂಟು ಮಾಡಿರುವಳು. ಭ್ರಮರಗಳೆಲ್ಲವೂ ಆಕೆಯ ಪಾತಿ ವ್ರತ್ಯವನ್ನು ಹೊಗಳಿ ಹಾಡುತ್ತಲಿವೆ. ಪರಂತು ಕಮಲಿನಿಗೆ ತನ್ನ ಆತ್ಮ ಸ್ತೋತ್ರವನ್ನು ಕೇಳಲು ಮನವೊಪ್ಪದೆ, ತಲೆದೂಗುತ್ತ ಭ್ರಮರಗಳಿಗೆ ನಿದ್ರೆಯನ್ನುಂಟುಮಾಡಿ ಗಳಹುತ್ತಿರುವಳು. ಇಂತಹ ಈ ಸುಖದಿನಗ ಳಲ್ಲಿ ಕಮಲೆಯು ಏನುಮಾಡುತಲಿರುವಳು?

ಇಂದಿಗೆ ನಾಲ್ಕು ದಿನಗಳಿಂದ ಪ್ರತಾಪನು ಕಮಲೆಗೆ ದರ್ಶನ ಕೊಡ ಲಿಲ್ಲ. ಸಂಜೆಯಾಯಿತು, ರಾತ್ರಿಯಾಯಿತು, ರಾತ್ರಿಯೂ ಕಳೆದಿತು,—ಕಿಂತು ಪ್ರತಾಪನ ಸುಳಿವೇ ಇಲ್ಲವದೇನು ? ಕಮಲೆಯು ಉತ್ಕಂಠಿತೆಯಾದಳು। ಅವಳು ಹೀಗೆ ಉತ್ಕಂಠಿತೆಯಾಗಲು ಕಾರಣವೇನು? ಅವಳು ಪ್ರತಾಪ ನನ್ನು ಪ್ರೀತಿಸುತ್ತಿಹಳೆಂದೊ? ಅವಳ ಆ ಸಾಧುಪ್ರಾಣದ ಕೋಮಲ ಗೋಪನವನ್ನು ನಾವು ಮತ್ತೊಬ್ಬರಿಗೆ ತಿಳಿಸುವುದೆಂದರೆ ಅದೆಂತು ?

ಮತ್ತೊಂದು ದಿನವೂ ಕಳೆಯಿತು. ರಾತ್ರಿಕಾಲವು ಇಷ್ಟು ದೀರ್ಘ ವಾದುದೆಂದು ಕಮಲೆಗೆ ಇಷ್ಟು ದಿನಗಳೂ ತಿಳಿದಿರಲಿಲ್ಲ. ನಿದ್ದೆ ಹತ್ತುತ್ತಿದೆ, ಪುನಃ ಭಂಗಗೊಳ್ಳುತ್ತಲಿದೆ,—ಆ ರಾತ್ರಿಯೂ ಅಂತೆಯೇ ಕಳೆದಿತು. ಮರ ದಿನವೂ ಯಥಾಕಾಲದಲ್ಲಿ ಆಹಾರಸಾಮಗ್ರಿಗಳು ಬಂದೊದಗಿದುವು. ಎಂದಿ ನಂತೆ ಆ ಚಾಕರರೊಡನೆ ಪ್ರತಾಪನ ವಿಚಾರವಾದ ಪ್ರಶ್ನೆಗಳೂ ನಡೆದುವು. ಆಶಾಪ್ರದವಾದ ಉತ್ತರವಾವುದೂ ದೊರೆಯಲಿಲ್ಲ. ಅವರು ತಮಗೆ ಪ್ರತಾ ಪನ ಸಂಶಯವಿದೆಯೆಂದೂ ತಿಳಿಸಲಿಲ್ಲ. ಕಮಲೆಯ ಆಶೆಯು ನಿಷ್ಫಲ ವಾದುದು. ಅವಳು ವ್ಯಥೆಯಿಂದ ಹೃದಯದ ಆವೇಗವನ್ನು ಸಂವರಣ ಮಾಡಲಾರದೆ ಹೋದಳು. ಮನೆಯ ಹೊರಕ್ಕೆ ಬಂದು ಅತ್ತಳು.

ಇವರು ಯಾರು? ಇವರು ಪ್ರತಾಪನ ಅನುಚರರಲ್ಲದೆ ಹೋದರೆ ನಮ್ಮನ್ನು ಇಷ್ಟು ಸಹಾನುಭೂತಿಯಿಂದ ಕಾಣುವರೇಕೆ ? ಪ್ರತಾಪನ ಅನು ಚರರೇ ಆದರೆ ಮತ್ತೇಕೆ ? ಅವನ ಸಂವಾದವನ್ನು ಹೇಳಲಾರರು ? ನನ್ನ ಉಷ್ಣಪ್ರಾಣವನ್ನು ಶೀತಲವಾಗಗೊಡುವುದಿಲ್ಲವೇಕೆ ? ಎಂದು ಈ ಬಗೆ ಯಿಂದ ಕಮಲೆಯು ಭಾವಿಸುತ್ತ, ಅಳುತಲಿದ್ದಳು. ಮರುದಿನ ಅವರು

ಪುನಃ ಬಂದೊಡನೆ ಅವರಲ್ಲೊಬ್ಬನೊಡನೆ ಪ್ರತಾಪಸಿಂಹನು ಎಲ್ಲಿರುವನೆಂಬುದು ತಮಗೂ ತಿಳಿದಿಲ್ಲವೆ ? ಎಂದು ಕೇಳಿದಳು.

ವ್ಯಕ್ತಿ:--ಇಲ್ಲ, ನನಗೆ ತಿಳಿದಿಲ್ಲ.

ಕಮಲೆ:—ಹಾಗಾದರೆ ಇಷ್ಟು ಸಾಮಾನುಗಳನ್ನೂ ಕಳುಹಿಸುವವರಾರು ?

ವ್ಯಕ್ತಿ:—ನನಗೆ ಗೊತ್ತಿಲ್ಲ.

ಕಮಲೆ:—ಇದು ಬಂದು ಉತ್ತರವೇ ? ಎಲ್ಲಿಂದ ಈ ಸಾಮಗ್ರಿಗಳು ಬರುವುವು ? ತಿಳಿಸಿ !

ವ್ಯಕ್ತಿ:—ಒಬ್ಬ ಮನುಷ್ಯನು ನನ್ನನ್ನು ಕರೆದು ಇವುಗಳನ್ನು ಇಲ್ಲಿಗೆ ಮುಟ್ಟಿಸಿ ಹೋಗಲು ಅನುಜ್ಞೆಮಾಡುವನು.

ಕಮಲೆ:—ಪ್ರತ್ಯಹವೂ ನೀವೇ ಬರುತ್ತಿರುವುದೇಕೆ ? ಮತ್ತೊಬ್ಬರು ಏಕೆ ಬರಬಾರದು ?

ವ್ಯಕ್ತಿ:—ಅದನ್ನು ನಾನೆಂತು ಹೇಳಲಿ ?

ಕಮಲೆ:—ನಾನು ಈ ವಸ್ತುಗಳನ್ನು ಸ್ವೀಕರಿಸಲಾರೆನಾದರೆ ?

ವ್ಯಕ್ತಿ:—ಅವುಗಳನ್ನು ನಾವು ಇಲ್ಲಿರಿಸಿ ತೆರಳುವೆವು

ಕಮಲೆ:—ಅಂತೂ ನೀವು ಸತ್ಯವನ್ನು ಹೇಳುವುದಿಲ್ಲವಷ್ಟೆ ?

ವ್ಯಕ್ತಿ:—ಉಪಾಯವಿದ್ದರೆ ತಿಳಿಸುತಲಿದ್ದೆ

ಕಮಲೆ:—ಹಾಗೆ ! ತಮಗೆ ನಿಜವಾಗಿಯೂ ಇದು ತಿಳಿಯದೆ ?

ವ್ಯಕ್ತಿ:—ನನಗೆ ಅವುದೂ ತಿಳಿದಿಲ್ಲ, ತಿಳಿದಿದ್ದರೆ ದಿನೇ ದಿನೇ ನೀವು ಈ ಪ್ರಶ್ನೆಯನ್ನು ಕೇಳುವಂತಹ ಕಷ್ಟವಿರಲಿಲ್ಲ

ಕಮಲೆಯು ವಿಷಣ್ಣವದನೆಯಾದಳು ಕಮಲೆಯ ಮುಖದಲ್ಲಿ ಈಗ ಆ ಹಿಂದಣ ನಗುವು ಇಲ್ಲ. ಅವಳ ಕಣ್ಣುಗಳಲ್ಲಿ ಆವ ಸೌಂದರ್ಯವೂ ಚಕಚಕಿಸುವುದಿಲ್ಲ. ಕಮಲೆಯ ಮುಖ ಚಂದ್ರನು ಪ್ರಭಾಹೀನನಾಗಿರುವನು.

ಹೀಗೆ ಒಂದು ಮಾಸವು ಕಳೆದು ಹೋಯಿತು, ಕಮಲೆಯು ಈ ಜೀವನದಲ್ಲಿ ಇಂತಹ ಎಷ್ಟೋ ತಿಂಗಳುಗಳನ್ನು ಕಳೆದಿದ್ದರೂ ಇಷ್ಟು

ದೀರ್ಘಸ್ಥಾಯಿಯಾದ ಮಾಸವನ್ನು ಅವಳು ಇಂದಿನ ತನಕ ಕಂಡಿರಲಿಲ್ಲ ; ಅವಳ ಮಾನಸಿಕಯಾತನೆಯು ದಿನೇ ದಿನೇ ವರ್ಧಿತವಾಗುತ್ತ ಬಂದಿತು.

ವೃದ್ಧೆಯಾದ ಮಾತೆಯು ಈಕೆಯ ಮನೋಭಾವವನ್ನರಿತಳು. ಮತ್ತೊಂದುದಿನ—"ಕಮಲೆ, ನೀನು ಈ ರೀತಿಯಲ್ಲಿ ಮ್ಲಾನಳಾಗಿರುವುದೇಕೆ ?" ಎಂದು ಕೇಳಿದಳು. ಕಮಲೆಯು "ಇಲ್ಲ, ಇಲ್ಲ, ಏನೂ ಇಲ್ಲ." ಎಂದು ಸುಮ್ಮನೆ ಉತ್ತರವನ್ನಿತ್ತಳು. ಮತ್ತು ಅವಳು ಅಲ್ಲಿ ಇರಲಾರದೆ ಹೊರಕ್ಕೆ ನಡೆದಳು. ಅವಳ ಕಂಬನಿಯು ಅವಳ ವಕ್ಷಸ್ಥಲವನ್ನು ನೆನಸಿ ಬಿಟ್ಟಿತು. ಪ್ರೇಮದ ಪರಿಣಾಮವು ಹೀಗೆಯೇ ಅಲ್ಲವೆ ?

ಹತ್ತನೆಯ ಪರಿಚ್ಛೇದ.

(ಸಮ್ಮಿಲನ)

ಕಮಲೆಯ ಮನೆಯು ಡಿಲ್ಲಿಯಲ್ಲಿಯ ಪ್ರಸಿದ್ಧವಾದ ಕುತುಬ ಮಿನಾರದ ಸಮೀಪದಲ್ಲಿಯೇ ಇದ್ದಿತು. ಕಮಲೆಯು ಪ್ರತ್ಯಹವೂ ಸಂಧ್ಯಾಕಾಲದಲ್ಲಿ ಆ ವಿಶಾಲಸ್ತಂಭದ ಬಳಿಯಲ್ಲಿ ವಿಹಾರಮಾಡುತಲಿದ್ದಳು. ಅವಳಿಗೆ ಸಮವಯಸ್ಕಳಾದೊಬ್ಬ ನೆರೆಮನೆಯ ಕನ್ಯೆಯು ಆವಾಗಲೂ ಅವಳ ಜತೆಯಲ್ಲೇ ಇರುತ್ತಲಿದ್ದಳು. ಕುತುಬಮಿನಾರದಲ್ಲಿ ಈಕೆಯ ಮನಸ್ಸನ್ನು ಶಾಂತಗೊಳಿಸುವಂತಹುದಾವುದೂ ಇಲ್ಲ. ತಥಾಪಿ, ಕಮಲೆಯು ಅಲ್ಲಿಗೆ ಹೋಗುತ್ತಲೇ ಇದ್ದಳು. ಆ ಸ್ತಂಭದ ಗಗನಸ್ಪರ್ಶಿಯಾದ ಶಿರವನ್ನು ಸ್ಥಿರದೃಷ್ಟಿಯಿಂದ ನೋಡುತ್ತ ಏನನ್ನೋ ಭಾವಿಸುತ್ತಲೇ ಇದ್ದಳು. ಅದೇ ಭಾವನೆ—ಪ್ರತಾಪಸಿಂಹನ—ಯಾತನೆ—ವಿರಹ !

ಒಂದು ದಿನ ಕಮಲೆಯು ಮಿನಾರದ ಸಮೀಪದಲ್ಲೇ ಒಂದು ಶಿಲಾಪೀಠದಮೇಲೆ ಕುಳಿತುಕೊಂಡಿದ್ದಾಗ ಆವನೋ ಒಬ್ಬನು ಹಿಂದಣಿಂದ ಬಂದು ಆಕೆಯ ಎರಡು ಕಣ್ಣುಗಳನ್ನೂ ತನ್ನ ಕಯ್ಗಳಿಂದ ಮುಚ್ಚಿದನು.

ಕಮಲೆ:—ಛೆ ! ಸುಡುಮೋರೆಯವಳೇ ಬಿಡು, ಬಿಡು !

ಯುವಕನು ಕಯ್ಗಳನ್ನು ಹಿಂದಕ್ಕೆಳೆದು ನಗುತ್ತಾ, "ಸುಭವೋರೆ ಯುವಕನಲ್ಲ. ಸುಭುವೋಹಿಯುವನು." ಎಂದು ಅಂದನು. ಕಮಲೆಯು ಚಮುಕಿತಳಾಗಿ, "ತಾವೇ ?" ಎಂದಳು

ಯುವಕ:—ಪುನಃ ತಾವೇ ಎನ್ನಬೇಡ. ಹಾಗೆ ಹೇಳಿದರೆ ನಿನ್ನೊಡನೆ ಇನ್ನು ಮಾತನಾಡಲಾರೆನು

ಕಮಲೆಗೆ ಸ್ವರ್ಗವು ತಾನಾಗಿ ಅಂಗಯ್ಯಲ್ಲಿ ದೊರಕಿದಂತಾದದು. ಅವಳ ಹೃದಯವು ವ್ಯತಿಕ್ರಮಯವಾದ ಈ ಮೇದಿನಿಯನ್ನು ತ್ಯಜಿಸಿ ಸ್ವರ್ಗದ ವಿಮಲಾಂತರಾಳದಲ್ಲಿ ವಿಭಾಸಿತವಾದಂತಾದುದು. ಆಮೇಲೆ "ಒಳ್ಳೆಯದು, ನೀನು" ಎಂದಳು.

ಯುವಕ:—ನಾನಾರು ?

ಕಮಲೆಯು ಅಧೋವದನಳಾಗಿ ಏನನ್ನೂ ಆಡಲಿಲ್ಲ ಯುವಕನು ಅವಳ ಕಯ್ಗಳನ್ನು ಹಿಡಿದುಕೊಂಡು, "ನಾನಾರೆಂಬುದನ್ನು ಹೇಳು" ಎಂದನು.

ಕಮಲೆ:—ಹೇಳುವುದಿಲ್ಲ.

ಯುವಕ:—ಹಾಗಾದರೆ ನಾನು ತೆರಳಲೆ ?

ಕಮಲೆ:—ಪುನಃ ತೆರಳುವೆಯಾ?

ಯುವಕ:—ಹಾಗಾದರೆ ನಾನಾರೆಂದು ತಿಳಿಸು

ಕಮಲೆ:—ಪ್ರತಾಪನು,-ನನ್ನ ಪ್ರತಾಪಸಿಂಹನು.

ಯುವಕ:—ನೀನು ನನ್ನ ಹೃದಯದ ಕಮಲೆಯು

ಕಮಲೆ:—ನಾನು ಇಲ್ಲಿರುವೆನೆಂದು ನೀನು ಹೇಗೆ ತಾನೆ ತಿಳಿದುಕೊಂಡೆ ?

ಯುವಕ:—ಪ್ರಾಣವು ಆರನ್ನು ಆಶಿಸಿಕೊಂಡಿರುವುದೋ ಅವರು ಎಲ್ಲಿರುವರೆಂಬುದನ್ನೂ ಅದು ತಿಳಿದುಕೊಂಡೇ ಇರುವುದು.

ಕಮಲೆ:—ಇನ್ನು ನಿನ್ನೊಡನೆ ನಾನು ಅವಮಾತನ್ನೂ ಆಡಲಾರೆ.

ಯುವಕ:—ಅದೇಕೆ?

ಕಮಲೆ:—ಇಷ್ಟುಕಾಲವೂ ನೀನು ಎಲ್ಲಿಗೆ ಹೋಗಿದ್ದೆ ?

ಯುವಕ:—ಅವುದೊ ಒಂದು ವಿಶೇಷಕಾರ್ಯದಿಂದ ನಾನು ದೇಶಾಂತರಕ್ಕೆ ತೆರಳಿದ್ದೆನು.

ಕಮಲೆ:—ಹಾಗಾದರೆ ನಾನು ನಿನ್ನನ್ನು ಪ್ರೀತಿಸಿ ಫಲವೇನು ?

ಯುವಕ:—ಅದೇಕೆ ?

ಕಮಲೆ:-ಪುನಃ ನಾಳೆಯೊ ಇಂದೊ ನನ್ನನ್ನು ಕೊರಗಿಸಿ ಎತ್ತಲೋ ತೆರಳುವೆಯಲ್ಲವೆ ?

ಯುವಕ:—ನನಗಾಗಿ ನೀನು ಅತ್ತೆಯೊ ?

ಕಮಲೆ:—ಅಳಲಿಲ್ಲವೇ ?

ಯುವಕ:—ನಾನೂ ನಿನಗಾಗಿ ಮರುಗುತ್ತಿರುವೆನು.

ಕಮಲೆ:—ಕಳೆದ ಒಂದು ಮಾಸದಿಂದ ನಾನು ಅನುಭವಿಸಿದ ಯಾತನೆಗಳನ್ನು ನೀನು ತಿಳಿದುಕೊಳ್ಳುವುದು ಹೇಗೆ ?

ಯುವಕ:—ಅಂತಹ ಯಾತನೆಗಳು ಅತಿ ಸುಖಕರವಾದಾವು.

ಕಮಲೆ:—ಆದರೂ ನಿನ್ನನ್ನು ಕಂಡೊಡನೆಯೆ ಅವುಗಳೆಲ್ಲವನ್ನೂ ಮರೆತೆನು.

ಯುವಕ:—ಹಾಗಾದರೆ ಸತ್ಯವಾಗಿಯೂ ನೀನು ನನ್ನನ್ನು ಪ್ರೀತಿಸಿರುವೆಯೊ ?

ಕಮಲೆ:—ಮರಳಿ ಮರಳಿ ಅದನ್ನೇ ಕೇಳುವೆಯೇಕೆ ?

ಜನರು ಅವುದೊಂದು ಪುಣ್ಯದ ಕೆಲಸವನ್ನು ಮಾಡಿದರೂ ಅದನ್ನು ಬಾಯಿಯಿಂದ ಹೇಳುವುದಿಲ್ಲ. ಅಂತೆಯೇ ಈ ವಿಷಯವಾಗಿ ನಾನೂ ಹೇಳಲಾರೆನು,

ಯುವಕ:—ಇರಲಿ, ನಾನೊಂದು ಮಾತನ್ನು ಹೇಳುವೆನು.

ಕಮಲೆ:—ಅದೇನು ?

ಯುವಕ:—ನಾನು ಎಂತಹ ದೀನಹೀನನಾದರೂ ನನ್ನನ್ನು ಪ್ರೀತಿಸುವೆಯ ?

ಕಮಲೆ—ನಿಶ್ಚಯವಾಗಿಯೂ ಅಹುದು.

ಯುವಕ—ನನ್ನ ಅವಸ್ಥೆಯನ್ನು ನೆಟ್ಟಗೆ ತಿಳಿದುಕೊಳ್ಳುವುದು ನಿನಗ ಅಗತ್ಯ. ನನ್ನಲ್ಲಿ ಅನೇಕ ಪರಿವರ್ತನೆಗಳುಂಟಾಗಿವೆ. ನನಲ್ಲಿ ಮೊದಲಿದ್ದ ಆ ಪದವಿಯು ಈಗ ಇಲ್ಲ.

ಕಮಲೆ—ಅಷ್ಟೇಯೋ ?

ಯುವಕ—ಅದೊಂದು ಸಹಜವಾದ ಮಾತೆ? ನನ್ನ ದಿನಗಳನ್ನು ಇನ್ನು ಕಳೆಯುವುದು ಪ್ರಯಾಸಕರವಾಗಿದೆ.

ಕಮಲೆ—ಸಾಮಾನ್ಯ ಸೈನಿಕನಾಗಿ ಇರುವುದೊಂದೇ ನಿನಗೆ ಏಕ ಮಾತ್ರ ಅವಲಂಬನವೆಂದು ನಾನು ಎಂದೆಂದಿಗೂ ವಿಶ್ವಾಸದಿಂದ ನಂಬಲಾರೆ.

ಯುವಕ—ಅದು ಹೇಗೆ ?

ಕಮಲೆ—ಈ ಸೌಂದರ್ಯದ ಈ ಮುಖಶ್ರೀಯುಳ್ಳ ಅವನನ್ನೂ ಸೈನಿಕಕರ್ಮಚಾರಿಯರ ಮಧ್ಯದಲ್ಲಿ ನಾನು ಎಂದೂ ಕಂಡದಿಲ್ಲ

ಯುವಕ—ಹಾಗಾದರೆ ನಾನೇನು ರಾಜಕುಮಾರನೆಂದು ಭಾವಿಸಿಕೊಂಡಿದ್ದೆಯೊ ?

ಕಮಲೆ:—ನನ್ನ ಅಭಿಪ್ರಾಯವೂ ಹಾಗೆಯೇ ಆಗಿದ್ದಿತು

ಯುವಕ:—ಆದ ದರಿಂದಲೇ ನನ್ನನ್ನು ಪ್ರೀತಿಸಿದೆಯೊ, ಏನು ?

ಕಮಲೆಯು ಸಿಟ್ಟಾಗಳು.

ಯುವಕ—ಕಮಲೆ, ಇನ್ನಾದರೂ ವಿಚಾರಿಸು. ನಿನ್ನ ಈ ಅತುಲ ರೂಪವನ್ನೂ ಈ ಸೌಂದರ್ಯವನ್ನೂ ಎಷ್ಟೋ ಕ್ಷತ್ರಿಯ ರಾಜಪುತ್ರರು ಮೋಹಿಸಿ ನಿನ್ನನ್ನು ರಾಣಿಯಾಗಿ ಮಾಡಿಕೊಳ್ಳಬಹುದು. ಅಂತಹ ಸುಖವನ್ನು ತ್ಯಜಿಸಿ ನನ್ನಂತಹ ದರಿದ್ರ ರಾಜಕುಮಾರನನ್ನು ನೀನೇತಕ್ಕೆ ಪ್ರೀತಿಸುವೆ ?

ಕಮಲೆ—ಅದರಿಂದ ನನಗುಂಟಾಗುವ ಬಾಧಕವೇನು ?

ಯುವಕ—ಬಾಧಕವು ಇದ್ದೇ ಇದೆ. ನಿನ್ನನ್ನು ಸುಖದಲ್ಲಿ ಇರಿಸಲಾರೆನಾದರೆ ನಮ್ಮ ಈ ಪ್ರೇಮದಿಂದ ಆವ ಫಲವೂ ಇಲ್ಲ. ನೀನಾದರೊ,

ಬಾಲ್ಯದಿಂದಲೂ ಅನೇಕ ಕಷ್ಟಗಳನ್ನು ಅನುಭವಿಸಿದವಳು. ನನ್ನನ್ನು ಮದುವೆಯಾಗಿ ನಿನ್ನ ಭವಿಷ್ಯ ಜೀವನವನ್ನೂ ದುಃಖಮಯವನ್ನಾಗಿಸಲು ಒಪ್ಪಿಕೊಳ್ಳಬೇಡ.

ಕಮಲೆ—ಇದರ ತಾತ್ಪರ್ಯವನ್ನು ತಿಳಿಯಲಾರೆನು.

ಯುವಕ—ಅದೇಕೆ ?

ಕಮಲೆ—ನನ್ನ ಹಣೆಯಲ್ಲಿ ಸುಖದ ಅನುಭವವು ಇಲ್ಲದೆ ಹೋದರೆ ನನ್ನನ್ನು ಆರಾದರೂ ಸುಖದಿಂದ ಇರಿಸಲಾಪರೆ ?

ಯುವಕ—ಆಗದೆ ಹೋದರೂ ಪ್ರಯತ್ನಗಳನ್ನಾದರೂ ಮಾಡ ಬಹುದು

ಕಮಲೆ—ನಾನು ದೇವರಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುವಂತಹ ಅಪಕಾರವನ್ನು ನನಗೆ ಮಾಡಲುಪಕ್ರಮಿಸಬೇಡ

ಯುವಕ—ನಾನು ಅಂತಹ ಅವಮಾನವನ್ನೂ ಆಡಲಿಲ್ಲ

ಕಮಲೆ—ಹಾಗಾದರೆ ಅದೇನನ್ನು ನುಡಿಯುಗೆ ?

ಯುವಕ—ನನ್ನ ಸ್ವಂತ ಭವಿಷ್ಯವನ್ನು ಚಿನ್ತಿಸಿ ಹೇಳುತಲಿದೇನೆ.

ಕಮಲೆ—ನಾನು ಇಷ್ಟುಕಾಲವೂ ಭಾವಿಸಿಕೊಂಡಿದ್ದು ಅದನ್ನು ನಿರ್ಧರಿಸಿಕೊಂಡಿರುವೆನು.

ಯುವಕ—ಏನೆಂದು ನಿರ್ಧರಿಸಿಕೊಂಡಿರುವೆ ?

ಕಮಲೆ—ನನಗೆ ನೀನೊಬ್ಬನಲ್ಲದೆ ಇನ್ನಾರೂ ಆವುದೂ ಬೇಡ. ನಾನು ಸಹಾಯ ಸಂಪದ ಮಾನ ಯುಕ ಮುಂತಾದುವುಗಳ ಪ್ರಾರ್ಥಿನಿಯಾಗಿಲ್ಲ. ನನ್ನ ಬಾಲ್ಯದ ದುರವಸ್ಥೆಗಿಂತಲೂ ಅವ ದುರ್ದಶೆಯು ತಾನೆಇದ್ದೀತು

ಯುವಕ—ಕಥಾಪಿ, ನಿನಗೊಂದು ಕುಟೀರವಾದರೂ ಇದ್ದೀತು.

ಕಮಲೆಯ ಕಣ್ಣುಗಳು ನೀರಿನಿಂದ ತುಂಬಿದುವು ಪ್ರತಾಪನೆ, ನಿನಗೆ ನನ್ನ ಹೃದಯದ ಪರಿಚಯವು ಇನ್ನೂ ಉಂಟಾಗಿಲ್ಲ. ನಿನ್ನನ್ನು ವಿವಾಹ ಮಾಡಿಕೊಂಡ ಮೇಲೆ ಯದ್ಯಪಿ ನಾನು ಅತಿ ಹೀನಾವಸ್ಥೆಯಿಂದ ಪರಪದ

ಸೇವೆಯು ದಾಸೀವೃತ್ತಿಯನ್ನು ಅವಲಂಬನ ಮಾಡಿಯೂ ಉದರಾನ್ನವನ್ನು ಸಂಗ್ರಹಿಸಬೇಕಾಗಿ ಬಂದರೆ-ಪರಾನ್ನದಿಂದ ನಾನು ಜೀವನಧಾರಣೆಯನ್ನು ಮಾಡಿಕೊಳ್ಳಬೇಕಾಗಿ ಬಂದರೆ-ತರುತಲದಲ್ಲಿ ನಿವಾಸವೂ, ಅನಂತವ್ಯಾಪಿ ನಕ್ಷತ್ರಖಚಿತ ಆಕಾಶವೇ ನನ್ನ ಏಕಮಾತ್ರ ಆಶ್ರಯಸ್ಥಾನವಾಗಿದ್ದರೂ ನಿನ್ನ ಸಹವಾಸದಿಂದಲೇ ನನಗೆಲ್ಲವೂ ಸುಖಮಯವಾಗಿ ತೋರುವುದು. ನಿನ್ನ ಮೊಗದ ನಗುವಿನಿಂದ ನನ್ನ ಯಾತನೆಗಳನ್ನೆಲ್ಲ ಮರೆವೆನು. ಆದರೆ ಪ್ರತಾಪನೆ, ನೀನು ನನ್ನನ್ನು ಪ್ರೀತಿಸುವೆನೆಂದು ಒಮ್ಮೆ ನಿಶ್ಚಯವಾಗಿ ಹೇಳು '' ಎಂದು ಕಾಲ್ಗೆರಗಿದಳು.

ಪ್ರತಾಪನು ಸಸ್ನೇಹದಿಂದ ಕಮಲೆಯ ಆ ಲಜ್ಜಾಯುಕ್ತವಾದ ಮುಖವನ್ನು ಚುಂಬಿಸಿ ನಾನು ನಿನ್ನನ್ನು ಪ್ರೀತಿಸುವೆನೆಂದು ನನ್ನನ್ನು ಕೇಳಿ ತಿಳಿಯಬೇಕಾದುದೇನೂ ಇಲ್ಲ. ''ಕಮಲೆ, ನನ್ನ ಮೇಲೆ ವಿಶ್ವಾಸವೇ ಇಲ್ಲವೆ ?'' ಎಂದನು.

ಕಮಲೆಯು ಲಜ್ಜಿತೆಯಾಗಿ ಮೃದುನಗೆಯಿಂದ '' ಇದ್ದೇ ಇದೆ. '' ಎಂದಳು.

ಹನ್ನೊಂದನೆಯ ಪರಿಚ್ಛೇದ.

[ಸುಖಸಾಗರ]

ಇಂತಹ ಸುಖದಲ್ಲೀ ಕಮಲೆಯು ಎರಡುವರ್ಷಕಾಲವನ್ನು ಕಳೆದಳು. ಕಮಲಕುಮಾರಿಯು ಮಹಾಸುಖದಿಂದ, ಮಹಾನಂದದಿಂದ, ಪ್ರತಾಪದರ್ಶನಸುಖಭೋಗದಿಂದ ಎರಡುಸಂವತ್ಸರಗಳು ದಾಟಿಹೋದುದನ್ನು ತಿಳಿಯದಾದಳು. ಎರಡುಬಾರಿ ನಗುವೇ ಅವತರಿಸಿದಂತೆ ಶಾರದೀಯಜ್ಯೋತ್ಸ್ನೆಯು ಬಂದುಹೋದುದು. ಎರಡೂ ವಸಂತಕಾಲಗಳ ಮೃದುವಾದ ಮಾರುತವು ಅವಳ ಕೋಮಲದೇಹವನ್ನು ಪರಿಪುಷ್ಟವಾಗಿಮಾಡಿತು. ಆದರೆ ಇಂದಿಗೆ ಆ ಎರಡುವತ್ಸರಗಳು ಕಳೆದಿವೆ. ಈಗ ಇನ್ನು ಕಮಲೆಯು ಬಾಲಿಕೆಯಲ್ಲ. ಪ್ರಾಯವು ಹದಿನಾಲ್ಕುವರುಷಗಳನ್ನು ಮೀರಿರುತ್ತದೆ. ಯೌವನದ ಮನೋಮುಗ್ಧಕರವಾದ ಮೋಹಿನೀ ಕಾಂತಿಯು ಅವಳ ಅಂಗಾಂಗಗಳಿಂದ ಹೊರಡುತಲಿದೆ. ಪುರಾತನವಾದುದರಲ್ಲಿ ನೂತನವು ಸಮಾವೇಶಗೊಂಡಿದೆ. ಕಮಲೆಯ ಜೀವನಪಕ್ಷಗಳಲ್ಲಿ ಇಂದೀಗಲೇ ಮಧುರವಾದ ಫಲಗುಣವಾಸ

ಪಾಠಕಮಹಾಶಯರು ! ಇದಕ್ಕೆ ಮೊದಲು ನೀವು ಆ ಕುಮಾರಿಯ ಶೈಶವ ಸೌಂದರ್ಯವನ್ನು ಕಂಡು ವಿಸ್ಮಿತರಾಗಿದ್ದಿರಿ. ಈಗ ಅವಳ ನೂತನ ಶೋಭೆಯನ್ನು ಪುನಃ ನೋಡುವೆವೆಂದು ಕುತೂಹಲಗೊಂಡಿರುವಿರಾ ? ಆ ನಯನಪರಿತೃಪ್ತಿಕಾರಿಯಾದ ರಮ್ಯಕಾನನದ ಎಳೆಯ ಸಸಿಗಳಲ್ಲಿ ಅವಾವ ಮೊಗ್ಗೆ, ಎಲೆ, ಹೂವು, ಕಾಯಿ, ಹಣ್ಣುಗಳು ಎಲ್ಲೆಲ್ಲಿ ಸಜ್ಜಿತವಾಗಿ ನಿಮ್ಮ ಕಣ್ಣುಗಳನ್ನು ಹೇಗೆ ಹಾಗೆ ತೃಪ್ತಿಗೊಳಿಸುತ್ತಿರುವುದನ್ನು ಪುನಃ ನೋಡಬೇಕಾಗಿದೆಯೆ ?

ಅವಳ ಮನೋಹರ ಉಜ್ಜ್ವಲತೆಯಿಂದ ಪರಿಪೂರ್ಣವಾಗಿರುವ ರೂಪವನ್ನು ನೀವು ಚಿತ್ರಿಸುವುದೇ ನಿಮಗೆ ಸಾಕಾದರೆ,- ವಿಧಾತನೆ ! ಇದುವರೆಗೂ ಕಮಲೆಯನ್ನು ಸೃಷ್ಟಿಸುವುದಕ್ಕಾಗಿಯೇ ಎಷ್ಟೋ ಯುಗಗಳಿಂದ ಧ್ಯಾನ ಮಾಡುತ್ತಿದ್ದೆಯೋ ಏನು ! ದೂರದಿಂದ ನೋಡಿದರೆ ಕಮಲೆಯು ಮಾನ

ವಿಯೆಂದು ಭಾಸವಾಗದೆ, ಅವನೋ ಒಬ್ಬ ಚತುರಶಿಲ್ಪಿಯಿಂದ ನಿರ್ಮಿತವಾದ ಚಂದ್ರಕಾಂತಶಿಲಾಮೂರ್ತಿಯೆಂದು ನಂಬುಗೆಯಾಗುತ್ತಿತ್ತು.

ಕಮಲೆಯು ತನ್ನ ಪದವಿಗೆ ತಕ್ಕಂತೆ ಉಡಿಗೆ ತೊಡಿಗೆಗಳನ್ನು ಹಾಕಿಕೊಂಡುದುದಿಲ್ಲ. ಪ್ರತಾಪನು ಅದೇತಕ್ಕೆಂದು ವಿಚಾರಿಸಿದನು. ಕಮಲೆಯು ಆಗ, "ಯಾವದಿನ ಸಮಾಜವು ನಾವಿಬ್ಬರೂ ಧರ್ಮಸಾಕ್ಷಿಯಾಗಿಯೂ ಪತಿಸತಿಯರೆಂದು ನಿರ್ಧರಿಸುವುದೋ ಆ ದಿನ ನಿನ್ನಿಷ್ಟವಿದ್ದ ವೇಷಭೂಷಣಾದಿಗಳನ್ನು ಧರಿಸಿಕೊಳ್ಳುವೆನಲ್ಲದೆ ಅದಕ್ಕೆ ಮೊದಲಾಗಿ ಹಾಗೆ ಮಾಡಲಾರೆ" ನೆಂದಳು.

ಪ್ರತಾಪ:—ಆ ಸಮಯಕ್ಕೆ ಇನ್ನೂ ಬಹುಕಾಲ ವಿಳಂಬವಿದೆ.

ಕಮಲೆ:—ಇನ್ನೂ ವಿಳಂಬಮಾಡುವುದೇತಕ್ಕೆ? ನಮಗೆ ವಿವಾಹವಾಗಲಾರದೇ?

ಪ್ರತಾಪ:—ನನಗೆ ಸಮಯವೇ ತೋಚದು. ಆದರೆ ಇಂದೋ ನಾಳೆಗೋ ವಿವಾಹವಾಗಬಹುದು. ಅಥವಾ ಪುನಃ ರಣಸ್ಥಳಕ್ಕೆ ನಾನು ಹೋಗಬೇಕಾಗಿದ್ದರೆ ಹಾಗೂ ಆಗಬಹುದು.

ಕಮಲೆ:—ಅದೆಲ್ಲಿಗೆ?

ಪ್ರತಾಪ:—ಕಾಶ್ಮೀರಕ್ಕೆ.

ಕಮಲೆಯು ಅತ್ತುಬಿಟ್ಟಳು.

ಪ್ರತಾಪ:—ಅತ್ತುಬಿಟ್ಟೆಯಲ್ಲ.

ಕಮಲೆ,—ಅಳಿಸುತ್ತಿರುವಿಯೇಕೆ?

ಪ್ರತಾಪ:—ನಾನು ಸತ್ಯವನ್ನು ಆಡಿದೆನು ಅಷ್ಟೆ.

ಕಮಲೆ:—ಯುದ್ಧಕ್ಕೆ ಹೋಗಬಾರದೆಂದು ನಾನು ನಿಷೇಧಿಸುವುದಿಲ್ಲ. ಆದರೆ,

ಪ್ರತಾಪ:—ಆದರೆ ಮತ್ತೇನು?

ಕಮಲೆ:—ನನ್ನನ್ನು ವಿವಾಹಮಾಡಿಕೊಂಡಮೇಲೆ ಹೋಗಬಾರದೆ?

ಪ್ರತಾಪ:—ಅದೊಂದರಲ್ಲಿ ಹೆಚ್ಚಿನ ಸುಖವೇನಿರಬಹುದು?

ಕಮಲೆ:—ಅದರಿಂದ ನಾನೂ ಜತೆಯಲ್ಲಿ ಬರಲು ನನಗೆ ಅಧಿಕಾರ ದೊರಕುವುದು.

ಪ್ರತಾಪ:—ರಣದಲ್ಲಿ ಜಯವೂ ಇದೆ. ಹಾಗೆಯೆ ಪರಾಜಯವೂ ಉಂಟಾಗಬಹುದು.

ಕಮಲೆ:—ಉಂಟಾದರೂ ದೋಷವೇನು ?

ಪ್ರತಾಪ:—ನಾನು ಮಡಿವೆನಾದರೆ ?-

ಕಮಲೆ:—ಅದರಲ್ಲೂ ನಾನು ನಿನ್ನ ಜತೆಯನ್ನು ಬಿಡಲಾರೆನು.

ಪ್ರತಾಪನು ಕಮಲೆಯ ಮುಖವನ್ನು ದಿಟ್ಟಿಸಿ ನೋಡಿದನು. ಆಗ ಅದು ಗಂಭೀರವಾಗಿಯೇ ಇದ್ದಿತು. ನಂತರ, "ಇದು ನಿನ್ನ ಅಂತರಂಗದ ಮಾತೇ ?'' ಎಂದನು.

ಕಮಲೆ:—ಇದು ನನ್ನ ಅಂತರಂಗಸಾಕ್ಷಿಯಾದ ಪ್ರಾಣದ ಆಸೆ.

ಪ್ರತಾಪ:—ಹಾಗಿದ್ದರೆ ನಾನು ಉಪಸಂಹಾರವಾಗಿ ಕೊಟ್ಟಿದ್ದ ಅಲಂಕಾರಾದಿಗಳನ್ನು ಧರಿಸಿಕೋ.

ಕಮಲೆ:—ಆದಾಗದು. ಅದಕ್ಕಾಗಿ ನನ್ನನ್ನು ಆಜ್ಞಾಪಿಸಬೇಡ. ಅಮ್ಮನಿಗೆ ತಿಳಿಯದಂತೆ ನಿನ್ನೊಡನೆ ಈಗಲೂ ಗೋಪನದಲ್ಲೇ ಭೇಟಿ ಮಾಡುತ್ತಿರುವೆನು. ಇನ್ನಾದರೂ ಸಿಕ್ಕಿದೆಡೆಯಲ್ಲಿ ನಿನ್ನೊಡನೆ ತಿರುಗಾಡಲೂ ಆಗಲಾರದು. ಅಂತಃಪುರದಲ್ಲೇ ಬೇಸರ ಹಿಡಿದು ಬಿದ್ದುಕೊಂಡಿರಲಾರೆನೆಂದೇ ಇತ್ತ ಒಮ್ಮೊಮ್ಮೆ ಬರುತ್ತಲಿರುವೆನು.

ವಸಂತಕಾಲ. ಕಮಲಕುಮಾರಿಯು ಪರಿಷ್ಕಾರವಾದೊಂದು ಸೀರೆಯನ್ನುಟ್ಟುಕೊಂಡು ನಿರ್ಜನ ಪ್ರಾಂತದಲ್ಲಿ ಏಕಾಕಿನಿಯಾಗಿ ಅನಂತಪ್ರಕೃತಿ ಭಾಂಡಾರದ ನವೀನ ಶೋಭೆಯನ್ನು ನೋಡುತಲಿದ್ದಾಳೆ ಪ್ರಕೃತಿಗೆ ತನ್ನ ಸೌಂದರ್ಯವನ್ನು ತೋರಿಸಿ ನಾಚಿಸುವಂತೆ ಕಾಣುವುದು. ಆದುದರಿದಲೇ ಮೃದುಮಾರುತವು ಅವಳ ಕೇಶದಾಮವನ್ನು ಸವರುತ್ತ ಕೌತುಕದಿಂದ ಕ್ರೀಡಿಸುತ್ತಿರುವುದು. ಒಮ್ಮೊಮ್ಮೆ ಆ ಕೂದಲುಗಳು ಅತ್ತಿತ್ತ ಹಾರಲು ಪ್ರಾಣಶೂನ್ಯನಾದ ಆ ವಾಯುವನ್ನು ನಿಂದಿಸುತ್ತ ಅವಳು ಅವುಗಳನ್ನು ಸರಿ ಮಾಡುವಳು. ಮಧ್ಯೆಮಧ್ಯೆ ಅತ್ತಿತ್ತ ಕುತೂಹಲದಿಂದ ನೋಡುವಳೇಕೆ ? ಯಾರಿಗೋಸ್ಕರವೆಂದು ಪುನಃ ಹೇಳಬೇಕೆ ? ಆದರೆ ಕುಮಾರನಾದರೋ, ಅವನೆಲ್ಲಿ ?

ಸೂರ್ಯದೇವನು ಅಸ್ತಗತನಾಗುತಲಿದಾನೆ ಸಂಜೆಯು ಇನ್ನು ತಡೆದುಕೊಳ್ಳಲಾರಳು. ಇಂತಹ ಅನಂತಶೋಭೆಯನ್ನು ಕುಮಾರನು ನೋಡುವುದಾವಾಗ ?

ಎರಡು ವರ್ಷಗಳಮೇಲೆ ಇಂದು ಕಮಲೆಯ ಕಣ್ಣುಗಳಲ್ಲಿ ಪುನಃ ನೀರು ಒಸರಿದುದು. ಕುಮಾರನಂತೂ ಬರಲೇ ಇಲ್ಲ. ಇಂದು ನಾಳೆಯೆಂದೇ ಸುಖಾಗ್ರಹವೊಂದು ನಾಟಿದರೂ ಪ್ರತಾಪನು ಇನ್ನೂ ಅದೃಶ್ಯನು. ಅಳುವುದಕ್ಕೆಂದು ಸೃಷ್ಟಿಸದ ಆ ಕಣ್ಣುಗಳನ್ನು ವಿಧಾತನು ಅದೇಕೋ ಈಗ ನೀರುಗಳಿಂದ ತುಂಬಿಸುತ್ತಿರುವನು. ?

ವಾರವಾರಗಳೆಂದು ತಿಂಗಳು ಕಳೆದು ಹೋದುವು. ಅದರೊಡನೆಯೆ ಕಮಲೆಯ ಮಾನಸಿಕಯಾತನೆಯೂ ವರ್ಧಿತವಾದುದು. ದಿವಾಕರನ ವಿರಹದಿಂದ ಕಮಲವೂ ಬಾಡಿದುದು. ಪ್ರತಿದಿನವೂ ಕಮಲೆಯ ಮನೆಗೆ ಬರುತ್ತಿದ್ದ ಆಹಾರಪದಾರ್ಥಗಳೂ ಈಗ ಅಕಸ್ಮಾತ್ತಾಗಿ ನಿಂತುಹೋದುವು. ಪ್ರತಾಪನು ಎಲ್ಲಿರುವನೋ ? ಹೇಗಿರುವನೋ ? ಇಲ್ಲವಾದನು ?

ಹದಿನೆರಡನೆಯ ಪರಿಚ್ಛೇದ

[ಪರಿವರ್ತನೆ]

ಆಗ್ರದಲ್ಲಿಯ ರಾಜಪ್ರಾಸಾದದಲ್ಲೊಂದು ಸುಸಜ್ಜಿತವಾದ ಸ್ಥಳದಲ್ಲಿ ಅಕಬರಬಾದಶಹನ ಪುತ್ರನಾದ ಭಾರತವರ್ಷದ ಬಾವೀ ಸಮ್ರಾಜನಾದ ಸಲೀಮನು ಉಪವಿಷ್ಟನಾಗಿರುವನು. ದ್ವಾರದೇಶದಲ್ಲಿ ಹದಿನೆರಡು ಜನ ಅಸ್ತ್ರಧಾರಿಗಳು ದ್ವಾರರಕ್ಷಣೆಗೆಂದು ನಿರ್ದೇಶಿಸಲ್ಪಟ್ಟಿರುವರು. ಅತಿ ತತ್ಪರತೆಯಿಂದ ದಾಸದಾಸಿಯರು ಕಯ್ಯಟ್ಟಿ ಆಜ್ಞೆಗಳನ್ನು ನಿರೀಕ್ಷಿಸುತ್ತ ನಿಂತುಕೊಂಡಿರುವರು. ಬಾದಶಹಪುತ್ರನು, ಕಸ್ತೂರೀಸುಗಂಧದಿಂದ ಅನುಮೋದಿತವಾದ "ತಂಬಾಖು" ನ್ನು ಸೇದುತಲಿರುವನು. ಆಗಲೊಬ್ಬ ದೌವಾರಿಕನು ಅಲ್ಲಿಗೆ ಬಂದು, ಕರಪುಟೀಕೃತನಾಗಿ "ಮಹಾರಾಜಾ ಮಾನಸಿಂಹನು ಷಾಹಜಾದ (ಸಲೀಮ)ನ ದರ್ಶನಪ್ರಾರ್ಥಿಯಾಗಿರುವನು" ಎಂದು ಬಿನ್ನವಿಸಿಕೊಂಡನು.

ಸಲೀಮನು ಕಾಲಸರ್ಪವು ಬುಸುಗುಟ್ಟುವಂತೆ ಒಂದುಸಾರಿ ಚಿಲಿಮೆಯ ಹೊಗೆಯನ್ನು ರಭಸದಿಂದ ಹೊರಬಿಡುತ್ತ, ಆ ಕಂಚಿಕೆಯನ್ನು ತೀಕ್ಷ್ಣಭಾವದಿಂದ ನೋಡಿದನು. ಆಮೇಲೆ ಬಾಯಿಯಿಂದ ಹೊಗೆಬಿಡುತ್ತ,-ಬಳ್ಳಯದು - ಬರಹೇಳು, ! ಎಂದನು.

ದಾಸನು ಹೊರಗೆಹೋದಕೊಂಚಕಾಲದಲ್ಲೇ ಬಳ್ಳಯವೇಷಭೂಷಾದಿಗಳನ್ನುಧರಿಸಿಕೊಂಡಿದ್ದ ಮಹಾರಾಜಾ ಮಾನಸಿಂಹನು ಆ ಸ್ಥಳಕ್ಕೆ ಬಂದು ಸಲೀಮನನ್ನು ವಂದಿಸಲು ಅವನು ಮಹಾರಾಜನನ್ನು ತನ್ನ ಅರ್ಧಾಸನದಲ್ಲಿ ಕುಳ್ಳಿರಿಸಿಕೊಂಡನು.

ಮಾನಸಿಂಹ—ತಮ್ಮನ್ನು ಸನ್ಮಾನಿಸುವುದೆಂದರೆ ಇನ್ನೇನು ವಿಧವಿರಬಹುದು ? ಅಷ್ಟು ಅಲ್ಲದೆ, ತಾವಂತು ಪಾದಷಹನ ಪರಮಮಿತ್ರರು. ಸಾಲದ ಕಡೆಗೆ - ತಾವು ಪಂಚಹಜಾರೀ (೫೦೦೦ಸೇನೆ)ಯ ಅಧ್ಯಕ್ಷರು. ನಮ್ಮೊಡನೆ ಅವನ ಬಾಂಧವ್ಯವೂ ಇಲ್ಲದಿದ್ದರೆ ಇದ್ದುವೆಯೊಂದು ಕಾರಣದಿಂದಲಾದರೂ ತಮಗೆ ಸನ್ಮಾನವನ್ನು ತೋರಿಸುವುದು ನ್ಯಾಯವೇ ಅಲ್ಲವೆ ?

ಮಾನಸಿಂಹ:—ಈ ಅನುಗ್ರಹದಿಂದ ನಾನು ಪರಮಬಾಧ್ಯನಾದೆನು.

ಸಲೀಮ:—ಮಹಾರಾಜ ಮಾನಸಿಂಹನು ರಾಜನೀತಿ ಚೂಡಾಮಣಿಯು. ಸರೀ ಆತ್ಮೀಯತೆಯಿಂದಮಾತ್ರ ನನ್ನೊಡನೆ ಈತೆರದಲ್ಲಿ ಬೆರಸಿರುವನೆನ್ನಲಾಗದು, ಇರಲಿ; (ಪ್ರಕಾಶ) ಸಲೀಮನ ಆವುದಾದರೊಂದು ಅಭಿಲಾಷೆಯನ್ನು ಪೂರೈಸಿ, ಅವನು ಕೃತಾರ್ಥನಾಗುವಂತೆ ಅವಸರವನ್ನುಂಟುಮಾಡುವಿರೇನು ?

ಮಾನಸಿಂಹ—ಏಕೆ ? ಸಾಧ್ಯವಿದ್ದೆ, ಆಹುದು. ಆದರೆ ನನ್ನಕಾರ್ಯವೇನೂ ಅಲ್ಲ. ನಾನು ಇಲ್ಲಿಗೆ ಉಪದೇಶವನ್ನೀಯಲು ಮಾತ್ರ ಬಂದಿರುವೆನು.

ಸಲೀಮ—ಅಂತಹ ಅಮೂಲ್ಯವಾದ ಉಪದೇಶವೇನಿರಬಹುದು ?

ಮಾನಸಿಂಹ—ಇದು ನಿತ್ಯವೂ ಗೋಪನೀಯವಾದುದೆಂದು ಎಣಿಸಲ್ಪಡಬೇಕಾಗಿದೆ

ಸಲೀಮ—ಅಂತೆಯೇ ಆಗುವುದು.

ಮಾನಸಿಂಹ;—ಖುಸುರುವಿಗೆ ತಿಳಿಯದೆ ಅವಳನ್ನು ಮತ್ತೊಂದು ಸ್ಥಾನಕ್ಕೆ ಒಯ್ಯುವುದು.

ಸಲೀಮ:—ಅದೆಲ್ಲಿಗೆ?

ಮಾನಸಿಂಹ:—ಮೋತಿಮಹಲಿಗೆ. ಅಲ್ಲಿಗೆ ಹೋದರೆ ಅವಳು ನಾಳೆಗೆ ಮೆಹೇರೇನಸಾಬೇಗಮಳ ಪರಿಚಾರಿಕೆಯಾಗುವಳು

ಸಲೀಮನು ಪುನಃ ನಕ್ಕು ಬಿಟ್ಟನು ಮೆಹೇರೇನಸಾ ಎಂಬುವ ಹೆಸರಿನ ಬೇಗಮಳು ನನ್ನ ಪ್ರಿಯಳೆಂದು ಅದು ಹೇಗೆ ತಾನೆ ತಿಳಿಯಬಂದಿತು?

ಮಾನಸಿಂಹ—ಆತ್ಮೀಯರಾದವರಿಗೆ ಪರಸ್ಪರ ಮನೋಭಾವವು ತಾನಾಗಿ ತಿಳಿಯುವುದು.

ಸಲೀಮನು ಕ್ಷಣಕಾಲದಲ್ಲಿ ತುಟಿಗಳನ್ನು ಮುಚ್ಚಿದವನಂತೆ ಕಾಣಿಸಿಕೊಂಡು, ಹಾಗೇ ಆಗಲಿ ಎಂದನು. ಮಾನಸಿಂಹನು ಆಮೇಲೆ ಅಲ್ಲಿಂದ ಅಭಿವಾದನ ಪೂರ್ವಕವಾಗಿ ಸಂತಸದಿಂದ ತೆರಳಿದನು.

ಹದಿಮೂರನೆಯ ಪರಿಚ್ಛೇದ.

[ನೂತನ ಅವಸ್ಥೆ]

ಅಭಾಗಿನಿಯಾದ ಕಮಲೆಗೆ ಮೊದಲ ಹಿಂದಿನ ಅವಸ್ಥೆ ಒದಗಿರುವುದು. ಈಗ ತಿರುಗಿ ಅನ್ನಚಿಂತೆಯುಂಟಾಗಿರುವುದು. ವೃದ್ಧೆಯಾದ ತನ್ನ ಮಾತೆಯು ಅನ್ನಬಟ್ಟೆಗಳಿಗಾಗಿ ಏನುತಾನೇ ಮಾಡಲಾಗುವುದು? ಇನ್ನು ಆರ ಮನೆಯಲ್ಲಿ ಭಿಕ್ಷೆವನ್ನೆತ್ತಲಿ? ಎಂಬುವುದೊಂದೇ ಚಿಂತೆ ಅವಳ ಅಂಗದಲ್ಲಾದರೋ ಮದನನ ರಾಜ್ಯಾಧಿಕಾರದ ವಿಜಯಪತಾಕೆಯು ಹಾರುತಲಿದೆ. ಈಗ ಯುವತಿಯಾದ ಕಮಲೆಯು ಭಿಕ್ಷೆಗೆಂದು ಹೊರಬೀಳುವಳೆಂದರೆ ಅದು ಹೇಗೆ? ಆದರೂ

ಭಿಕ್ಷೆಯ ವಿನಹ ಅನ್ಯ ಉಪಾಯವೇ ತೋರದು. ಅನೇಕವಿಧವಾದ ಯೋಚನೆಮಾಡಿದನಂತರ ಹೇಗೂಇರಲಿ; ಇನ್ನು ಭಿಕ್ಷವೊಂದೇ ಉಪಾಯವೆಂದು ಸ್ಥಿರಮಾಡಿಕೊಂಡು ಮರುದಿನ ಬೆಳಗ್ಗೆ ಮನೆಯಿಂದ ಹೊರಕ್ಕೆ ಹೊರಟಳು.

ಇಂದು ಕಮಲೆಯು "ಷಹರಿಗೆ" ಬಂದಿರುವಳು. ಇದಕ್ಕೆ ಮೊದಲು ಅವಳು ಬಂದಿದ್ದುದು ತನ್ನ ಬಾಲ್ಯಪ್ರಾಯದಲ್ಲಿ ಮಾತ್ರ. ಈಗ ಅವಳು ಷಹರು ನಿವಾಸಿಗಳು ಅನ್ನುವುದನ್ನು ಕೇಳುತ್ತಲೂ ಅವರ ಕುಚೇಷ್ಟೆಗಳನ್ನು ನೋಡುತ್ತಲೂ ಇರುವುದೇ? ಅಥವಾ ಭಿಕ್ಷಾಟನ ಮಾಡುವುದೇ ? ಕೆಲವರು ತಿರಸ್ಕಾರಮಾಡುತ್ತ, ಕೆಲವರು ಉಪಹಾಸಮಾಡುತ್ತ, ಕೆಲವರು ಎಷ್ಟನ್ನೋ ಆಡುತ್ತ ಇದ್ದುದರಿಂದ ಕಮಲೆಯ ಹೃದಯವು ತುಂಡಾಗಲಿಕ್ಕೂ, ಅವಳ ಕಣ್ಗಳು ಬತಿಯಲಿಕ್ಕೂ ಆರಂಭವಾಯಿತು. ಅದರೂ ತನ್ನ ಕಷ್ಟವನ್ನೆಲ್ಲ ತಾಳಿಕೊಂಡು ಭಿಕ್ಷೆಗೆ ಕೈಚಾಚುತ್ತ ಬೇರೆ ಕಡೆಗೆ ನಡದುಬಿಟ್ಟಳು.

ಅಷ್ಟರಲ್ಲಿ ಹಿಂದಣಿಂದ "ಕಮಲೇ" ಎಂದು ಕರೆದಂತಾಯಿತು. ನೋಡಿದರೆ ಅವಳ ಮನೆಗೆ ಮೊದಲು ಆಹಾರಾದಿಗಳನ್ನು ಕೊಂಡೊಯ್ಯುವ ದಾಸರೊಡನೆ ಯಾವಾಗಲೂ ಬರುತಲಿದ್ದ ಆ ಮುದುಕನೆಂದು ತಿಳಿದು ಬಂದಿತು.

ವೃದ್ಧನು:-ನನ್ನ ಪರಿಚಯವಿದೆಯೋ ? ಎಂಬು ಕಮಲೆಯನ್ನು ಕೇಳಿದನು.

ಪ್ರಕಾಶನಿಗೆ ಆವುದಾದರೊಂದು ಬಗೆಯಲ್ಲಿ ಅಮಂಗಲವುಂಟಾಗಿದ್ದರೆ ಅಂಥದ ವೃತ್ತಾಂತವನ್ನು ತಿಳಿಸಲು ಈತನು ತವಕಗೊಂಡಿರಬಹುದೆಂದು ಕಮಲೆಯು ಭಯಪಡುತ್ತ, "ಪರಿಚಯವಿದೆ" ಎಂದಳು.

ವೃದ್ಧ:-ಈಕಡೆ, ಇದೆಲ್ಲಿಗೆ ಪ್ರಯಾಣ?

ಕಮಲೆ:-ಭಿಕ್ಷೆಗೆ.

ವೃದ್ಧ:—ಅದೇಕೆ ಅಂತಹ ಕಷ್ಟವುಂಟಾಗಿರುವುದೇನು ?

ಕಮಲೆಯು ಕಣ್ಣೀರುಸುರಿಸುತ ತನ್ನ ಸಂಕಟವನ್ನು ತಿಳಿಸಿದಳು.

ವೃದ್ಧ:—ಆ ಯುವಕನು ಇನ್ನು ಬರುವುದಿಲ್ಲವೇನು ?

ಕಮಲೆ:-ಅವನವಿಷಯವಾಗಿ ಏನೊಂದೂವಿಷಯವೂನಿನಗೆತಿಳಿದಿಲ್ಲವೆ

ವೃದ್ಧ:-ಅದೇನೂ ಇಲ್ಲ, ಇರಲಿ, ನೀನು ಆವುದಾದರೂ ಚಾಕರಿಮಾಡುವೆಯೋ ?

ಕಮಲೆ:—ಯಾರಲ್ಲಿ ?

ವೃದ್ಧ:-ಅರಮನೆಯಲ್ಲಿ ! ಜಾತಿ ಹೋಗುವುದೆಂಬ ಭೀತಿಯುಬೇಡ, ನಾನು ನಿನ್ನ ತಂದೆಗೆ ಸಮಾನನು. ನನ್ನಮಾತುಗಳ ಮೇಲೆ ವಿಶ್ವಾಸವಿರಲಿ.

ಕಮಲೆ:—ವಿಶ್ವಾಸವಿದೆ.

ವೃದ್ಧ:—ಆದರೆ ನೀನು ಆಗ್ರಾಕ್ಕೆ ಹೋಗಬೇಕಾಗಿದೆ, ಭಯಬೇಡ.

ಕಮಲೆ:—ಅಮ್ಮನೊಬ್ಬಳೇ ಮನೆಯಲ್ಲಿ ಇರುವಳಲ್ಲ.

ವೃದ್ಧ:—ಅದುನಿಜ ಆಕೆಯೂ ಬರಬಹುದು. ಒಂದು ಮನೆಯನ್ನು ಬಾಡಿಗೆಗೆ ಮಾಡಿಕೊಡುವೆವು.

ಕಮಲೆ:—ಹಾಗಿದ್ದರೆ ನಾನು ಹೊರಡುವೆನು.

ಆಮೇಲೆ ವೃದ್ಧನು ಕೆಲವು ರೂಪಾಯಿಗಳನ್ನು ಕಮಲೆಯ ಕಯ್ಯಲ್ಲಿರಿಸಿ, "ಸಂತೆಯಿಂದ ಆಹಾರಾದಿಗಳನ್ನು ಕೊಂಡು ಹೋಗಿ ಇಂದಿನ ದಿನ ಇಲ್ಲೇ ಇರು. ನಾಳೆ ಬೆಳಗ್ಗೆ ನಿಮ್ಮಲ್ಲಿಗೆಬಂದು, ನನ್ನೊಡನೆ ನಿಮ್ಮನ್ನು ಕರೆದುಕೊಂಡು ಹೋಗುವೆನು"

ಕಮಲೆಯು ಲಜ್ಜೆಯಿಂದಲಾದರೂ ಆ ಕೆಲವು ರೂಪಾಯಿಗಳನ್ನು ಪರಿಗ್ರಹಿಸಿಕೊಂಡು ಮನೆಗೆ ತೆರಳಿ ಆಹಾರಾದಿಗಳನ್ನು ಮುಗಿಸಿದ ನಂತರ ವೃತ್ತಾಂತವೆಲ್ಲವನ್ನೂ ತನ್ನ ತಾಯಿಗೆ ತಿಳಿಸಿದಳು ಅಕ್ಬರ್‌ಷಹನ ರಾಜ್ಯದಲ್ಲಿ ಹಿಂದುಮುಸಲ್ಮಾನರೊಳಗೆ ಅವ್ರುನೊಂದು ತೆರದ ದ್ವೇಷವೂ ಇರಲಿಲ್ಲ. ಅವು ದೊಂದುಬಗೆಯ ಅವಿಶ್ವಾಚರಣೆಯೂ ಉಂಟಾಗುತ್ತಿರಲಿಲ್ಲ. ಆದರೂ ವೃದ್ಧೆಯು ಆಗ್ರಾಕ್ಕೆ ತೆರಳಲು ಸುಲಭದಲ್ಲಿ ಒಪ್ಪಲಿಲ್ಲ. ಕಮಲೆಯ ವತ್ತಾಯದಿಂದ ಮಾತ್ರ ಕೊನೆಗೆ ಅವಳು ಒಪ್ಪಿಕೊಳ್ಳಬೇಕಾಗಿ ಬಂದಿತು.

ಮರುದಿನ ಬೆಳಗ್ಗೆ ವೃದ್ಧನುಬಂದು ಕಮಲೆಯನ್ನೂ ಅವಳ ತಾಯನ್ನೂ ಆಗ್ರಾಕ್ಕೆ ಕರೆದುಕೊಂಡುಹೋದನು. ಬಾದಷಾಹನ ಅರಮನೆಯ ನೆರೆಯಲ್ಲೇ ಚಿಕ್ಕದೊಂದು ಕುಟೀರವು ವೃದ್ಧೆಯಬಗ್ಗೆ ಬಾಡಿಗೆಗೆ ಇರಿಸಿಕೊಂಡುದಾಯಿತು ಕಮಲೆಯು ಷಾಹಜಾದ ಸಲೀಮನ ಪಟ್ಟರಾಣಿಯ ದಾಸಿಯಾಗಿ ಚಾಕರಿಬಿಡಿದಳು ಕೆಲವುದಿನಗಳ ಮೇಲೆ ತನ್ನೊಡನೆ ತಾಯಿಯನ್ನೂ

ಕರೆಸಿಕೊಂಡು ಗೃಹಕೃತ್ಯವಮಾಡುತ್ತಿದ್ದಳು. ಮತ್ತು ಅವಳ ಸ್ವಭಾವ ಸುಗುಣದಿಂದ ಬೇಗಮಳೂ ಕಮಲೆಯನ್ನು ತನ್ನ ಸೋದರಿಯಂತೆ ಕಾಣುತ್ತಲಿದ್ದಳು.

ಕಮಲೆಯಂತಹ ರಮಣಿಯನ್ನು ಮೆಚ್ಚದವರಾರು? ಅವಳನ್ನು ಹತಸದಿಂದ ಇರಿಸಿಕೊಳ್ಳದವರಾರು? ಕಿನ್ತು, ಅವಳಭಾಗ್ಯದಲ್ಲಿ ಮಾತ್ರ ಒಂದು ಕುಂದುಂಟಾಗಿದ್ದಿತು. ಅವಳೇನೋ ರಾಜಮಹಿಷಿಯಾಗಲೂ ಯೋಗ್ಯಳೇ ಅಹುದು. ಭಾಗ್ಯದೋಷದಿಂದ ಮಾತ್ರ ಇಂದು ಸಾಮಾನ್ಯ ಪರಿಚಾರಿಕೆಯಾಗಿ ಇನ್ನೂ ಇರುವಳು. ಇನ್ನೇನಾಗುವುದೋ?

ಹದಿನಾಲ್ಕನೆಯ ಪರಿಚ್ಛೇದ.

[ಕಮಲೆಯ ಪ್ರಕಾಶಸಿಂಹ]

ಕಮಲೆಯು ದಾಸ್ಯವೃತ್ತಿಯನ್ನವಲಂಬಿಸಿದ ಎರಡುತಿಂಗಳು ಕಳೆ ನಂತರ, ಒಂದ ದಿನ, ಸಂಜೆಹೊತ್ತಿನಲ್ಲಿ ಒಬ್ಬ ಯುವಕನು ಕಮಲೆಯ ಕುಟೀರದ ಸಮೀಪದಲ್ಲಿ ಬಂದಿಳಿದನು. ನೋಡಿದರೆ, ಅಲ್ಲಾದರೂ ಇದ್ದಂತೆ ತೋಚಲಿಲ್ಲ; ಮನೆಯು ಒಡೆದಂತೆ ಕಾಣುತ್ತಿದೆ. ಅದರ ಸಮೀಪದಲ್ಲಿದ್ದ ಅನ್ಯಗೃಹಗಳ ದ್ವಾರವನ್ನು ಆವನು ಕುತೂಹಲಚಿತ್ತನಾಗಿ ತಟ್ಟಿ, ಕಮಲೆಯ ವಿಷಯವನ್ನೂ ಅವಳ ಮಾತೆಯ ವೃತ್ತಾಂತವನ್ನೂ ಕುರಿತು ಯಾರಲ್ಲಿ ಕೇಳಿಕೊಂಡರೂ, ಆವ ವೃತ್ತಾಂತವೂ ಅವನಿಗೆ ತಿಳಿಯದಾದುದು.

ಶಾರದೀಯ ಚಂದ್ರನು ರಾಹುಗ್ರಸ್ತನಾದಂತೆ, ಯುವಕನ ವದನವು ವಿಕೃತಿಯನ್ನಾಂತುದು. ಪುನಃ ಆಯುವಕನು ಅಭಗ್ನಕುಟೀರವನ್ನು ಬಳಕೊಕ್ಕನು ಸದ್ದಿಲ್ಲದೆ ಅಳುತ್ತ ತನ್ನ ದುಃಖವನ್ನು ತಾಳಿಕೊಂಡನು. ಆ ಮೇಲೆ ಪುನಃ ಹೊರಟಾ ಯುವಕನ ಮನೋಚ್ಛ್ವಾಸವನ್ನು ನಮ್ಮಿಂದ ವರ್ಣಿಸಲಾಗುವುದಿಲ್ಲ. ಸಹೃದಯರಾದವರು ಅಂತಹ ಯಾತನೆಯನ್ನು ತಿಳಿದುಕೊಳ್ಳಬಲ್ಲರಲ್ಲದೆ, ಅದನ್ನು ತಿಳಿಸಲರಿಯರು "ನನಗೆ ಏನೋ ಆಗಿದೆ" ಎಂಬುವಂತೆ ಆ ಏನನ್ನೂ ಅರುಹಿಸಲಾಗುವುದು ಕಷ್ಟ.

ಯುವಕನು ಅಲ್ಲಿಂದ ಡಿಲ್ಲಿಯ ಬಾದಷಹಅಕಬರನ ಪ್ರಾಸಾದವನ್ನು ಪ್ರವೇಶಿಸಿದನು. ಮೂರನೆಯ ಮಾಳಿಗೆಗೇರಿ, ಸುಂದರವಾದುದೊಂದು ಶಯ್ಯೆಯಮೇಲೆ ಶಯನಮಾಡಿದನು. ಅನೇಕಹೊತ್ತಿನವರೆಗೂ, ಗಾಢ ಚಿಂತೆಯಿಂದ ಬಿದ್ದುಕೊಂಡವನಾಗಿ, ಕೊನೆಗೆ–"ಕಮಲೆ! ಪ್ರಾಣಾಧಿಕೆ" ಎಲ್ಲಿಗೆ ತೆರಳಿದೆ? ನನ್ನನ್ನೇಕೆ ಕುಲಶೈಲದಿಂದ ಕೆಳಕ್ಕೆ ಉರುಳಿಸಿದೆ?" ಎಂದು ಅಂದುಕೊಂಡನು.

ಯುವಕನ ಎರಡು ಕಣ್ಣುಗಳಿಂದ ಬಿಸಿಯಾದ ಅಶ್ರುಗಳಧಾರೆಯು ಗಳಿತವಾದುದು. ಆಗ ಆತನು ಅವುದೋ ಒಂದು ಸಾಂಕೇತಿಕಧ್ವನಿಯನ್ನು ಮಾಡಿದನು. ಒಡನೆಯೆ ಸುಂದರವಾದ ವೇಷಭೂಷಾದಿಗಳಿಂದ ಅಲಂಕೃತನಾದ ಎಳೆಯಪ್ರಾಯದ ಭೃತ್ಯನೊಬ್ಬನು ಅಲ್ಲಿಗೆ ಬಂದು, ಅವನ ಕಾಲುಗಳಿಗೆರಗಿ ಕಯ್ಜೋಡಿಸಿ ನಿಂತುಕೊಂಡನು.

ಯುವಕ–ಅಮೀರ್ಖಾನನು ಎಲ್ಲಿರುವನು?

ಭೃತ್ಯ–ಆಗ್ರಾದಲ್ಲಿ.

ಯುವಕನು, ಭೃತ್ಯನನ್ನು ಅಲ್ಲಿಂದ ತೆರಳಲು ಆಜ್ಞಾಪಿಸಿದನು. ಅಮೀರಖಾನನೆಂದರೆ,–ಅವನೇ ಆ ಹಳೆಯ ಮುಸಲಮಾನನು. ಅವನೇ ಷಾಹಾಜಾದಾ ಖುಸುರೂವಿನ ವಿಶ್ವಾಸಿಯಾದ ದಾಸನು

ಎಲ್ಲವೂ ವಿಪರ್ಯಾಸಗೊಂಡಿದೆ. ನನಗೂ ಸಮಯವು ಬಂದಿದಿಯೊ, ಏನೊ? ಕಮಲೆಯೊಬ್ಬಳಾದರೂ ಇಲ್ಲದಿದ್ದರೆ ನನ್ನೀಪ್ರಾಣವು ಉಳಿವುದೆ? ವಿಧಾತನೆ! ಸ್ವರ್ಗಕ್ಕಿಂತಲೂ ದುರ್ಲಭವಾದಾ ಪವಿತ್ರಪ್ರತಿಮೆಯು ನನ್ನ ಭಾಗ್ಯದಲ್ಲಿ ಇರುವುದೆಂದರೆ ಅದು ಹೇಗೆ?" ಎಂದು ನಿಟ್ಟುಸಿರಿಟ್ಟನು. ತನ್ನ ಗಳಪ್ರದೇಶವನ್ನು ಆವರಿಸಿಕೊಂಡಿದ್ದ ಮುಕ್ತಾಮಾಲೆಯನ್ನು ತುಂಡುಗೈದು ಬಿಸುಟನು. ಕಮಲೆಯನ್ನೇ ಕಳಕೊಂಡೆನಾಗರೆ, ಇದೇಕೆ. ಈ ಬೂದಿಯ ಮಾಲೆ! ಕಟಿಪ್ರದೇಶದಲ್ಲಿದ್ದ ರತ್ನಖಚಿತವಾದ ಕೋಶದಿಂದ ಕರವಾಳವನ್ನು ಹೊರಕ್ಕೆಳೆದು,–" ಖಡ್ಗವೇ, ನಿಪಾತವಾಗು! ಯುದ್ಧದ ವಾಸನೆಯು ಈ ಹೃದಯದಿಂದ ಈ ಜನ್ಮದ ಕೊನೆಯವರೆಗೂ ದೂರಗೋಡಿರಲಿ! ಇದುವೆ ಯುದ್ಧಪಿಪಾಸೆಯಿಂದಲೇ ಮರುಳಾಗಿ, ಕಮಲೆಯನ್ನಗಲಿ

ಒಂದು ವರ್ಷ ಕಾಲವೂ ವಿದೇಶದಲ್ಲೇ ಸಂಚರಿಸಬೇಕಾಯಿತು. ಅದರ ದೆಸೆಯಿಂದಲೇ ಕಮಲೆಯನ್ನು ಕಳೆದುಕೊಂಡೆನು. ಕಮಲೆ! ಒಮ್ಮೆ ಮೊಗದೋರು!!—ಎಂದು ಮೊದಲಾಗಿಗೋಳಾಡಲಾರಂಭಿಸಿದನು.

ಯುವಕನು ಇನ್ನು ಅಳಲೂ ಅರನು; ಮಾತುಗಳೂ ಹೊರಡವು. ಚಕ್ಕನೆದ್ದು ನಿಂತುಕೊಂಡನು;—"ಯುದ್ಧವೆಂಬುದು ಇದೆಲ್ಲಿಂದ ಉಂಟಾದುದು? ಕಾಶ್ಮೀರಕ್ಕಾದರೂ ನಾನು ಏತಕ್ಕೆ ಹೊರಟೆನು? ?ರಣಜಯಿಯಾಗಿ ನನಗೆ ಏನುಲಾಭ ಸುಖವುಂಟಾದುದು. ಈ ಜೀವನದ ಮಟ್ಟಿಗೆ ನನ್ನ ಹೃದಯವನ್ನೇ ಕಿತ್ತುಕೊಂಡೆನಲ್ಲ! ಯುದ್ಧಕ್ಕೆ ನಡೆಯದೆ ಇಲ್ಲಿಯೆ ಇದ್ದುಕೊಂಡಿದ್ದೆನಾದರೆ,—ಇತಿಹಾಸ ಲೇಖಕರೇನೊ ನನ್ನನ್ನು ಕಾಪುರುಷನೆನ್ನುತಲಿದ್ದರು. ನಿಜ,—ಆದರೆ,—ನಿಮ್ಮ ಇತಿಹಾಸವನ್ನು ಸುಡಲಿ! ನೂರೇಟು ಜನ್ಮಗಳಲ್ಲೂ ಈ ಬಗೆಯ ಕಾಪುರುಷನೇ ಆಗುವೆನು. ವಿಧಾತನು ನನ್ನ ಜೀವನಸರ್ವಸ್ವವಾದಾ ಕಮಲೆಯನ್ನು ಸದ್ಯಃ ನನಗೆ ಕೊಡಲಿ!'' ಎಂದು ಭ್ರಾಂತಿಯಿಂದ ಅರಚಿಕೊಂಡನು. ಅವನಿಗೆ ಪ್ರಜ್ಞೆ ತಪ್ಪಿದುದು. ಅಗ ಏನಾಯಿತು, ಏನಾ ?ತೆಂದು ಕತಕತದಾಸಾದಿಗಳು ಷಹಾಜಾದನನ್ನು ಅಲ್ಲಿಂದ ಗೃಹಮಂದ್ಯಕ್ಕೆ ಕೊಂಡೊಯ್ದರು. ಹಕೀಮನ ಮೂಲಿಕಾಪ್ರೇರಣೆಯಿಂದ ಪ್ರಾ ? ಶ ? ? ? ? ನಲ್ಲಿ ಇಂದ್ರಿಯಜ್ಞಾನವುಂಟಾದುದು.

ಗೊಸೋನ್ಮತ್ತವಾದ ಪ್ರಾಣವು ಪ್ರೇಮರಸವನ್ನು ಪಾನಮಾಡುವೆನೆಂಬುವೀ ಅಭಿಲಾಷೆಯನ್ನು ಅದೇಕೆ ಹಿಡಿದುಕೊಳ್ಳುವುದು? ಪ್ರೇಮವೆಂಬುವುದು ಷಹಾಜಾದನ ದಾಸನೇನೂ ಅಲ್ಲ! ಈ ವಿಶ್ವದಲ್ಲಿ ದಾರಿಯ ಭಿಕ್ಷಾಪತಿಯಿಂದ ಸಿಂಹಾಸನದ ಮೇಲಣ ರಾಜ್ಯಾಧಿಪತಿಯವರೆಗೂ ಎಲ್ಲರೂ ಪ್ರೇಮದ ದಾಸಾನುದಾಸರೇ ಆಕುದು.

ಷಹಜಾದನು ಕಾಶ್ಮೀರಕ್ಕೆ ಯುದ್ಧಯಾತ್ರೆಗೆಂದು ತೆರಳಿದವನು, ಒಂದು ವತ್ಸರ ಕಾಲವನ್ನೂ ಬಹುಕಷ್ಟದಿಂದ ಕಳೆದು, ಈಗಲಾದರೂ ಕಮಲೆಗೆ ತನ್ನ ಆತ್ಮಪರಿಚಯವನ್ನಿತ್ತು, ತಾನು ಮುಸಲ್ಮಾನನೆಂಬುವ ಆ ಶಂಕೆಯನ್ನೂ ಮತ್ತು ತಿರಸ್ಕಾರವನ್ನೂ ಅವಳಲ್ಲಿರುವ ದಯೆಯಿಂದ ಹೋಗಗೊಳಿಸಿ, ತನ್ನಪ್ರೇಮದ ಉತ್ಸಾಹವನ್ನು ಸಾಂಗವಾಗಿ ನೆರವೇರಿಸುವನೆಂದೂ ತಪ್ಪಿದರೆ ತನ್ನಪ್ರಾಣವನ್ನೇ ಅವಳ ಕಾಲ್ತಳದಲ್ಲಿ ಅರ್ಪಿಸುವೆನೆಂದೂ

ಪ್ರತಿಜ್ಞೆ ಮಾಡಿಕೊಂಡಿದ್ದನು. ಆದರೆ, ಯುದ್ಧದಿಂದ ಮರಳಿಬಂದಪ್ರಾಣವು ಕಮಲಮುಖಿಯಾದ ಕಮಲೆಯ ಕುಟೀರದೆಡೆಗೆ ನಡೆದರೂ, ಕಮಲೆ ಯಾದರೂ;-ಅವಳಲ್ಲಿ;_ಮತ್ತೀ ಕಮಲವಲ್ಲಭನಾದ ಖುಸರೂವಾದರೂ ಅವನೆಲ್ಲಿ ?

ಹದಿನಯ್ದನೆಯ ಪರಿಚ್ಛೇದ.

[ಅನುತಾಪ]

ಷಹಜಾದನು ವಿಮರ್ಶಭಾವದಿಂದ ಕಕ್ಷಮಧ್ಯೇ ಕುಳಿತಿರಲು, ಅಲ್ಲಿಗೆ ಮಹಾರಾಜಾ ಮಾನಸಿಂಹನು ಬಂದನು. ಚಿನ್ತಾಮಗ್ನನಾದ ಖುಸರೂವಿಗೆ ಮೊದಲು ಮಾನಸಿಂಹನ ಆಗಮನವು ತಿಳಿಯಲಿಲ್ಲ. ಮಾನಸಿಂಹನು ಆತನಕಡೆಗೆ ಸ್ಥಿರದೃಷ್ಟಿಯನ್ನು ಬೀರಿ, ಮಧುರಸ್ನೇಹಭಾವದಿಂದ "ಖುಸರೂ" ಎಂದು ಕರೆದನು

ಷಹಜಾದನಿಗೆ ಆ ಮಾತೇ ಕೇಳಿಸದು. ಮಹಾರಾಜನು ಮರಳಿ ಯೊಮ್ಮೆ ಕರೆದನು.

ಖುಸರೂವಿಗೆ ಚಿನ್ತಾಭಂಗವುಂಟಾದುದು. ಸಮ್ಮುಖದಲ್ಲಿದ್ದ ಮಾನ ಸಿಂಹನನ್ನು ಕಂಡವನಾಗಿ, ತಾನು ಮರ್ಯಾದೆಯನ್ನು ಸೂಚಿಸಲು ಎದ್ದು ನಿಂತನು.

ಮಾನಸಿಂಹ:—ಖುಸರೂ, ಹೇಗಿರುವೆ ?

ಖುಸುರೂ:—ಒಂದು ಬಗೆಯಾಗಿದ್ದೇನೆ.

ಮಾನಸಿಂಹ:—ನಿನ್ನ ಬಾಡಿದ ಮೊಗವು ಆ ಬಗೆಯನ್ನಂತೂ ಸೂಚಿಸದು.

ಖುಸರೂವು—ಇದಕ್ಕೆ ಉತ್ತರಕೊಡಲಿಲ್ಲ. "ನಾನೆಲ್ಲವನ್ನೂ ಅರಿತು ಕೊಂಡೇ ಇರುವೆ''ನೆಂದು ಮಾನಸಿಂಹನಂದನು. " ಈವೃತ್ತಾಂತವು ಅತ್ಯಂತ

ಗೋಚರಿಸುವಾದುದೇ ಆದರೂ, ಅದನ್ನು ನಿನ್ನೊಡನೆ ತಿಳಿಸದೆ ಇರಲಾರೆನು" ಎಂದು ಪುನಃ ಮಾನಸಿಂಹನು ಕೂಡಿಸಿಹೇಳಿದನು.

ಖುಸರೂವು ಮುಂದಿನ ವೃತ್ತಾಂತವನ್ನು ಕೇಳುವ ನಿರೀಕ್ಷೆಯಿಂದ ಇರುವವನಂತೆ' ಮಾನಸಿಂಹನಕಡೆ ತನ್ನ ಮುಖವನ್ನು ಎತ್ತಿ ನಿಂತುಕೊಂಡನು.

ಮಾನಸಿಂಹ:—ನಿನ್ನ ತಂದೆಯು ಇಚ್ಛಾನುಸಾರವಾಗಿ ಕಮಲೆಯುಸ್ಥಾನಾಂತರಿತೆಯಾಗಿರುವಳು.

ಖುಸರೂವಿಗೆ ಎಚ್ಚರಿಕೆಯಾದಂತಾಯ್ತು. ಒಡನೆಯೆ "ಅದೆಲ್ಲಿ?" ಎಂದನು.

ಮಾನಸಿಂಹ:—ಅದನ್ನರಿಯೆನು. ಪರನ್ತು, ಅಂದು ನಾನು ಅಲ್ಲಿ ಇಲ್ಲದೆಹೋಗಿದ್ದರೆ, ಅವಳು ಬಂದಿನಿಯಾಗಿ ಪ್ರಾಣದಂಡನೆಯಾದರೂ ಉಂಟಾಗಬಹುದಾಗಿದ್ದಿತು.

ಖುಸುರೂ:—ಅದೇತಕ್ಕೆ?

ಮಾನಸಿಂಹ:—ಅವಳೇನೊ ನಿನ್ನನ್ನು ಪ್ರೀತಿಸುವಳಂತೆ!

ಖುಸರೂ:—ಹಾಗಿದ್ದರೆ ಪ್ರೀತಿಸುವುದೂ ಮಹಾ ಪಾಪವೇ?

ಮಾನಸಿಂಹ?—ಖುಸರೂವನ್ನು — ಪಾದಶಾಹಜಾದನನ್ನು ಪ್ರೀತಿಸುವುದು, ಅಂತೆಯೆ.

ಖುಸರೂ;—ತಮ್ಮ ಅಭಿಪ್ರಾಯವೂ ಇದೇಯೊ?

ಮಾನಸಿಂಹ:—ನನ್ನ—!—ಅಲ್ಲ, ನಿನ್ನ ತಂದೆಯು ಅಭಿಪ್ರಾಯು.

ಖುಸರೂ:—ಪಿತನಾದರೂ ರೇಗಿದನೇತಕ್ಕೆ?

ಮಾನಸಿಂಹ:—ಯಾವ ಬಾದಶಹನ ಪುತ್ರನು ಪ್ರೇಮಪ್ರಾರ್ಥಿಯಾಗಿ ಅತ್ತಿತ್ತ ಅಡ್ಡಾಡುತಲಿರುವನೊ, ಅಂತಹನು ಮುಂದೆ ಬಾದಶಾಹನಾಗಲು ಅನುಪಯುಕ್ತನೆಂದು ಅವನ ಅಭಿಪ್ರಾಯು.

ಖುಸರೂ:—ಪಿತನಾದರೂ ಈ ಕಮಲೆಯು ವಿಷಯದಲ್ಲಿ ಹೇಗೆ ತಿಳಿದುಕೊಂಡಿಹನು.

ಮಾನಸಿಂಹ:—ನಾನರಿಯೆನು.

ಖುಸರೂ:—ಹಾಗಿದ್ದರೆ, ಕ್ಷಣದಲ್ಲೇ ಪಿತನೆಡೆಗೈದಿ, ಕಮಲೆಯು ಎಲ್ಲಿರುವಳೆಂದು ನಾನು ವಿಚಾರಿಸಲಾಗದೆ ?

ಮಾನಸಿಂಹ:—ಖುಸರೂ, ಇದನ್ನೇ ಹುಚ್ಚುತನವೆಂಬರು. ತಂದೆಗೆ ಇದ್ದುದನ್ನೆಲ್ಲ ತಿಳಿಸಿ, ರೇಗಿಸಿ, ವಿಚಾರವಮಾಡುತ್ತಿರುವುದು ಮಗನ ಕರ್ತವ್ಯವೊ ?

ಖುಸುರೂವಿಗೆ ಸಿಟ್ಟೇರಿತು. "ಮಗನ ಗುಪ್ತಕಾರ್ಯಗಳೆಲ್ಲೆಲ್ಲ ತಂದೆಯು ಕಯ್ಯಾಡಿಸುತ್ತಿರುವುದು ತಂದೆಯ ಕರ್ತವ್ಯವೇನು ? ಬಾದಷಾಹನಾದ ಅಕ್ಬರನಂತಹ ತಂದೆಗೆ ವಿರೋಧವಾಗಿ ಯಾವನು ಅಸ್ತ್ರಧಾರಣೆಯನ್ನು ಮಾಡಬಲ್ಲನೋ, ಅವನನ್ನು ಸಿಂಹಾಸನದಿಂದಟ್ಟಿಬಿಡುವೆನೆಂದು ಯಾರು ಸಾಧನೆಮಾಡಿದನೊ, ಅವನನ್ನು ಕೊನೆಯಪಕ್ಷ ಬಂದಿಯಾದರೂ ಮಾಡಿರಿಸುವೆನೆಂದು ಪೇಚಾಡಿದನೋ—ಅಂತಹನಿಗೆ ಈ ಜಗತ್ತಿನಲ್ಲಿ ಅಸಾಧ್ಯವಾದ ಕಾರ್ಯವು ಯಾವದು ತಾನೇ ಇರಬಹುದು ? "

ಮಾನಸಿಂಹನ ಅಂತರ್ಯದಲ್ಲಿ ವಿಪರೀತವಾದ ಸಂತೋಷವುಂಟಾದುದು; ಸಂತೃಪ್ತಿಯೂ ಆದುದು. "ಆದರೂ, ನೀನೂ ಅಂತಹ ಪದಾನುಸರಣೆಯನ್ನೇ ಮಾಡುವೆಯೇನು ? ಎಂದನು.

ಖುಸರೂ:—ಏತಕ್ಕಾಗದು ? ತಂದೆಯು ನನ್ನ ವಿಷಯದಲ್ಲಿ ಸ್ನೇಹಶೂನ್ಯನಾಗುವನಂತೆ, ಅವನ ಮಗನೂ ಹಾಗೇ ಅವನ ಕಡೆಗೆ ಆಗಬಾರದೆ ?

ಮಾನಸಿಂಹ:—ನಿನ್ನ ತಂದೆಯು ಹಿಂದೂ ರಮಣಿಯರನ್ನು ಪ್ರೀತಿಮಾಡುವನು. ಆದುದರಿಂದಲೇ, ನಿನ್ನ ಕಮಲೆಗೆ ಈ ಸಂಕಟವೊದಗಿತು !

ಖುಸರೂ; ಏನು ! ನಮ್ಮ ತಾಯಿಗಿಂತಲೂ ಅವನ ಮುಸಲಮಾನ ಹೆಂಡಿರು ಮಿಗಿಲೇ ? ಅವನಿಗೂ ನಿಮಗೂ ಧಿಕ್ಕಾರವಿರಲಿ ! ನಾರೀಕುಲಭೂಷಣಳಾದ ನಮ್ಮ ತಾಯಿಯ ಗರ್ಭದಲ್ಲಿ ಮುಸಲ್ಮಾನನಾದ ನಾನು ಜನ್ಮಿಸಬೇಕಾಗಿ ಬಂದುದು ನಿಮ್ಮ ಅನುಗ್ರಹ !

ಮಾನಸಿಂಹ:—ವಿರಕ್ತನಾಗಬೇಡ, ಖುಸರೂ ? ಎಣಿಸೆಣಿಸು,—ನನ್ನ ಭಗಿನಿಯ ಗರ್ಭಜಾತನು ಡಿಲ್ಲಿಯ ಸಿಂಹಾಸನವನ್ನೇರುವನು !! ಈ ಸುಖದ ಆಸೆಯು ನನ್ನಲ್ಲಿದೆಯಾದುದರಿಂದಲೇ ಇಂದು ನಿನ್ನೊಡನೆ ಮಾತನಾಡುವುದಕ್ಕೆಂದು ಬಂದೆನು.

ಕುಸರೂ:—ಸಿಂಹಾಸನ! ಅಯ್ಯೋ ಬೂದಿರಾಶಿಯು !! ನಾನು ಹಿಂದೂ ಸಿಂಹಾಸನನಾಗಿದ್ದೆನಾದರೆ,—ಅಹ ! ಕಮಲೆಯನ್ನು ಹೊಂದುವುದು ಕಷ್ಟವಾಗಿದ್ದಿತೆ? ಸ್ವಾಮಿ, ನಿಮ್ಮಾರಾಜ್ಯವೇ ನನಗೆ ಬೇಡ. ನಾನು ವಿರಾಗಿಯಾಗುವೆನು. ಸಿಂಹಾಸನದ ಆಶೆಯಿಂದ ಬಾಯ್ದೆರದು ತಾವು ಇಲ್ಲೇ ಕುಳಿತಿರಬಹುದು !!

ಮಾನಸಿಂಹ:—ಇದೇನು ಹೀಗೆನ್ನುವೆ ?

ಕುಸರೂ:—ಹೇಳಿದಂತೆ ಆಚರಿಸುವುದು ಕುಸರೂವಿನ ನೀತಿ.

ಮಾನಸಿಂಹ:—ಹೀಗಿದ್ದರೆ ನಾಲ್ಕಾರು ದಿನಗಳ ತಾಮಸವಿರಲಿ ನಾನು ಕಮಲೆಯ ಅನುಸಂಧಾನವನ್ನು ಮಾಡುತ್ತಿರುವೆನು.

ಕುಸರೂ:—ಅದಷ್ಟೂ ವ್ಯರ್ಥವೇ ಸರಿ,

ಮಾನಸಿಂಹ:—ಕಮಲೆಯು ನಿನ್ನನ್ನು ವರಿಸುವಳೇನು ?

ಕುಸರೂ:—ನನಗಿನ್ನು ವಿವಾಹವೇ ಬೇಕಾಗಿಲ್ಲ. ಅವಳನ್ನೊಮ್ಮೆ ಕಂಡೆನೆಂದರೆ ನನ್ನ ಯಾತನೆಯು ತಾನಾಗಿ ದೂರವಾಗುವುದು

ಮಾನಸಿಂಹ:—ಹಾಗಾದರೆ, ನಾನವಳನ್ನು ಹುಡುಕಿಕೊಂಡುಬರಲೇ? ಎಂದು ಮಾನಸಿಂಹನು ಅಲ್ಲಿಂದ ತೆರಳಿದನು.

ಮಾನಸಿಂಹ:—(ಪಿಸುಮಾತನಾಡುತ್ತಲಿರುವನು) ನನ್ನ ಕಾರ್ಯವು ಇಂದಿಗೆ ಸಿದ್ಧಿಯಾಯಿತು. ! ಪಿತಾಪುತ್ರರಿಗೆ ಮನೋಯುದ್ಧದ ಸೂತ್ರಪಾತವಾದಂತಾಯ್ತು !! ಪರಂತು, ದೀರ್ಘನಿಶ್ವಾಸವನ್ನು ಬಿಡುತ್ತ ಆಸನದಲ್ಲಿ ಕುಳಿತಿದ್ದ ಆ ಕುಸರೂವಿಗೆ ಈ ಮಾನಸಿಂಹನ ಮಾತುಗಳು ಕೇಳಿಸಲೇ ಇಲ್ಲ.

ಹದಿನಾರನೆಯ ಪರಿಚ್ಛೇದ.

[ಕಮಲೆಯೂ ಬೇಗಮಳೂ]

———

ಮಧ್ಯಾಹ್ನ. ಆಗ್ರಾನಗರದೊಂದು ಮೋತೀ ಮಹಾಲೆಂಬುವ ಪ್ರಾಸಾದದೊಳಗಿನ ಅದೊಂದು ಕಕ್ಷದಲ್ಲಿ, ಹದಿನಾರು ವರ್ಷಪ್ರಾಯದ ಯುವತಿಯೊಬ್ಬಳು ಚಂದ್ರಕಾಂತಶಿಲಾ

ನಿರ್ಮಿತವಾದ ಆಸನದ ಮೇಲೆ ಪವಡಿಸಿರುವಳು. ಗುಲಾಬಿ ಅತ್ತರನ್ನು ಹಾರಿಸುತಲಿರುವ ಕಾರಂಜಿಗಳು ಆ ಗೃಹಕ್ಕೆ ಸುಗಂಧವನ್ನೂ ಆಕೆಯ ದೇಹಕ್ಕೆ ಶಾಂತಿಯನ್ನೂ ಉಂಟುಮಾಡುತಲಿವೆ. ಆಕೆಯ ಸೌಂದರವಾದ ಪಾದದ್ವಯಗಳು ಗುಲಾಬೀ ಜಲದ ದೊಡ್ಡಪಾತ್ರೆಯೊಂದರಲ್ಲಿ ಇಡಲ್ಪಟ್ಟಿವೆ. ಅವಳೇನನ್ನೋ ವಿವಶಭಾವದಿಂದ ಚಿಂತಿಸುತಲಿರುವಳು. ಆ ನೀರಾದರೋ ಅವಳ ಪಾದಗಳನ್ನು ಚುಂಬಿಸಿ ಅಲೆಯಾಡುತ್ತ ತಾನು ಸಾರ್ಥಕವಾದುದಾದರೂ, ಅವಳ ಕಣ್ಣಿನಿಂದ ಅದೇಕೋ ಶೋಕಬಿಂದುಗಳನ್ನು ಉಸುರಿಸುತಲಿರುವುದು. ಅಯ್ಯೋ ವಿಷಾದವೆ! ನಿನ್ನ ರಾಜ್ಯಾಧಿಕಾರದ ವಿಜಯಾಧಿಪತ್ಯದ ಇದಿರಿನಲ್ಲಿ ಎಲ್ಲವೂ ತುಚ್ಛವಾದುದು! ಸಲೀಮನೆಂಬ—ಅವನು ಜಹಾಂಗೀರನೆಂಬುವ ಅಭಿಧಾನದಿಂದ—ಢಿಲ್ಲಿಯ ಶಾಸನದಂಡದ ಸ್ವೇಚ್ಛಾವ್ಯವಹಾರದಿಂದ ಸಮಗ್ರಭಾರತಭೂಮಿಯನ್ನು ವಿಕಂಪಿತವಾಗ ಮಾಡಿದ್ದನೋ ಅಂತಹನ—ಮಹಿಷಿಯ ಹೃದಯದಲ್ಲೂ ನೀನು ನಿನ್ನ ಭೀಷಣ ಅಗ್ನಿಕುಂಡವನ್ನು ಪ್ರಜ್ವಲಿಸುವಂತೆ ಮಾಡಿರುವೆ!!

ಯುವತಿಯು ಇಂತು ವಿಷಾದಭಾವದಿಂದ ಉಪವಿಷ್ಟೆಯಾಗಿರುವಳು; ಆಗ ಕಮಲೆಯು ತಾನಾಗಿ ಅಲ್ಲಿಗೆ ಬಂದಳು. ಮಾಲತೀವಲ್ಲಿಗಗಳು ಬಂದೇಕಡೆ ಏಕಕಾಲದಲ್ಲಿ ಅರಳಿದಂತಾಗುವವು ಕಮಲೆಯು ಇನ್ನೂ ಹಿಂದೂ ವೇಷಧಾರಿಣಿ! ಅದಲ್ಲದೆ, ತನ್ನ ಸ್ವಾಮಿನಿಯು ಅವಳ ಸಕಲದಾಸಿಗಳ ಹಿಂದೂನಾಮಗಳಿಗೆ ಬದಲಾಗಿ ಮ್ಲೇಚ್ಛನಾಮಗಳನ್ನಿರಿಸಿದ್ದರೂ, ಕಮಲೆಗೆ ಅವಳ ಹಿಂದೂ ಹೆಸರೇ ಇನ್ನೂ ರೂಢಿಯಲ್ಲಿದೆ.

ಯುವತಿ:—ಕಮಲೇ, ಇತ್ತ ಬಾ.

ಕಮಲೆಯು ಯುವತಿಯ ಸಮೀಪಕ್ಕೆ ಹೋಗಿ, "ತಾವು ಇಂದು ವಿಷಣ್ಣವದನೆಯರಾಗಲು ಕಾರಣವೇನಿರಬಹುದು?" ಎಂದು ಕೇಳಿದಳು.

ಯುವತಿ:—ನಾನು ವಿಷಣ್ಣಳಾಗದೆ ಇದ್ದ ದಿವಸವಾವುದು? ನನ್ನ ಮುಖದ ಮೇಲೆ ನಗುವನ್ನು ನೀನು ಎಂದಾದರೂ ಕಂಡಿದ್ದೆಯಾ?

ಕಮಲೆ:—ನೋಡಿಲ್ಲ. ಕಿನ್ತು, ನಾನೇಕೆ ನೋಡಬೇಕು? ನಿಮಗೆ ಅಂತಹ ಅಭಾವವೇನಿರಬಹುದು?

ಯುವತಿಯು ಗಂಭೀರಭಾವದಿಂದ, "ನನಗೆ ಅಭಾವವೇನೂ

ಇಲ್ಲವೆ ? ನನಗೆ ಎಂತಹ ಸುಖವಿದೆಯಕ್ಕ ? ಅರ್ಥಸುಖಮಾತ್ರದಿಂದಲೇ ಯಾರಾದರೂ ಲೋಕದಲ್ಲಿ ಸುಖಿಗಳಾಗಿದ್ದುದು ಉಂಟೇ ? ಪತಿಸುಖದಿಂದ ಯಾವ ರಮಣಿಯು ಸುಖಿಯಾಗಲಾರಳೊ ಅವಳಿಗೆ ಇನ್ನು ಸುಖವೆಂದರೆ ಮತ್ತೆಲ್ಲಿಯದು ?

ಕಮಲೆ:—ಇದೇಕೆ ? ಮಹಾರಾಜನು ನಿಮ್ಮನ್ನು ಪ್ರೀತಿಸುವುದಿಲ್ಲವೆ ?

ಯುವತಿ:—ನಿನಗೆ ಮರುಳೆ ? ಇದು ಜನರೊಡನೆ ಪ್ರೀತಿಯಿದ್ದರೆ, ಅಕ್ಕ, ನಾನು ಯಾರು ? ಅವರಾರು ? ಅವರು ಪ್ರಭು, ನಾನು ದಾಸಿ. ಇಂತಹ ಸಂಬಂಧದಲ್ಲಿ ಪ್ರಣಯವು ಸಾಧ್ಯವೆ ? ಪ್ರಣಯಶೂನ್ಯವಾದ ರಮಣೀ ಹೃದಯವು ಅಸಾರವಾದುದಲ್ಲವೆ ?

ಕಮಲೆ:—ನಾನು ಕಾಡಿನ ಹಕ್ಕಿ ! ಕಾಡಿನಲ್ಲೇ ಇರುತ್ತೇನು. ನನಗೆ ಇಷ್ಟೆಲ್ಲವೂ ಅರಿಯದು

ಯುವತಿ:—ಹಾಗೆನ್ನದಿರು, ಕಮಲೆ ! ನಿನಗೆ ಇದೆಲ್ಲವೂ ತಿಳಿದೇಯಿದೆ. ನಿನಗೆ ತಿಳಿದಿರುವುದಾವುದೆಂಬುದನ್ನು ನಾನೊಬ್ಬಳಲ್ಲದೆ ಮತ್ತಾರೂ ಅರಿಯರು.

ಕಮಲೆಯು ಆ ಮಾತನ್ನು ಕೇಳಿ ನೀರವೆಯಾದಳು

ಯುವತಿ:—ನಾನೊಂದು ಮಾತನ್ನು ಕೇಳಲೆ ? ನೀನದೇಕೆ ಸದಾ ಕಾಲವೂ ವಿಷಣ್ಣಭಾವದಿಂದಲೇ ಇರುವೆ ? ಇದೂ ವನವಿಹಂಗಿಯ ಸ್ವಭಾವವೇನು.

ಕಮಲೆ:—ಛಿ ! ನಾನು ಅದೆಷ್ಟೋ ನಗುತ್ತಲೇ ಇರುವೆನು. ನಾನೇ ನಗುವು

ಯುವತಿ:—ಆದರೆ ಅದು ಸ್ವಾಭಾವಿಕವಾದ ನಗುವಲ್ಲ. ಹಾಗಿದ್ದರೆ ಅಂದು ರಂಗಮಹಲದ ಕೋಣೆಯೊಂದರಲ್ಲಿ ಅದೇಕೆ ಕುಳಿತು ವಿಲಾಪಿಸುತಲಿದ್ದೆ

ಕಮಲೆ:—ತಮಗೆ ಅದು ಹೇಗೆ ತಿಳಿಯಿತು

ಯುವತಿ:—(ನಗುತ್ತ) ನನಗೆ ಜ್ಯೋತಿಷವು ತಿಳಿದಿದೆ.

ಕಮಲೆ:—ನಮ್ಮ ತಾಯಿಗೆ ಅಸೌಖ್ಯವೆಂದು ಅಳುತ್ತಲಿದ್ದೆನು.

ಯುವತಿ:—ನಿನ್ನ ತಾಯಿಯು ಆಗ ಸೌಖ್ಯವಾಗಿಯೇ ಇದ್ದಳು

ಕಮಲೆ:—ಹಾಗಾದರೆ, ತಾನೇ ತಾನಾಗಿ ಸುಮ್ಮನೆ ಅಳುತ್ತಲಿದ್ದೆನೋ ಏನೋ ?

ಯುವತಿ:—ಪ್ರಾಣವೂ ತಾನಾಗಿ ಅಳುವುದುಂಟೇ ?

ಕಮಲೆ:—ನಮ್ಮಂತಹ ಅನಾಥೆಯರಿಗೆ ಅಳುವೆಲ್ಲವೂ ಸಾಧ್ಯವಾಗಿದೆ

ಯುವತಿ:—ನನ್ನೊಡನೆ ಗೋಪನವು ಉಚಿತವಾಗಿಲ್ಲ

ಕಮಲೆ:—ತಮ್ಮ ದಾಸಿಯಾದ ನನ್ನನ್ನು ಈ ಬಗೆಯಲ್ಲಿ ಪ್ರಶ್ನೆ ಮಾಡುವುದೇಕೆ ?

ಯುವತಿ:—ನಿನ್ನನ್ನು ದಾಸೀಭಾವದಿಂದ ಕಾಣುವವಳು ನಾನಲ್ಲ, ಹಾಗಿದ್ದರೂ ಈ ಗೋಪನವೇಕೆ ? ನೀನು ಯಾರನ್ನಾದರೂ ಪ್ರೀತಿಸುತ್ತಲಿರುವೆಯೋ ? ಏನು ?

ಕಮಲೆ:—ಅಹುದು.

ಯುವತಿ:—ಯಾರನ್ನು ?

ಕಮಲೆ:—ಪ್ರತಾಪಸಿಂಹನನ್ನು.

ಯುವತಿ—:ಅವನು ಯಾರಿರಬಹುದು ?

ಕಮಲೆ:—ನಾನರಿಯೆನು.

ಯುವತಿ:—ಅವನೆಲ್ಲಿರುವನು ?

ಕಮಲೆಯು ಕಣ್ಣುಗಳಲ್ಲಿ ನೀರು ತುಂಬಿದುದು ಆ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

ಯುವತಿ:—ಹಾಗಾದರೆ ಈಗ ಅವನಿಲ್ಲವೇ ?

"ಹಾಗೆನ್ನದಿರಿ" ಎನ್ನುತ್ತಿದ್ದ ಹಾಗೆಯೇ ಕಮಲೆಯ ಕಣ್ಣುಗಳಿಂದ ಜಲಧಾರೆಯು ಹರಿಯುತ್ತಲಿದ್ದಿತು. ಅಷ್ಟರಲ್ಲಿ ಮತ್ತೊಬ್ಬ ದಾಸಿಯು ಅಲ್ಲಿಗೆ ಬಂದು ಮಹಾರಾಜನು ಚಿತ್ತೈಸಿರುವನೆಂಬ ವರ್ತಮಾನವನ್ನು ತಿಳಿಸಲು ಅಲ್ಲಿಂದ ಕಮಲೆಯು ಎದ್ದು ಮತ್ತೊಂದು ಕೋಣೆಗೆ ನಡೆದು ಉದಾಸಹೃದಯದಿಂದ ಅಳುತಳುತಲಿದ್ದಳು.

ಹದಿನೇಳನೆಯ ಪರಿಚ್ಛೇದ.

[ಗುಪ್ತ ರಹಸ್ಯ]

ಕಮಲಕುಮಾರಿಯ ತಾಯಿಯು ಸಂಘಾತಿತಪೀಡೆಯಿಂದ ಇಂದೋ ನಾಳೆಯೊ ಜೀವಸವನ್ನು ತೊರೆಯುವಂತಿದೆ. ಕಮಲೆಯ ದುಃಖಕ್ಕೆ ಪಾರವೇ ಯಿಲ್ಲ. ಇಂದಿಗೆ ನಾಲ್ಕು ದಿನಗಳಿಂದ ಅವಳು ಬಾದಷಾಹನ ಮನೆಗೆ ಹೋದವಳಲ್ಲ. ಕೇವಲವಾಗಿ ವೃದ್ಧೆಯಾದ ಮಾತೆಯ ಶುಶ್ರೂಷೆಯಲ್ಲೇ ಮಗ್ನಳಾಗಿರುವಳು.

ಹೊತ್ತು ಇಳಿಯುತ್ತ ಬಂದಿತು. ಈಗ ಬೇಗಮಳನ್ನು ಒಮ್ಮೆ ನೋಡಿ ಬರುವೆನೆಂದು ಕಮಲೆಯು ತನ್ನ ತಾಯಿಯ ಬಳಿ ಒಬ್ಬ ದಾಸಿಯನ್ನಿರಿಸಿ ತಾನು ರಾಜಪ್ರಾಸಾದಾಭಿಮುಖವಾಗಿ ಹೊರಟಳು.

ಇನ್ನು ಅರಮನೆಯು ಸ್ವಲ್ಪ ದೂರದಲ್ಲಿ ಇದೆಯೆನ್ನುವಷ್ಟರಲ್ಲಿ ಭಯಂಕರವಾದ ಜನರವವು ಕಮಲೆಗೆ ಕೇಳಿಸಿತು. ಅದೇನೆಂದು ತಿಳಿಯುವೆನೆಂದು ಕಮಲೆಯು ಮಾರ್ಗದ ಬದಿಯಲ್ಲಿ ನಿಂತುಕೊಂಡಿರಲು ಹಿಂದಣಿಂದ ಸಮವಯಸ್ಕಳಾದೊಬ್ಬಳು ಬಂದು ಆಕೆಯ ಕಣ್ಣುಗಳನ್ನು ಮುಚ್ಚಿ ನಗುತ್ತಾ "ತಪ್ಪಿಲ್ಲದೆ ನನ್ನ ಹೆಸರನ್ನು ಹೇಳಬೇಕು" ಎಂದಳು. ಕಮಲೆಯು "[illegible], ಈಗ ನಾವಿಬ್ಬರಾದೆವು" ಎಂದಳು. ಆ ಯುವತಿಯೂ ಕೂಡಲೆ ಕಮಲೆಯ ಪಾರ್ಶ್ವದಲ್ಲೇ ನಿಂತುಕೊಂಡಳು. ಅವಳೂ ರಂಗಮಹಲಿನ ಒಬ್ಬ ದಾಸಿ

ನೋಡುತ್ತಿದ್ದ ಹಾಗೆಯೇ ಅಸಂಖ್ಯಾಕರಾದ ಅಶ್ವಾರೋಹಿಗಳೂ ಪದಾತಿ ಸೇನೆಯೂ ಜಯೋಲ್ಲಾಸದಿಂದ ರಣವಾದ್ಯವನ್ನು ಬಾರಿಸುತ್ತ ಅವರ ಸಮ್ಮುಖದಲ್ಲಿ ಮುನ್ನಡೆಯುತಲಿದ್ದರು. ಆ ಮೆರವಣಿಗೆಯ ಕೊನೆಯಲ್ಲಿ ಮಹಾ ಸಮಾರೋಹದಿಂದ ಕುದುರೆಯನ್ನೇರಿದ ಸುಂದರನಾದೊಬ್ಬ ಯುವಕನಿದ್ದನು. ದೂರದಿಂದಲೇ ಅವನನ್ನು ಕಂಡ ಕಮಲೆಗೆ ಅವನು ಪ್ರತಾಪಸಿಂಹನೆಂದು ತಿಳಿದು ಮೈಯೆಲ್ಲಾ ರೋಮಾಂಚವಾಗಿ, ಪೃಥ್ವಿಯೇ ಅವಳನ್ನು ಸುತ್ತಲಾರಂಭಿಸಿದಂತಾಯಿತು. ಆದುದರಿಂದಲೇ "ಇವರು ಯಾರಕ್ಕ ?" ಎಂದು ಆ ದಾಸಿಯನ್ನು ಕೇಳಿದಳು.

ದಾಸಿ:—ಅಯ್ಯೋ ಪಾಪ. ನೀನು ಮೊನ್ನೆಯ ಮಗು. ಇದು ನಿನಗೇಕೆ ತಿಳಿದೀತು? ಇಂದೇ ಆಗ್ರಾಕ್ಕೆ ಬಂದಿರುವೆ? ಈತನೇ ಬಾದಷಹ ಅಕಬರಷಹನ ಖುಸರೂ, ಇಂದಿಗೆ ಒಂದು ವರುಷದ ಹಿಂದೆ ಕಾಶ್ಮೀರಕ್ಕೆ ಯುದ್ಧ ಯಾತ್ರೆಗೆಂದು ತೆರಳಿದವನು ವಿಜಯಿಯಾಗಿ ಡಿಲ್ಲಿಗೆ ಬಂದು ಅಲ್ಲಿಂದ ಇಲ್ಲಿಗೆ ಈಗ ಬರುತಲಿರುವನು.

ಕಮಲೆಗೆ ಇನ್ನೇನೂ ಕೇಳಿಸಲಿಲ್ಲ. ನಾಲ್ದಿಕ್ಕುಗಳೂ ಶೂನ್ಯತೆಯನ್ನಾಂತು ಅವಳಿಗೆ ತಲೆತಿರುಗಿತು. ಸಂಜ್ಞೆಯೇ ತಪ್ಪಿಹೋಯಿತು. ದಾಸಿಯ ಮೇಲೆ ಧೊಪ್ಪನೆ ಬಿದ್ದುಬಿಟ್ಟಳು. ದಾಸಿಯು ಗಾಬರಿಗೊಂಡು "ಇದೇನಾಯ್ತು ಇದೇನಾಯ್ತು ಕಮಲೆ! ಅಕ್ಕ!" ಎಂದು ಅವಳನ್ನು ಆದರಿಸಿ ಚೇತ್ಕರಿಸಿದೊಡನೆ, ಕಮಲೆಗೆ ಪುನಃ ಸ್ಮೃತಿಬಂದಿತು. ಆಗ ಜನಸಂದಣಿಯೂ ಕಿಂಚಿದ್ದೂರಕ್ಕೆ ಮುನ್ನಡೆದಿದ್ದುದು. ದಾಸಿಯು ಜನರ ಗುಂಪಿಗೆ ಹೀಗೆ ಬೆದರುವವರೂ ಇದ್ದಾರೆಯೆ?" ಎಂದು ಕೇಳಲು, ಆಗ ಕಮಲೆಯು ನಿಟ್ಟಿಸಿರನ್ನು ಬಿಡುತ್ತ "ಅಹುದು" ಎಂದಳು.

ದಾಸಿ:—ಈಗ ನೀನೆಲ್ಲಿಗೆ ಹೋಗುವೆ?

ಕಮಲೆ:—ರಂಗ ಮಹಲಿಗೆ ಹೋಗುತಲಿದ್ದೆನು. ಆದರೆ ಇನ್ನು ಹೋಗುವುದಿಲ್ಲ.

ದಾಸಿ:—ಹಾಗಿದ್ದರೆ ಎಲ್ಲಿಗೆ ಹೋಗುವೆ?

ಕಮಲೆ:—ತಾಯಿಯ ಬಳಿಗೆ.

ದಾಸಿ:—ನಾನೂ ಬರಲೆ?

ಕಮಲೆ:—ಅಂತಹ ಆಗತ್ಯವೇನೂ ಇಲ್ಲ. ಹೀಗೆಂದು ಹೇಳಿ ಕಮಲೆಯು ರಂಗಮಹಲಿಗೆ ಹೋಗದೆ ತನ್ನ—ಕುಟೀರದ ಕಡೆಗೆ ತೀವ್ರ ಚಲನೆಯಿಂದ ಹಿಂತಿರುಗಿ ಬಂದಳು.

ಹದಿನೆಂಟನೆಯ ಪರಿಚ್ಛೇದ.

[ಮೃತ್ಯುಶಯ್ಯೆ]

ಜಗತ್ಪ್ರದೀಪನಾದ ದಿವಾಕರನು ನಿರ್ವಾಣೋನ್ಮುಖನಾಗಿರುವನು. ಅನಂತಗಗನ ಪ್ರದೇಶವೆಲ್ಲವೂ ಸೂರ್ಯನ ತರಲಕಿರಣಗಳಿಂದ ವಿಭಾಸಿತವಾಗಿರುವುದು. ಅದೂರದಲ್ಲೇ ತರಲ ಕಿರಣ ಮಾಲೆಯಾದ ತರಂಗಿಣಿಯು ಕಲಕಲೆಂದು ಹರಿದೋಡುತ್ತಿರುವಳು. ಯಮುನೇ! ನೀನು ಅದೆಲ್ಲಿಗೆ ಹರಿದು ಹೋಗುವೆ? ಅಗಾಧ ಈ ವಿಶ್ವವಿಮೋಹನ ಶೋಭೆಯು ನಿನ್ನ ಮನಸ್ಸಿಗೆ ಒಪ್ಪದೆ?

ಇದೇ ಸಮಯದಲ್ಲಿ ಸಾಮಾನ್ಯವಾದೊಂದು ಗೃಹದಲ್ಲಿ ವೃದ್ಧೆಯೊಬ್ಬಳು ಪೀಡಿತೆಯಾಗಿ ಹಾಸಿಗೆ ಹಿಡಿದಿರುವಳು. ಅವಳ ಮುಖಭಾವವನ್ನು ಕಂಡರೆ ಅವಳ ಜೀವನರವಿಯೂ ಅವಿಲಂಬದಲ್ಲೇ ಅಸ್ತಂಗತನಾಗುವಂತಿದೆ. ಹಾಸುಗೆಯ ಪಕ್ಕದಲ್ಲಿ ಸಜಲನೇತ್ರೆಯಾದ ಯುವತಿಯೊಬ್ಬಳು ವೃದ್ಧೆಯ ಮುಖವನ್ನೇ ನಿರೀಕ್ಷಿಸುತ್ತ ಕುಳಿತಿರುವಳು. "ಅಮ್ಮಾ, ಕಮಲೆ! ಈ ಕಿಟಕಿಯನ್ನು ಸ್ವಲ್ಪ ತೆರೆ. ಇದೊಂದುಬಾರಿ ನಿನ್ನ ಮುಖವನ್ನು ಚೆನ್ನಾಗಿ ನೋಡಿ ಬಿಡುವೆನು" ಎಂದು ವೃದ್ಧೆಯು ಒಂದು ನಿಟ್ಟುಸಿರನ್ನು ಬಿಡುತ್ತ ಕಮಲೆಯೊಡನೆ ಹೇಳಿದಳು. ಅಂತೆಯೇ ಗವಾಕ್ಷದ್ವಾರವನ್ನು ತೆರೆದುದಾಯಿತು. ಸಂಧ್ಯಾಗಗನದ ಅತುಲಶೋಭೆಯೂ ವೃದ್ಧೆಯ ಕಣ್ಗಳಲ್ಲಿ ಪ್ರತಿಬಿಂಬಿತವಾಯಿತು. ಆಕಾಶದ ಕಡೆಗೆ ನೋಡಿದಳು. ನೋಡಿದರೆ ಅದೆಷ್ಟು ಎತ್ತರದಲ್ಲಿದೆ ಇಂತಹ ಅತ್ಯುನ್ನತಸ್ಥಳಕ್ಕೆ ಮಡಿದ ಮನುಷ್ಯನು ಹೋಗುವನಂತೆ? ಅಲ್ಲೊಂದು ತಾರೆಯೂ ಕಾಣಿಸುತ್ತಲಿದೆ. ಅಲ್ಲಿಗೇ ತಾನು ಹೋಗುವೆನೋ ಏನೋ! ಇಂತೆಂದು ಭಾವಿಸುತ್ತ ವೃದ್ಧೆಯು ಉದಾಸೀನೆಯಾಗಲು ಅವಳ ಕಣ್ಗಳು ಮುಚ್ಚುತ್ತ ಬಂದುವು. ಅನಂತರ ಅವಳು ಕಮಲೆಯನ್ನು ಕರೆದು—"ಇನ್ನು ನನ್ನ ಮೃತ್ಯುವಿಗೆ ಅಧಿಕಸಮಯವಿರದು. ದೇಹವೇನೋ ನನ್ನ ಶಕ್ತಿಗೆ ಹೊರಗಾಗಿಯೇ ಇರುವುದು. ಮನಸ್ಸಿನಲ್ಲಿಯೂ

ವಿಕೃತಿಯುಂಟಾಗಿರುವುದು. ಆದರೆ ಅಳಬೇಡ! ಕಮಲೆ, ಚಿರದಿನ ಈ ಪೃಥ್ವಿಯಲ್ಲಿ ಬದುಕಿದವರಾರೂ ಇಲ್ಲ ಮಹಾರಥಿಗಳೆಷ್ಟೋ ನಿಪಾತ ಹೊಂದಿದರು ಇಂತಿರುವಲ್ಲಿ ತೃಣಾನುತೃಣಸಮಳಾದ ನಾನೆಲ್ಲಿಯವಳೋ? ಆದರೆ ನೀನು ಸುಖವಾಗಿರುವುದನ್ನು ಕಂಡು ಮಡಿದಿದ್ದರೆ ನನಗೆ ಸುಖಮರಣವಾಗುತ್ತಿದ್ದಿತು. ಕಿಂತು, ವಿಧಾತನಿಗೂ ವಿರೋಧವಿದ್ದೇ ಇದೆ'' ಎಂದು ಹೇಳುತ್ತಲಿರುವಾಗ ಕಣ್ಣೀರು ಅವಳ ಕಣ್ಣುಗಳನ್ನು ತುಂಬಿದುದನ್ನು ಕಂಡು ಕಮಲೆಯು ತನ್ನ ಸೆರಗಿನಿಂದ ಅದನ್ನು ಒರಸಿದಳು.

ಪುನಃ ವೃದ್ಧೆಯು ಏನನ್ನೊ ಹೇಳಲುಪಕ್ರಮಿಸಲು ಅದೂ ಕ್ರಮೇಣ ಕಷ್ಟವಾಗುತ್ತ ಬಂದಿತು. "ಪ್ರತಾಪನು ನಿನ್ನನ್ನು—'' ಇನ್ನು ಮಾತೇ ಹೊರಡದು. ವೃದ್ಧೆಯು ನಿಸ್ತಬ್ಧೆಯಾದಳು. ಕಮಲೆಯು ವೃದ್ಧೆಗೆ ಪ್ರತಾಪನ ಸಂಬಂಧವಾದ ವೃತ್ತಾಂತವೆಲ್ಲವನ್ನೂ ತಿಳಿಸಿದ್ದಳು. ಈ ಅವಳ ಮರಣಕಾಲದಲ್ಲಾದರೂ ಆ ಶರೀರ ವೃತ್ತಾಂತವನ್ನು ತಿಳಿಸಲೇ ಬೇಡವೆ ಎಂದು ಕಮಲೆಯು ಸಂದೇಹಪಡುತಲಿದ್ದಳು. ಪರನ್ತು ಇನ್ನೀ ಮಾತೆಯನ್ನು ಕಾಣುವುದಿದೆಯೆ? ಆವಳ ಉಪದೇಶವನ್ನೇಕೆ ಪಡೆಯಬಾರದು? ಅವಳ ಉತ್ಕಂಠೆಯನ್ನಾದರೂ ದೂರೀಕರಿಸಲಾಗದೇಕೆ? ಎಂದಷ್ಟನ್ನು ಭಾವಿಸಿಯೇ ಕಮಲೆಯು ತನ್ನ ತಾಯಿಯೊಡನೆ ಎಲ್ಲವನ್ನೂ ಅರುಹಿದ್ದಳು.

ಕಮಲೆಯು ಅಳುತಲಿರುವುದನ್ನು ಕಂಡಾವೃದ್ಧೆಯು "ನಾನಂತೂ ಮಡಿವೆನಾದರೂ ನನ್ನ ಈ ಯೊಂದು ಮಾತನ್ನಾಕೇಳು.'' ಎಂದು ಬಲು ಕಷ್ಟದಿಂದ ಉಸುರಲು, ಕಮಲೆಯು ಪ್ರೀತಿಪೂರ್ವಕವಾಗಿ "ಅದೇನು? ಹೇಳಮ್ಮ, ಹೇಳು'' ಎಂದು ಕಿವಿಯನ್ನು ನೀಡಿದಳು.

ವೃದ್ಧೆ:—ನನ್ನೀ ಮಾತನ್ನು ಪಾಲಿಸುವೆಯೊ?

ಕಮಲೆ:—ಪ್ರಾಣವಿರುವಷ್ಟು ದಿನವೂ ಪಾಲಿಸುವೆನು

ವೃದ್ಧೆ:—ಅನೇಕ ಪುಣ್ಯವನ್ನು ನಾನು ಸಂಪಾದಿಸಿಕೊಂಡಿದ್ದೆನಾದರೂ ಕೊನೆಗೆ ಕಷ್ಟಕ್ಕೆ ಸಿಕ್ಕಿದೆ ನಿನ್ನಂತಹ ಕನ್ಯೆಯು ನನ್ನಲ್ಲಿ ಹುಟ್ಟಬಾರದಾಗಿದ್ದಿತು. ನನಗಾಗಿ ನೀನು ಬಹು ಕ್ಲೇಶವನ್ನು ಸಹಿಸಿಕೊಂಡೆ, ನನಗಾಗಿಯೇ ಅಲ್ಲವೆ ನೀನು ಹಿಂದುವಾಗಿದ್ದರೂ ಯವನ ಗೃಹದಲ್ಲಿ ದಾಸೀವೃತ್ತಿಯನ್ನು ಕೂಡ ಅಂಗೀಕರಿಸಿರುವೆ?

ಕಮಲೆ:—ಅದಂತಿರಲಿ, ಈಗ ನನಗೆ ತಿಳಿಸಬೇಕಾಗಿರುವುದೇನು ?

ವೃದ್ಧೆ:—ಧರ್ಮವನ್ನು ಬಿಡಬೇಡ, ಪ್ರಾಣವಿರುವಷ್ಟು ಕಾಲವೂ ಧರ್ಮವನ್ನವಲಂಬಿಸು, ಸನಾತನ—ಹಿಂದೂಧರ್ಮಕ್ಕೆ ತುಲ್ಯವಾದ ಮತ್ತೊಂದು ಧರ್ಮವಿಲ್ಲ. ನಾನಂತೂ ಈಗಲೇ ಸಾಯುವೆನು. ಆದರೆ ನಾನು ಇನ್ನುಮುಂದೆ ನಿನ್ನನ್ನು ನೋಡಲಾರೆನೆಂದು ಮಾತ್ರ ಎಣಿಸದಿರು. ನಾನು ಎಲ್ಲಿಯೇ ಇರಲಿ ನಿನ್ನ ಕಾರ್ಯ ಕಲಾಪವನ್ನೆಲ್ಲಾ ನೋಡುತಲಿರುವೆನು. ಈ ಅಭಾಗಿನಿಯ ಕೊನೆಯ ಅನುರೋಧವನ್ನು ಸಲ್ಲಿಸಮ್ಮ! ಒಂದು ತಟಕು ನೀರು ನನಗೆ ಸಿಕ್ಕುವಂತೆ ಪ್ರಯತ್ನವನ್ನಿಡು ಅವ ಮಾತೆಯ ಅನ್ನ ಶಾಂತಿಗಾಗಿ ಅವಳು ಜೀವಂತೆಯಾಗಿರುವಾಗ ಇದಿಷ್ಟನ್ನೂ ಸಹಿಸಿಕೊಂಡೆಯೋ, ಅವಳನ್ನು ಅವಳ ಮರಣದ ನಂತರ ಯಾವಾಗಲೂ ಮರೆಯದಿರು. ತಾಯಿಗೆ ಜಲತರ್ಪಣವೂ ಲೋಪವಾಗದಂತೆ ಎಚ್ಚರಿಕೆ ಇರಲಿ ಎಂದು ಅನ್ನುತ್ತಿರುವಷ್ಟರಲ್ಲೇ ಕಂಠವು ರುದ್ಧವಾದುದು, ನೋಡುತಲಿದ್ದಂತೆಯೇ ಕಮಲೆಗೆ ಸಂಸಾರದಲ್ಲಿ ಏಕಮಾತ್ರಸಹಾಯವೂ ಅವಲಂಬನವೂ ಆಗಿದ್ದ ವೃದ್ಧೆಯು ಅನಂತ ನಿದ್ರೆಯಲ್ಲಿ ಪವಡಿಸಿದಳು. ಕಮಲೆಯ ದುಃಖಕ್ಕೆ ಇನ್ನು ಸೀಮೆಯೆ ಇರಲಾರದು, ಇಂತಹ ದಾರುಣಶೋಕವನ್ನು ಕಮಲೆಯು ಇಹ ಜನ್ಮದಲ್ಲಿ ಎಂದೂ ಅನುಭವಿಸಿರಲಿಲ್ಲ.

ಹತ್ತೊಂಬತ್ತನೆಯ ಪರಿಚ್ಛೇದ.

[ಕೊನೆಯ ದರ್ಶನ]

ಕಮಲೆಯು ಚಂದನ ಕಾಷ್ಠದ ಚಿತೆಯನ್ನು ಸಿದ್ಧಗೊಳಿಸಿ ಯಮುನಾ ತೀರದಲ್ಲಿ ತಾಯಿಗೆ ಸಂಸ್ಕಾರವನ್ನು ಮಾಡಿಸಿ ಯಥಾಸಮಯದಲ್ಲಿ ಅವಳ ಶ್ರಾದ್ಧಕ್ರಿಯೆಯನ್ನೂ ಪೂರಯಿಸಿದಳು. ಶ್ರಾದ್ಧಾಂತ್ಯದಲ್ಲಿ ಕಮಲೆಯು ಮೋತಿ ಮಹಲಿಗೈದಿ ಬೇಗಮಳಿಂದ ವಿದಾಯವನ್ನು ಕೈಕೊಳ್ಳಬೇಕೆಂದು ಅರಮನೆಗೆ ಹೋದಳು. ಅವಳು ಅಲ್ಲಿಗೆ ಮುಟ್ಟುವಾಗ ಸಂಜೆ ಮೀರಿತ್ತು. ಬೇಗಮಳು ವಿವಿಧವೇಷಭೂಷಾದಿ

ಕಮಲೆ:—ನಾನು ಹಿಂದು, ಆತನು ಯವನನು. ತುಚ್ಛ ಪ್ರಣಯ ಕ್ಕೋಸುಗ ಧರ್ಮಕ್ಕೆ ಜಲಾಂಜಲಿಯನ್ನು ಕೊಡಲಾರೆನು.

ಬೇಗಮು:—ಪ್ರಣಯವು ತುಚ್ಛವಾದುದೆ?

ಕಮಲೆ:—ಕೇವಲವಾಗಿ ಇಚ್ಛಿಸಿದರೆ ಮಾತ್ರ ಫಲದಾಯಕವಾದ ಅವುದಾದರೊಂದು ಪ್ರವೃತ್ತಿಗೆ ಗೌರವವು ಅದೆಲ್ಲಿಂದ ಬಂದೀತು? ಆದುದರಿಂದಲೇ ನನ್ನ ಮನಸ್ಸನ್ನು ಬೇರೆ ಕಡೆಗೆ ತಿರಿಗಿಸಿರುವೆನು.

ಬೇಗಮು:—ಅದು ಸಾಧ್ಯವಾದೀತೆ?

ಕಮಲೆ:—ನನ್ನ ವಿಶ್ವಾಸವು ಹಾಗೆಯೇ ಸರಿ. ಷಾಹಾಜಾದನಿಗಾಗಿ ಈ ಹೃದಯದಲ್ಲಿ ಆವ ವಿರಾಗತೆ, ಅಶಾಂತಿಕತೆ, ಪ್ರೇಮಗಳಿಗೆ ಸ್ಥಾನವಿದ್ದಿತೊ ಅವರ ಅರ್ಧಾಂಶವನ್ನಾದರೂ ಈಶ್ವರನಿಗೆ ಅಸನವಾಗಿ ಕೊಡಲಾಪೆನಾದರೆ, ನನಗೆ ಮುಕ್ತಿಯುಂಟಾಗುವುದು! ಆವ ರಾಜ್ಯದಲ್ಲಿ ಜಾತಿಭೇದವೆಂಬುದು ಇಲ್ಲವೊ ಅಂತಹ ರಾಜ್ಯದಲ್ಲಿ ಜೀವನವನ್ನು ಪಡೆವೆನು ಮತ್ತೀ ಪಾರ್ಥಿವಹೃದಯದ ಯಾತನೆಗಳೆಲ್ಲವೂ ದೂರವಾದೊಡನೆಯೇ ಆ ರಾಜ್ಯವನ್ನು ಸೇರುವೆನು.

ಬೇಗಮಳು ಇನ್ನಾವ ಮಾತನ್ನೂ ಆಡಲಿಲ್ಲ. ಆವಳು ಕಮಲೆಯನ್ನು ಸೋದರಿಯಂತೆ ಪ್ರೀತಿಸುತ್ತಿದ್ದಳು. ಆದುದರಿಂದಲೇ ಆವಳ ಗೃಹಪ್ರತಿಜ್ಞೆಯು ಸಾಂಗವಾಗುವಂತೆ ಆವಳನ್ನು ಆಗತ್ಯವಾಗಿಯೂ ಹೋಗಬಹುದೆಂದು ಅಪ್ಪಣೆ ಕೊಟ್ಟಳು. ಕಮಲೆಗೆ ಬಹು ಬೆಲೆಯುಳ್ಳದೊಂದು ಮುಕ್ತಾಮಾಲೆಯನ್ನು ಉಪಕಾರವಾಗಿ ಕೊಡುವೆನೆಂದಳು. ಕಮಲೆಗೆ ಅದರಿಂದ ಉಪಯೋಗವೇನೂ ಇಲ್ಲದ್ದರಿಂದ ಕಮಲೆಯು ಅದನ್ನು ಸ್ವೀಕರಿಸಲಾರದೆ ಹೋದಳು. ಆಗ ಬೇಗಮಳು ತನ್ನ ಕೈ ಬೆರಳಿನದೊಂದು ಉಂಗುರವನ್ನು ಅವಳಿಗೆ ಕೊಟ್ಟು ಇದರ ಬೆಲೆಯು ಕಡಿಮೆಯಾದರೂ ಇದು [illegible] ವಸ್ತುವು ನನ್ನನ್ನು ಎಂದಾದರೂ ನೀನು ನೋಡಬೇಕಾದರೆ ಅಥವಾ ಯವನಾಧಿಕಾರದೊಳಗೆ ಎಂದಾದರೂ ನೀನು ಸಿಕ್ಕಿಬಿದ್ದರೆ ಆಗ ಇದೇ ನಿನ್ನನ್ನು ಉದ್ಧಾರಮಾಡುವುದು ಎಂದಳು. ಕಮಲೆಯು ಅದನ್ನು ಚುಂಬಿಸಿ ಪಡೆದಳು. ತನಗೇನೂ ಇದರ ಆವಶ್ಯವಿಲ್ಲದೆ ಇದ್ದರೂ ಬೇಗಮಳಿಗೆ ತೃಪ್ತಿಯುಂಟಾಗಲೆಂದೇ ಅದನ್ನು ಪಡೆದುದಾಗಿದ್ದಿತು. ಬೇಗ

ಮಳು ಮೋತೀಮಹಲಿನ ದ್ವಾರದವರೆಗೂ ಬಂದು ಕಮಲೆಯನ್ನು ಕಳುಹಿಸಿಕೊಟ್ಟಳು. ಆದರೂ ಕಮಲೆಯನ್ನು ಕಳುಹಿಸಿಕೊಡುವುದೆಂದರೆ ಅವಳಿಗೆ ತೀವ್ರ ವ್ಯಥೆಯುಂಟಾಯಿತು.

ಇಪ್ಪತ್ತನೆಯ ಪರಿಚ್ಛೇದ.

ಸುಖದುಃಖಗಳು ಮನುಷ್ಯನ ಜೀವನಕಾಲದಲ್ಲಿ ನಡೆಸುತ್ತಿರುವ ಅಸೀಮ ಅಧಿಕಾರವನ್ನು ನಾವೆಲ್ಲರೂ ಅವನತಶಿರರಾಗಿ ಒಪ್ಪಿಕೊಳ್ಳಲೇ ಬೇಕಾಗಿದೆ. ಅಕಬರಷಾಹನೂ ಯಾವಾಗ ಮನುಷ್ಯಮಾತ್ರನಾದನೋ, ಆಗ ಈ ಸೂತ್ರಕ್ಕೆ ವಿರೋಧವಾಗಿ ವರ್ತಿಸಲು ಅವನಿಗಾದರೂ ಸಾಮರ್ಥ್ಯವುಂಟಾಗಬಹುದೆಂಬುದು ಹೇಗೆ? ಅರಿಗೆ ವಿಪುಲವಾದ ಸಾಮರ್ಥ್ಯವಿರಬಹುದೋ, ಜನನ ಧನಸಂಪತ್ತಿನ ಯಥೇಷ್ಟತೆಯು ಗಾದೆಗೆ ಬಂದಿರುವುದೋ, ಅದ ಸುಖ್ಯಾತಿಯಿಂದ ದಿಗಂತವೆಲ್ಲವೂ ಪೂರ್ಣವಾಗಿದೆಯೋ— ಅಂತಹ ಬಾದಷಾಹಕುಲತಿಲಕನಾದ ಅಕಬರನು ಇಂದು ಮರ್ಮಾಂತಿಕ ದುಃಖದಿಂದ ಮಿಡಿಯುವವನಾಗಿಹನು. ಬೇರೆಯವರ ಮಾತಂತಿರಲಿ, ತನ್ನ ಮಗನೇ ಆಗಿರುವ ಸಲೀಮನೇ ತನ್ನನ್ನು ಸಿಂಹಾಸನದಿಂದೋಡಿಸುವ ಕುಟಿಲಪ್ರಯತ್ನದಲ್ಲಿ ಮಗ್ನನಾಗಿಹನಲ್ಲ, ಸ್ಥಾನಸ್ಥಾನಗಳಲ್ಲೂ ವಿಪ್ಲವಾಗ್ನಿಯು ಪ್ರಜ್ವಲಿಸುತಲೇ ಇದೆಯಲ್ಲ, ಪಿತೃವಿನ ರಾಜತ್ವವನ್ನು ಅವನು ಅಪಹರಿಸುತಲಿರುವನಲ್ಲ,—ಆದರೂ ಅಕಬರನು ದುಃಖಿತನಾಗದೆ ಮಗನನ್ನು ಕರೆಯಕಳುಹಿಸಿ, ಅವನನ್ನು ಸ್ನೇಹಭರದಿಂದ ಆಲಿಂಗಿಸಿಕೊಂಡು, ಅಳತೊಡಗಿದನು. ಮಗನ ಪೀಡಕವಾದ ಅಂತಃಕರಣವನ್ನು ಚಿಂತಿಸುತಲಿದ್ದುದರಿಂದ ಇಂಥ ರೋದನವು ಉಂಟಾದುದಲ್ಲದೆ, ಕೋಪವು ಉದ್ರೇಕಗೊಂಡುದರಿಂದಲ್ಲ. ಸಲೀಮನಿಗೆ ಉನ್ಮಾದರೋಗವು ಹಿಡಿದಿದೆಯೆ? ಚಿಕಿತ್ಸಕನನ್ನು ಕರಿಸಿ ಔಷದೋಪಚಾರ ಮಾಡಿಸಲಾಗದೆ? ಇನ್ನಿದನ್ನು ಸಹಿಸಲಾಗುವುದಿಲ್ಲ.

ಸಲೀಮನ ಅತ್ಯಾಚಾರಗಳು, ತಂದೆಯ ಮೇಲಣ ಅಶ್ರದ್ಧೆ, ಮುಂತಾದುವನ್ನು ಕಂಡು ಬಾದಷಾಹನ ಆರೋಗ್ಯವು ಕೆಟ್ಟುಹೋದುದು. ಇದೂ ಸಾಲದೆಂಬಂತೆ ಅವನಿಗೆ ಪುತ್ರಶೋಕವೂ ಉಂಟಾದುದು. ಇವೆರಡುಬಗೆಯ ಯಾತನೆಗಳಿಂದ ಪ್ರಪೀಡಿತನಾದ ಬಾದಷಾಹನಿಗೆ ಜೀವನದ ಆಸೆಯು ಪ್ರತಿ ಮುಹೂರ್ತದಲ್ಲಿಯೂ ಕಡಿಮೆಯಾಗುತ ಬಂದಿತು. ಪ್ರಜೆಗಳೆಲ್ಲರೂ ಹಾ ಯೆಂದು ಬಿಸುಸುಯ್ಯತೊಡಗಿದರು. ಎಲ್ಲರೂ ವಿಷಾದಿತರು. ಮುಂದೆ ದಿಲ್ಲಿಗೆ ಅರಸನಾಗುವಾತನು ಆರೆಂದು ಎಲ್ಲರೂ ಭಾವಿಸತೊಡಗಿದರು. ಹೆದ್ದಾರಿಯಲ್ಲಿ—ನದೀತೀರದಲ್ಲಿ—ಪ್ರಾರ್ಥನಾಮಂದಿರಗಳಲ್ಲಿ ಮನೆ ಮಠಗಳಲ್ಲೆಲ್ಲಿಯೂ ಇದುವೆಯೊಂದು ವಿಷಯವನ್ನು ಕುರಿತು ಆಂದೋಲನವುಂಟಾಯಿತು.

ಹಿಂದುವಾಗಲಿ ಮುಸಲಮಾನನಾಗಲಿ ಪ್ರತಿಯೊಬ್ಬನೂ ಸಲೀಮನು ಬಾದಷಾಹನಾಗಬಾರದೆಂದೇ ಇಚ್ಛೆಸುತಲಿದ್ದನು. ಆವ ಪುತ್ರನು ಬಾದಷಾಹಾ ಅಕಬರನಂತಹ ತಂದೆಗೆ ವಿರೋಧವಾಗಿ ಆಚರಣೆಯನ್ನಾರಂಭಿಸಿದನೋ ಅಂತಹನಿಗೆ ಅಸಾಧ್ಯವಾದ ದುಷ್ಕರ್ಮಗಳು ಅವುವಿರಬಹುದು ? ಅಂತಹನನ್ನು ತಮ್ಮ ಇಹಜೀವನದ ವಿಧಾತನಾಗಿ ಯಾರುತಾನೇ ಕಾಣಲಾಪುವರು ? ಕಿನ್ತು, ಮೃತ್ಯುಶಯ್ಯೆಯಲ್ಲಿದ್ದ ವೃದ್ಧ ಬಾದಷಾಹನು ಸಲೀಮನನ್ನು ಕರೆಸಿದನು ಪುತ್ರನ ಸಕಲದೋಷಗಳನ್ನೂ ಕ್ಷಮಿಸಿ, ಮುಂದಕ್ಕೆ ಅವನೇ ದಿಲ್ಲಿಯ ಸಮ್ರಾಜನೆಂದು ಸ್ಥಿರಮಾಡಿದನು. ಪ್ರಜಾಪಾಲನೆಯ ರೀತಿನೀತಿಗಳನ್ನು ಬಲು ಚೆನ್ನಾಗಿ ಬೋಧಿಸಿದನು. ನಿನ್ನ ಮೇಲೆ ಪ್ರಜೆಗಳಿಗೆ ಶ್ರದ್ಧೆಯೂ. ಭಕ್ತಿಯೂ ಇಲ್ಲ. ಅಂತಹ ಶ್ರದ್ಧಾಭಕ್ತಿಗಳು ಅವರಲ್ಲಿ ಉಂಟಾಗುವಂತೆ ನೀನು ಯೋಗ್ಯನಾಗು. ಮಾನಸಿಂಹನೂ ಖುಸರೂವಿನ ಮಾವನೂ ಪ್ರತಾಪಶಾಲಿಗಳು ಅವರಿಬ್ಬರೂ ಖುಸರೂವಿಗೆ ರಾಜ್ಯದೊರೆವಂತೆ ಪ್ರಯತ್ನದಿಂದ ನಿನ್ನ ರಾಜತ್ವಕಾಲದಲ್ಲೂ ಅಶಾಂತಿಯನ್ನು ಸರ್ವದಾ ಬೀರುತಲಿರದಂತೆ ಕೌಶಲದಿಂದ ವರ್ತಿಸುವನಾಗು. ಖುಸುರೂವು ಧೈರ್ಯಹೃದಯವುಳ್ಳಾತನು. ಅವನಿಗೆ ವಿರುದ್ಧವಾಗಿ ಅತ್ಯಾಚಾರಮಾಡದಿರು. ಮೊಹೇರೇನ್ನೇಸಾಳನ್ನು ಇಷ್ಟು ದಿನಗಳಲ್ಲಿ ನೀನು ಮರೆತಿರಬಹುದು. ಇಲ್ಲದಿದ್ದರೆ ಮರೆತು ಬಿಡುವುದುಚಿತವೆಂದು ಉಪದೇಶಿಸಿದನು.

ಅರಸನ ಇಚ್ಛೆಗೆ ವಿರುದ್ಧವಾಗಿ ಆಚರಿಸುವುದು ಪ್ರಜೆಗಳ ಧರ್ಮವಲ್ಲವಾದುದರಿಂದ ಬಾದಷಹನ ಅಭಿಪ್ರಾಯವನ್ನು ತಿಳಿದ ಎಲ್ಲರೂ ಸಲೀಮನಿಗೆ ಜಯವಾಗಲೆಂದು ಘೋಷಿಸತೊಡಗಿದರು. ಬಾದಷಹನ ಅಭಿಪ್ರಾಯಕ್ಕೆ ಅನುಸಾರವಾಗಿಯೇ ಎಲ್ಲರೂ ಕಾರ್ಯವನ್ನು ಮಾಡುವೆವೆಂದು ದೃಢಪ್ರತಿಜ್ಞೆಮಾಡಿದರು. ಸಲೀಮನ ಅನಾಚಾರಗಳನ್ನೂ ಅಪರಾಧಗಳನ್ನೂ ಮರೆತು ಅವನನ್ನು ಪೂಜಿಸಲು ಉಜ್ಜುಗಿಸಿದರು. ವಾಚಕರೇ ಇದರಿಂದಲೇ ಊಹಿಸಿರಿ,—ಇಂತಹ ರಾಜಭಕ್ತರು ಇನ್ನೆಲ್ಲಿ ಇರಬಹುದು ?

ಇದಾದ ಕೆಲವುದಿನಗಳೊಳಗೆ ಪ್ರಾತಸ್ಮರಣೀಯನಾದ ಅಕಬರನು ಮಹಾನಿದ್ರೆಯಲ್ಲಿ ಮುಳುಗಿಹೋದನು. ಅದುವೆ ಕ್ಷಣದಲ್ಲಿ ಸಲೀಮನು ದಿಲ್ಲಿಯ ರಾಜಾಸನವನ್ನು ಏರಿ, ತನ್ನ ಕರ್ತವ್ಯತೆಯನ್ನು ಸ್ಥಿರಮಾಡಿಕೊಂಡನು. ಆದರೆ ಇಷ್ಟರಲ್ಲಿ ಎರಡು ಅಂತರಂಗದ ಕಾರ್ಯಗಳು ನಡೆದುವು. ಒಂದು,—ಸುಂದರಿಯಾದ ಮೆಹೆರ್‌ಉನ್ನಿಸಾಳ ಗಂಡನನ್ನು ಕೊಲ್ಲಿಸಿ ಅವಳಿಗೆ ನೂರಜಹಾನ ಬೇಗಮ.' ಎಂಬುವ ಹೆಸರನ್ನಿತ್ತು ಮಹಾಸಮಾರೋಹದಿಂದ ದಿಲ್ಲಿಗೆ ಬರಮಾಡಿಸಿದುದು ; ಖುಸರೂವನ್ನು ಬಂದಿಯಾಗಿ ಹಿಡಿತರಿಸಿ ಅವನ ಮಾವನನ್ನೂ ಮಾನಸಿಂಹನನ್ನೂ ತೀಕ್ಷ್ಣದೃಷ್ಟಿಯಿಂದ ಕಾಣುತ್ತಲಿರುವುದೇ ಎರಡನೆಯದು.

ಖುಸರೂವು ದಿಲ್ಲಿಯ ಸಿಂಹಾಸನವನ್ನು ಪಡೆಯುವುದಕ್ಕೆ ಪೇಚಾಡುತಲಿರುವನೆಂದು ಕಮಲೆಗೆ ತಿಳಿದಿದ್ದಿತು. ಅವನನ್ನು ಇಂದು ಬಂದಿಯಾಗಿರಿಸಿದರೆಂಬುವ ಗೋಪನಸಂವಾದವನ್ನು ಮಾನಸಿಂಹನು ಅವಳಿಗೆ ತಿಳುಹಿದನು. ಯೋಗ್ಯ ಜನಕ್ಕೆ ತಕ್ಕಂತೆ ಸಮಾಚಾರವು ತಿಳಿದಂತಾಯಿತು. ಅಯ್ಯೋ ಖುಸರೂ ನಿನ್ನ ಹೃದಯದಲ್ಲಿ ಈ ಕುಪ್ರವೃತ್ತಿಯು ಅದೇಕೆ ಉಂಟಾದುದೊ ? ತಂದೆಯು ಇನ್ನೂ ಇರುವಾಗ ಸಿಂಹಾಸನಾಧಿಕಾರದ ಮೇಲೆ ನಿನಗೆ ಇದೆಲ್ಲಿಯ ಇಚ್ಛೆ ? ಎಂದು ಭಾವಿಸಿದಳು.

ಕಮಲೆಯು ಖುಸರೂವಿನ ಈಗಣ ಸ್ಥಿತಿಯನ್ನರಿತೊಡನೆಯೆ ಅವನನ್ನು ಕಾರಾಗೃಹದಿಂದ ಬಿಡಿಸಬೇಕೆಂದು ಚಿಂತಿಸಿದಳು. ಉಪಾಯವೇ ತೋರದು ಪ್ರತಿದ್ವಾರದಲ್ಲೂ ಇಮ್ಮಡಿ ಪ್ರಹರಿಗಳು. ಆರನ್ನೂ ಒಳಕ್ಕೂ ಹೊರಕ್ಕೂ ನಡೆಯಗೊಡುವುದಿಲ್ಲ ಆಗ ಬೇಗಮಳು ತನಗೆ ಅಂದು

ಕೊಟ್ಟಿದ್ದ ಉಂಗುರದ ಸ್ಮರಣೆಯು ಅವಳಲ್ಲಿ ಉಂಟಾಯಿತು ಅದನ್ನು ಪ್ರಹರಿಗಳಿಗೆ ತೋರಿಸಿದೊಡನೆಯೆ ಕಮಲೆಯು ಆ ಗೃಹವನ್ನು ಪ್ರವೇಶಿಸಲು ಅನುಜ್ಞೆಯನ್ನು ಹೊಂದಿದಳು. ಅಲ್ಲಿಂದ ಖುಸರೂವಿನ ಶಯನ ಮಂದಿರಕ್ಕೆ ನಡೆದು ಅಲ್ಲಿ ನಿಶ್ಚಿಂತನಾಗಿ ಕೋಮಲವಾದ ಹಾಸಿಗೆಯ ಮೇಲೆ ಪವಡಿಸಿ ನಿದ್ದೆಹೋಗಿದ್ದ ಆ ರಾಜಕುಮಾರನನ್ನು ಕಂಡಳು. ಅಕಬರ ಷಾಹನ ಮರಣಸಂವಾದವು ಅದುವರೆಗೂ ಅಂತಃಪುರವನ್ನು ಪ್ರವೇಶಿಸಿರಲಿಲ್ಲವೆಂದು ಆಗಲೆ ಅವಳಿಗೆ ತಿಳಿಯಿತು. ಆದರೆ ಖುಸರೂವಿನೊಡನೆ ಮಾತನಾಡುವುದಾದರೂ ಅದೆಂತು ? ಮಾತನಾಡದೆ ಇರುವುದೆಂದರೂ ಅದೆಂತು ? ಇಷ್ಟು ದಿನಗಳ ದೃಢವ್ರತವನ್ನು ಈಗ ತ್ಯಜಿಸುವುದೆ ? ಆದರೂ ಬಾದಷಾಹನು ಮಡಿದುದನ್ನೂ ಖುಸರೂವನ್ನು ಬಂದಿಯಾಗಿ ಇರಿಸಿದುದನ್ನೂ ಖುಸರೂವಿನ ಕಿವಿಯಲ್ಲೇ ಪಿಸುಮಾತಿನಿಂದ ತಿಳಿಸಿದಳು. ಅದನ್ನು ಕೇಳಿದೊಡನೆಯೆ ನಿದ್ರಾಭಂಗವುಂಟಾದ ವ್ಯಾಘ್ರನಂತೆ ಅವನು ನೆಗೆದೆದ್ದನು. ಎದ್ದು ಅತ್ತಿತ್ತ ನೋಡುತ್ತಲೇ ಕ್ಷಣದೊಳಗಾಗಿ ದ್ವಾರದ ಹೊರಗೆ ಓಡಲು ಪ್ರಯತ್ನಿಸಿದನು. ಮೇಘವಿಲ್ಲದೆ ಇದೆಲ್ಲಿಯ ಗುಡುಗು ? ನನ್ನ ಅದೃಷ್ಟದಲ್ಲಿ ಅಸಂಭವವಾದುದು ಆವುದೂ ಇಲ್ಲ. ಇಲ್ಲದಿದ್ದರೆ ಆ ಕನಕ ಕಮಲೆಯನ್ನು ನಾನು ಅದೆಂತು ಕಳೆದುಕೊಂಡೆನು ? ಎಂದು ನುಡಿಯಲು, ಈ ಮಾತುಗಳನ್ನು ಕೇಳುತಲಿದ್ದ ಆ ಕಮಲೆಯು ಅಳಲು ತೊಡಗಿದಳು.

ಇಪ್ಪತ್ತೊಂದನೆಯ ಪರಿಚ್ಛೇದ.

[ನಿಷ್ಫಲವಾದ ಆಸೆ]

ಖುಸರೂವು ಜ್ಞಾನಶೂನ್ಯನಾದನು. ಬಾದಷಾಹನಾಗುವೆನೆಂಬುವ ಆ ಆಸೆಯು ಆದೆಲ್ಲಿ ? ಮತ್ತೀಗಲೇ ಬಂದಿಯಾಗಿರಬೇಕಾಗಿರುವ ಈ ಅವಸ್ಥೆಯು ಇದೆಲ್ಲಿ ? ಎಂತಹ ಭಯಂಕರಭಾಗ್ಯವಿಪರ್ಯಾಸ ! ಕಮಲೆಯು ಅವನನ್ನು ವರಿಸಿ ಧರ್ಮಪತಿತೆ

ಯಾಗಲಾರಳೆಂದು ಮಾನಸಿಂಹನು ಹೇಳಿದ್ದನಾದರೂ ಅವನು ಡಿಲ್ಲೀ ಸಿಂಹಾಸನವನ್ನೇರಿದೊಡನೆ ಕಮಲೆಯನ್ನು ವಿವಾಹಮಾಡಿಕೊಳ್ಳುವುದು ಅಸಾಧ್ಯವಾದುದಲ್ಲೆಂದೂ ಖುಸರೂವು ತಿಳಿದಿದ್ದನು. ಹೀಗಿರುವಾಗ ಬಾದಷಾಹನಾಗದೆ ಕಮಲೆಯನು ವಿವಾಹಮಾಡಿಕೊಳ್ಳುವ ಬೇರೆ ಉಪಾಯವೇ ಅವನಿಗೆ ತೋಚದು. ಹಿಂದಿನ ಆವಾವ ವೃತ್ತಾಂತಗಳೆಲ್ಲವೂ ಇಂದು ಅವನ ಸ್ಮರಣೆಗೆ ಬಂದುವು. ಕಮಲೆಯನ್ನು ತಾನು ಇದಕ್ಕೆ ಮೊದಲಾಗಿಯೇ ವರಿಸಲಿಲ್ಲವೇಕೆ? ಕಾಶ್ಮೀರ ವಿಜಯಕ್ಕಾಗಿ ಅದೇತಕ್ಕೆ ತೆರಳಿದನು? ಆದರೆ ಈ ಚಿಂತನೆಯಿಂದ ಫಲವೇನು?

ಅವನು ಹಾಗೆ ಓಡುತಲಿರುವಾಗ ಕಮಲೆಯು ಅವನಿಗೆ ಅಡ್ಡವಾಗಿ ನಿಂತು ಅವನ ಕಯನ್ನು ಹಿಡಿದಳು ಖುಸರೂವು ಕಯ್ಯನ್ನು ಬಲವಾಗಿ ಬಿಡಿಸಿಕೊಳ್ಳುವೆನೆಂದು "ಕಯ್ಯನ್ನು ಬಿಡು" ಎಂದನು ಕಮಲೆಯು "ಈ ದಾಸಿಯ ಪ್ರಾರ್ಥನೆಯನ್ನು ಲಾಲಿಸು. ಈಗಲೇ ಹೊರಕ್ಕೆ ಹೋದರೆ ಅಪಮೃತ್ಯುವುಂಟಾಗಬಹುದು" ಎಂದು ವಿಜ್ಞಾಪಿಸಿಕೊಂಡಳು. ಖುಸರೂವು ನಕ್ಕು "ಅದೆಂತು ನೋಡುವೆನು" ಎಂದನು. ಆಗ ಕಮಲೆಯು ಅವನ ಪಾದಗಳೆರಡನ್ನೂ ತನ್ನ ಕಯ್ಗಳಿಂದ, ಹಿಡಿದು "ನಿನ್ನನ್ನು ಹೋಗಗೊಡಲಾರೆ" ನೆಂದು ಬೇಡಿಕೊಳ್ಳಲು, ಕ್ರೋಧದಿಂದ ಖುಸರೂವು ತನ್ನ ಕಾಲ್ಗಳನ್ನು ಬಲವಾಗಿ ಎಳೆದನು. ಕಮಲೆಯು ಅದನ್ನು ತಡೆಯಲಾರದೆ ಒಮ್ಮೆ ಬಿದ್ದುಕೊಂಡರೂ ಪುನಃ ವೇಗವಾಗಿ ನಡೆದು ಅವನನ್ನು ತಡೆದಳು.

ಖುಸರು:—ಪುನಃ ಪೀಡಿಸುವೆಯೊ?

ಕಮಲೆ:—ನಾನು ಪೀಡಿಸಿದೆನೆಂತಾದರೆ ಕ್ಷಮಿಸಬೇಕು ಪರಂತು ಹೊರಕ್ಕೆ ಹೋಗಬಿಡಲಾರೆನು.

ಖುಸರು:—ನೀನು ಯಾರು?

ಕಮಲೆ:—ನಾನು ದಾಸಿ.

ಖುಸರು:—ನನ್ನನ್ನು ಕಾಪಾಡುವುದರಿಂದ ನಿನಗೆ ಲಾಭವೇನು?

ಕಮಲೆ:—ತಮ್ಮ ಅನ್ನದಿಂದಲೇ ನಾನು ಪ್ರತಿಪಾಲಿತೆಯಾದೆನು?

ಖುಸರು:—ಹಾಗಿದ್ದರೆ, ನನ್ನನ್ನೇಕೆ ಹೋಗಗೊಡುವುದಿಲ್ಲ?

ಕಮಲೆ:—ಉತ್ತರದಿಕ್ಕಿನ ದ್ವಾರದಲ್ಲಿ ಮಾನಸಿಂಹನ ಗುಪ್ತಚರರು ತಮ್ಮನ್ನು ವಿಪತ್ತುಗಳಿಂದ ರಕ್ಷಿಸುವರು. ಆ ಕಡೆಯಿಂದಲೇ ತೆರಳಬೇಕು.

ಖುಸರು:—ಇದೇ ನಾಚುಗೆಯ ಕೆಲಸ. ಡಿಲ್ಲಿಯ ಸಿಂಹಾಸನವನ್ನು ಪಡೆಯಲು ಯೋಗ್ಯನಾದವನು ಒಬ್ಬ ದಾಸಿಯ ಮಾತಿಗೂ ವಿಧೇಯನಾಗುವನೇ ?

ಇಂತೆಂದು ಖುಸರುವು ಅಲ್ಲಿಂದ ಮುನ್ನಡೆದನು. ಖುಸರೂ ನೀನೇನನ್ನು ಮಾಡಿದೆ? ಅಮೂಲ್ಯವಾದ ನಿನ್ನ ಪ್ರಾಣರತ್ನವನ್ನೇನೋ ಕಳೆದುಕೊಂಡೆ. ಕಮಲೆಯು ಹುಚ್ಚಿಯಾದಳು. ಖುಸರೂವು ಎಲ್ಲಿರುವನೆಂದು ವಿಚಾರಿಸುತ್ತ ಎಷ್ಟು ಕಷ್ಟಪಟ್ಟರೂ ಅವನ ಪತ್ತೆಯಾಗದೆ ಹೋಯಿತು. ಅವನೆಲ್ಲಿಗೆ ಹೋದನೆಂದು ಕಗ್ಗತ್ತಲಿನ ಆ ರಾತ್ರಿಯ ಅಂಧಕಾರಕ್ಕೆ ಮಾತ್ರ ತಿಳಿದಿರಬಹುದು.

ಇತ್ತ, ಅವನು ಬಾಗಲಿನ ಹೊರಕ್ಕೆ ಕಾಲನ್ನಿಟ್ಟೊಡನೆಯೇ ಇಬ್ಬರು ಸೈನಿಕರು ಅವನ ಕಡೆ ಬಂದು ಬಾದಷಾಹನ ಅಪ್ಪಣೆಗನುಸಾರವಾಗಿ ತಮ್ಮನ್ನು ಬಂಧಿಯಾಗಿರಿಸಬೇಕಾಗಿದೆ ಎಂದು ಖುಸರೂವಿಗೆ ತಿಳಿಸಿದರು.

ಖುಸರು:—ನನ್ನ ಅಪರಾಧವೇನು ?

ಸೈನಿಕರು:—ನಾವರಿಯೆವು.

ಖುಸರೂವಿಗೆ ಈಗ ಬೋಧೆಯಾಯಿತು. ಆ ರಮಣಿಯ ಮಾತನ್ನು ಮೀರಿದುದು ಅನ್ಯಾಯವಾಯಿತೆಂದು ಈಗ ತಾನೆ ತಿಳಿಯಿತು. ಒಡನೆಯೆ ಈ ದಾರಿಯಿಂದ ಆರಾದರೂ ಹೊರಕ್ಕೆ ಹೋದರೆ ? ಎಂದು ಕೇಳಿದನು.

ಸೈನಿಕರು:— ಈ ದಾರಿಯು ಸಾಮಾನ್ಯರಿಗೆ ಸಾಧ್ಯವಾದುದಲ್ಲ. ಎಲ್ಲರಿಗೂ ಪ್ರತಿಬಂಧಕವಾದುದು. ಆದರೆ ಅವಳೋ ಒಬ್ಬ ದಾಸಿಯು ಮಾತ್ರ ಇಂಗಿತಸೂಚಕವಾದ ಉಂಗುರವನ್ನು ತೋರಿಸಿ ಒಳಕ್ಕೆ ನಡೆದಿದ್ದಳು.

ಖುಸರು:—ದಾಸಿ ! ಯಾವ ದಾಸಿ ?

ಸೈನಿಕ:—ಅವಳಾರೊ ಒಬ್ಬ ಹಿಂದೂ ಹೆಸರಿನವಳು.

ಖುಸರೂವು ಮೊದಲೇ ಜ್ಞಾನತಪ್ಪಿದ್ದನು. ಆದರಮೇಲೂ ಅಂಧಕಾರಮಯವಾದ ಸುರಂಗದ ಹಾದಿಯಲ್ಲಿ ತನ್ನನ್ನು ತಡೆದವಳಾರೆಂದು ಕಾಣ

ಲಾಗದೆ ಇದ್ದನು ಹೀಗೆ ಆ ಹಿಂದೂ ದಾಸಿಯು ಸ್ಮರಣೆಯೇ ಅವನಿಗೆ ಬಾಧಕವಾಯಿತು. ತನ್ನನ್ನೆಲ್ಲಿಗೆ ಬೇಕೊ ಅಲ್ಲಿಗೆ ಕರೆದುಕೊಂಡು ಹೋಗಿ! ಆದರೆ ಮಾನಸಿಂಹನೊಡನೆ ಮಾತ್ರ ನಾನು ಎರಡು ಮಾತುಗಳನ್ನು ಆಡಬೇಕಾಗಿದೆ. ಎಂದು ಸೈನಿಕರಿಗೆ ತಿಳಿಸಲು, ಆ ಕೊನೆಯ ಮಾತಿಗೆ, ತಾವು ವಿಧೇಯರಾಗಲು ತಮಗೆ ಆದೇಶವಿಲ್ಲೆಂದು ಅವರು ಬಿನ್ನವಿಸಿ ತಮ್ಮ ಜತೆಯಲ್ಲೇ ಖುಸರೂವನ್ನಿರಿಸಿಕೊಂಡು ಆಯುಧಪಾಣಿಗಳಾಗಿ ನಡೆದರು.

ಇಪ್ಪತ್ತೆರಡನೆಯ ಪರಿಚ್ಛೇದ.

[ಬಂದಿ]

ಬಾದಷಹನಾದ ಅಕಬರಬಾದಷಹನಿಗೆ ಪೌತ್ರನೂ, ಪ್ರತಾಪಾನ್ವಿತನಾದ ಮಾನಸಿಂಹನಿಗೆ ಭಗಿನೀ ಪುತ್ರನೂ ಆದ ಷಹಾಜಾದಾ ಖುಸರೂವು ಇಂದು ಬಂದಿಯಾಗಿರುವನು. ಅಕಬರನ ಮರಣಾನಂತರ ತನ್ನ ಸಹೋದರಿಯ ಮಗನು ದಿಲ್ಲಿಯ ಸಿಂಹಾಸನವನ್ನು ಅಲಂಕರಿಸಲೆಂಬುವ ಆಸೆಯೊಂದು ಮಾನಸಿಂಹನಲ್ಲಿ ಎಷ್ಟೋ ಕಾಲದಿಂದ ಇದ್ದುದು. ಅವನು ಚಕ್ರವರ್ತಿಯಾದರೆ ಅದೊಂದು ಸುಖದ ವಿಷಯವೇ ಆದರೂ ಮಗನಿಂದ ತಂದೆಯನ್ನು ಸಿಂಹಾಸನ[illegible]ಗೊಳಿಸುವುದು ಅಪಮಾನಕರವಾದ ಕಾರ್ಯವೆಂದು ಅವನಿಗೆ ಸಹಜವಾಗಿಯೂ ತಿಳಿದೇ ಇದ್ದಿತು. ಆದರೆ ಮಾನಸಿಂಹನ ಉತ್ತೇಜನದಿಂದ ಖುಸರೂವು ಎಷ್ಟರ ಮಟ್ಟಿಗೆ ಸಿಂಹಾಸನಾಧಿಕಾರದ ಆಸೆಯನ್ನು ಬಲಮಾಡಿಕೊಂಡನೆಂಬುದನ್ನು ಪುನಃ ಇಲ್ಲಿ ಹೇಳಬೇಕಾದುದಿಲ್ಲ.

ರಾತ್ರಿ ಹನ್ನೊಂದು ಘಂಟೆ ಈಗಲೂ ಖುಸರೂವು ಚಿಂತಾಮಗ್ನನಾಗಿರುವನು. ತಾನು ಬಾದಷಹನಾಗುವೆನೋ ಅಥವಾ ಬಂದಿಯಾಗಿಯೇ ಇರಬೇಕಾಗುವುದೊ ಎಂಬುವುದೊಂದೇ ಚಿಂತೆ. ಇದಾದರೂ ಪ್ರಗಾಢ

ವಾಗಿರದೆ ಇರುವುದೂ ಸಂಭವವೇ. ಒಬ್ಬಳು ಹಿಂದೂದಾಸಿಯು ಈ ಮಾರ್ಗವಾಗಿಯೇ ನಡೆದಳಂತೆ !— ಎಂದರೆ ಕಮಲೆಯೂ ಬಂದಿಯಾದಳೆ ! ಅವಳೇ ನಿಶ್ಚಯವಾಗಿಯೂ ನನ್ನ ಆ ಕಮಲೆ ಅವಳಲ್ಲದಿದ್ದರೆ ಮತ್ತಾರು ತಾನೆ ನನಗಾಗಿ ಅಷ್ಟು ಪೇಚಾಡುವಳು ! ಮತ್ತಾ ಸ್ವರವಾದರೊ ಅದೇ ಅಸ್ವರ್ಗೀಯ ಮಧುಮಯವಾದ ಮಧುರಸ್ವರ. ಕಮಲೆ ಪ್ರಾಣಾಧಿಕೆ ಯಾದ ಕಮಲೆ, ನಾನು ಕಯ್ಯಲ್ಲಿ ಮಾಣಿಕ್ಯವನ್ನು ಪಡೆದು ಒಡನೆಯೆ ಅದನ್ನು ಕಳೆದುಕೊಂಡೆನು ! ಪ್ರಾಣೇಶ್ವರಿ, ನಿನ್ನನ್ನು ಕಾಣುವುದು ಅದೆಂದಿಗೊ; ಈ ಕಾರಾಗಾರವೇ ನನಗೆ ಸಮಾಧಿಸ್ಥಾನವಾದರೂ ಆಗಬಹುದು. ಆ ಅಂಧಕಾರಮಯವಾದ ಗೋರಿಯಲ್ಲಿ ನಿನ್ನ ಮುಖಚಂದ್ರನ ಕಿರಣಗಳು ಬೀರಲಾರವು. ನಿನ್ನ ಅಮೃತಲಹರಿ ವಾಕ್ಯಸುಧೆಯೂ ನನ್ನ ಕರ್ಣಕುಹರವನ್ನು ಪರಿತೃಪ್ತವಾಗಿ ಮಾಡದು !! ಇಂತೆಂದು ಎಳೆಯ ಬಾಲಕನಂತೆ ಅಳಲು ತೊಡಗಿದನು ಪುನಃ " ವಿಧಾತನೆ, ನಿನ್ನಿಂದ ಸೃಷ್ಟಿಸಲ್ಪಟ್ಟ ಪದಾರ್ಥಗಳೆಲ್ಲಲ್ಲ ಪ್ರಣಯಕ್ಕೆ ಸರಿಯಾಗಿ ಮಧುರವಾದುದು ಮತ್ತೊಂದಿಲ್ಲವಾದರೂ ಅದರಲ್ಲಿ ನಿಷ್ಠುರತೆ ಅದೆಲ್ಲಿಯದು ? ಪ್ರೇಮಿಕನಿಗೆ ಪರಿತೃಪ್ತಿಯುಂಟಾಗದೇಕೆ ? ಎಂದು ನಿಟ್ಟುಸಿರಿಟ್ಟನು.

ಅಷ್ಟರಲ್ಲಿ ಆ ಅಂಧಕಾರಮಯವಾದ ಕೋಣೆಯ ದ್ವಾರಗಳು ತೆರೆಯಲ್ಪಟ್ಟುವು. ಕಯ್ಯಲ್ಲಿ ದೀಪವನ್ನು ಹಿಡಿದುಕೊಂಡಿದ್ದ ಮುದುಕನೊಬ್ಬನು ಒಳಕ್ಕೆ ಬಂದನು ಇವನೇ ಅಮೀರಖಾನನು.

ಮುಸರು:—ನೀನಿಲ್ಲಿಗೆ ಬಂದುದೇಕೆ ?

ಅಮೀರ:—ನಿನ್ನ ವಿಮೋಚನೆಗಾಗಿ

ಮುಸರು:— ನಾನು ಬಂದಿಯಾಗಿರುವೆನೆಂದು ನಿನಗೆ ತಿಳಿಸಿದವರಾರು?

ಅಮೀರ:—ಮಹಾರಾಜಾ ಮಾನಸಿಂಹನು. ಆತನೇ ನನ್ನನ್ನಿಲ್ಲಿಗೆ ಕಳುಹಿಸಿದನು. ಇನ್ನು ಅರ್ಧಕ್ಷಣವೂ ವಿಳಂಬಮಾಡಲಾಗದು. ತಾವು ಈಗಲೇ ಇಲ್ಲಿಂದ ತೆರಳಬೇಕು. ಹೊರಕಂದಕದ ಪೂರ್ವ ಮೂಲೆಯಲ್ಲಿ ಒಂದು ವ್ಯಕ್ತಿಯಿರುವುದು. ಆತನು ತಮಗೊಂದು ಕುದುರೆಯನ್ನು ತಂದಿರುವನು. ನೀವು ಅದನ್ನೇರಿ ತಕ್ಷಣವೇ ಜಯಪುರಕ್ಕೆ ಪಲಾಯನ ಮಾಡಬೇಕು. ಯುದ್ಧಕ್ಕೆ ಸಿದ್ಧನಾಗಿದೆ. ತಮ್ಮನ್ನು ಬಾದಷಹ

ನನ್ನಾಗಿ ಮಾಡಬೇಕೆಂದು ಮಾನಸಿಂಹನು ವ್ಯಸ್ತನಾಗಿರುವನು. ತಾವೀ ಗಲೇ ಪಲಾಯನವಮಾಡದಿದ್ದರೆ ಇಷ್ಟೆಲ್ಲವೂ ವ್ಯರ್ಥವಾಗಿ ತಮಗೂ ಮಹ ದಾಪತ್ತು ಸಂಭವಿಸಬಹುದು.

ಖುಸರು:—ಒಂದು ಮಾತಿದೆ. ಕಮಲೆಯೆಲ್ಲಿರುವಳು ?

ಅನಿಾರ:—ಅದನ್ನು ಕುರಿತು ಮತ್ತೆ ವಿಜ್ಞಾಪಿಸಿಕೊಳ್ಳುವೆನು.

ಆಗಲೇ ಖುಸಿರೂವು ತನ್ನ ಕೊರಳಿನಿಂದ ಒಂದು ಅಮೂಲ್ಯವಾದ ವಜ್ರಹಾರವನ್ನು ಅಮಾರಖಾನನಿಗೆ ಕೊಟ್ಟು, ಅದನ್ನೀಗಲೇ ತಿಳಿಸಬೇ ಕೆಂದು ಕೇಳಿಕೊಂಡನು.

ಅಮಾರ:—ಇಂತಹ ಸಾಮಾನ್ಯಕಾರ್ಯಕ್ಕಾಗಿ ಒಂದು ವಜ್ರಹಾರ ವನ್ನು ಪಡೆಯಲು ನಾನು ಅಯೋಗ್ಯನು.

ಖುಸರು:—ಅಮಾರನೇ, ನಾನು ಬಂದಿಯಾದರೂ ಒಮ್ಮೆಗೆ ಫಕೀರ ನಾದೆನೆಂದೂ ಎಣಿಸಿ, ನಾನಿತ್ತ ಪುರಸ್ಕಾರವನ್ನೂ ತಿರಸ್ಕರಿಸಬೇಡ.

ಅಮಾರ:—ಈಶ್ವರಸಾಕ್ಷಿಯಾಗಿಯೂ ನಾನು ಹಾಗೆ ಎಣಿಸಿದುದಿಲ್ಲ. ಆ ಹಾರವನ್ನು ನನಗೆ ಶಿರೋರತ್ನವಾಗಿ ಇರಿಸಿಕೊಂಡನು. ಕ್ಷಮಿಸಬೇಕು. ನಾನು ಕಮಲೆಯನ್ನು ಬೇಗಮಳ ದಾಸಿಯಾಗಿ ಇರಿಸಿದ್ದೆನು. ಆದರೆ ಅವಳ ತಾಯಿಗೆ ಮೃತ್ಯುವುಂಟಾದಂದಿನಿಂದ ಅವಳು ಅದೆಲ್ಲಿಗೋ ಹೋಗಿರುವಳಂತೆ

ಖುಸರು:—ಅದಾವಾಗ ?

ಅಮಾರ:—ಕೆಲವು ದಿನಗಳಾಗಿರುವುವು. ಈಗ ಅವಳೆಲ್ಲಿರುವಳೋ ತಿಳಿಯಲಿಲ್ಲ. ತಾವು ಎಲ್ಲಿ ಅಸ್ತ್ರವಿದ್ಯೆಯನ್ನು ಕಲಿತುಕೊಳ್ಳುತಲಿದ್ದಿರೋ ಅದಕ್ಕೆ ಸಮಾಪವಾದೊಂದು ಸ್ಥಳದಲ್ಲೇ ಅವಳ ನಿವಾಸವಿದ್ದಿತು. ಇನ್ನು ವಿಳಂಬಮಾಡಲಾಗದು ಹೊರಡಬೇಕು ಖುಸರೂವು ಬೇರೆ ಯಾವ ಮಾತನ್ನೂ ಎತ್ತದೆ, ಅಲ್ಲಿಂದ ಪಲಾಯನಮಾಡಿದನು. ಮಾನಸಿಂಹಾ, ಯಾವನನ್ನು ನೀನು ಡಿಲ್ಲಿಯ ಸಿಂಹಾಸನದಮೇಲೆ ಕುಳ್ಳಿರಿಸುವೆನೆಂದು ಪ್ರೇಟಾಟಪಡುತಲಿರುವೆಯೊ ಅವನ ತಲೆಯಲ್ಲಿ ಆ ಭಾವನೆಯೇ ಇಲ್ಲ. ಕೇವಲವಾಗಿ ಆ ಹಿಂದೂ ದಾಸಿಯ ಸ್ಮರಣೆ ಮಾತ್ರ ಇದೆ.

ಇಪ್ಪತ್ತಮೂರನೆಯ ಪರಿಚ್ಛೇದ.

[ಮಹಾರಾಜಾ ಮಾನಸಿಂಹ]

ಖುಸರೂವು ಗೋಪನದಲ್ಲಿ ಮಾನಸಿಂಹನಿದ್ದಲ್ಲಿಗೆ ತೆರಳಿ, ಮೊದಲಾಗಿ, ಕಮಲೆಯು ಎಲ್ಲಿರುವಳೆಂಬುದು ನಿಮಗೆ ತಿಳಿದಿರುವುದೇ ಎಂದನು.

ಮಾನಸಿಂಹ:—ಅದಕ್ಕೆ ಇದೇ ಸಮಯವೋ?

ಖುಸರು:—ಸಮಯವು ಇದೇತಾನೆ. ನನ್ನದೆಲ್ಲವೂ ಮುಗಿಯುತ್ತಿರುವಾಗ ಅಳಿಯನ್ನೊಮ್ಮೆಯಾದರೂ ನೋಡಲೇ ಬೇಡವೆ?

ಮಾನಸಿಂಹ:—ನಿನ್ನದಾವುದೂ ಮುಗಿಯುತ್ತಿರುವುದಿಲ್ಲ.

ಖುಸರು:—ನನಗೆ ಹೆಚ್ಚಿನ ಆಸೆಯಾವುದೂ ಇಲ್ಲ.

ಮಾನಸಿಂಹ:—ನಿನ್ನ ಕಾಪುರುಷತ್ವವೆಂದರೆ ಇದೇ. ಅಕಬರಷಹನು ಬಾದಷಹನಾದನು. ಹುಮಾಯೂನನು ವಿಪತ್ತುಗಳನ್ನೆಲ್ಲ ಅತಿಕ್ರಮಿಸಿದನು ನಿನಗಾದರೋ ಯಾವ ಆಸೆಗಳೂ ಇಲ್ಲ ಕೇವಲ ಅಲ್ಪಾಸೆ ಮಾತ್ರವಿದೆ.

ಖುಸರು:—ಅವರಾದರೋ ಪುಣ್ಯಾತ್ಮರು ನಾನು ಪಾಪಿ. ಆದುದರಿಂದಲೇ ನನ್ನಲ್ಲಿ ಅಂತಹ ಆಸೆಗಳಿರವು.

ಮಾನಸಿಂಹ:—ಈಗ ಕಮಲೆಯನ್ನು ಕಂಡರೆ ಎಲ್ಲವೂ ಸರಿಯಾಗುವುದೆ?

ಖುಸರು:—ನಿಶ್ಚಯವಾಗಿಯೂ ಹಾಗೆಯೇ ಸರಿ.

ಮಾನಸಿಂಹ:—ಹಾಗಿದ್ದರೆ ಅವಳನ್ನು ಕಂಡಿದ್ದರೂ ಅವಳನ್ನು ಗುರುತಿಸಲಿಲ್ಲವೇಕೆ?

ಅವಳು ಬಾದಷಹನ ಮರಣವನ್ನು ನಿನಗೆ ತಿಳಿಸಿ ನಿನ್ನ ಕಾಲ್ಗಳನ್ನು ಬಿಗಿಹಿಡಿದು ನೀನು ಹೊರಕ್ಕೆ ಹೋಗಬಾರದೆಂದು ಕೇಳಿಕೊಂಡರೂ ಅವಳನ್ನು ಮಾನಿಸಲಿಲ್ಲವೇಕೆ?

ಖುಸರೂವಿಗೆ ತಲೆಯೊಡೆದಂತಾಯಿತು. ವಿಶಾಲವಾದ ಅವನ ಕಣ್ಣುಗಳೆರಡರಿಂದಲೂ ನೀರು ಉಕ್ಕುತ್ತಲಿಳಿಯಲಾರಂಭಿಸಿತು. ನಾನು ಪಿಶಾಚನು. ನರಾಧಮನೆಂದರೆ ನಾನೇ. ಎಂದು ರೋದಿಸಿದನು.

ಮಾನಸಿಂಹ:—ಈಗ ಅನುತಾಪದಿಂದ ಫಲವಿಲ್ಲ.

ಖುಸರು:—ಇನ್ನು ಈಗ ಮಾಡುವುದೇನು? ಕಮಲೆಯನ್ನು ಪಡೆವುದೆಂದರೆ ಅದು ಹೇಗೆ?

ಮಾನಸಿಂಹ:—ನಿಶ್ಚಯವಾಗಿಯೂ ಧೈರ್ಯಧಾರಣೆಯೇ ಈಗ ನಿನಗೆ ಯೋಗ್ಯವು. ನೀನು ಬಾದಷಹನಾಗದೆ ಕಮಲೆಯನ್ನು ಆಶಿಸುವುದು ವ್ಯರ್ಥ. ಕಮಲೆಯು ಪಂಜಾಬಿನಲ್ಲಿರುವಳು. ನೀನು ಪಂಜಾಬಿಗೆ ಹೋದರೆ, ಅಲ್ಲಿ ಅವಳನ್ನು ಸುಲಭವಾಗಿ ಕಾಣಬಹುದು. ನಾನು ರಹಸ್ಯವಾಗಿ ಸೈನ್ಯಸಹಾಯವನ್ನೂ ಮಾಡುವೆನು. ನಿನ್ನ ಮಾವನೂ ನಿನ್ನನ್ನು ಸೇರುವನು. ಅಲ್ಲಿ ನಿನ್ನ ರಾಜ್ಯವನ್ನು ವಿಸ್ತರಿಸು. ಮತ್ತೆ ಈ ಕಡೆಗೆ ಬರಬಹುದು ನಿನಗೆ ರಾಜ್ಯಾಧಿಕಾರವು ಉಂಟಾದೊಡನೆಯೇ ಕಮಲೆಯು ನಿನ್ನನ್ನು ಕಾಣುವಳು.

ಖುಸರು:—ಈಗ ಬಾರಳೇಕೆ?

ಮಾನಸಿಂಹ:—ಇದು ಉಚಿತವಾದ ಸಮಯವಲ್ಲ.

ಖುಸರು:—ಹಾಗಿದ್ದರೆ ಇದೀಗಲೇ ಪಂಜಾಬಿಗೆ ನಡೆವೆನು. ಕಮಲೆಯನ್ನು ಕಂಡರೆ ಮಾತ್ರ ಇನ್ನೊಮ್ಮೆ ನಿಮ್ಮನ್ನು ಕಾಣುವೆನಲ್ಲದೆ ಅದಾಗದಿದ್ದರೆ ಇದಿಷ್ಟರಲ್ಲೇ ಪೂರೈಸಿತು.

ಮಾನಸಿಂಹ:—ಮಾವನ ಮನೆಗೂ ಹೋಗುವುದಿಲ್ಲವೆ?

ಖುಸರು:—ಗುಪ್ತವಾಗಿ ಕಳ್ಳನಹಾಗೆ? ಸರ್ವದಾ ಪ್ರಾಣಭಯದಿಂದ ಯಾರು ಇರಬೇಕಾಗಿದೆಯೋ. ಮತ್ತೊಬ್ಬರ ಅನುಗ್ರಹದ ಮೇಲೆ ಯಾರ ಜೀವನವು ನಿರ್ಭರವಾಗಿರುವುದೋ ಅಂತಹವನು ಸ್ತ್ರೀಪುತ್ರ ಆತ್ಮೀಯರನ್ನು ಕಾಣುವುದೆಂದರೆ ಅದೆಂತು? ಸ್ತ್ರೀಪುತ್ರರೆಂದರೂ ಯಾರು? ನಾನು ತಂದೆಗೆ ವಿರುದ್ಧವಾಗಿ ಯುದ್ಧಮಾಡಲು ಬದ್ಧಪರಿಕರನು. ತಂದೆಯು ನನ್ನನ್ನೇ ಬಂದಿಯಾಗಿರಿಸಿ ತ್ವರ್ಯದಲ್ಲೇ ನನ್ನ ಶಿರಚ್ಛೇದನವನ್ನು ಮಾಡಿಸಲು ಉತ್ಸುಕನು. ಹೀಗಿರುವಲ್ಲಿ ಯಾರಿಗಾಗಿ ಈ ಪ್ರಾಣವು ದುಃಖಪಡಬೇಕು? ನನಗೂ ಇತರರಿಗೂ ಸಂಬಂಧವೇ ಇಲ್ಲ.

ಮಾನಸಿಂಹನು ಇದಕ್ಕೆ ಯಾವ ಉತ್ತರವನ್ನೂ ಕೊಡಲಿಲ್ಲ. ಖುಸರೂವು ಪಂಜಾಬಿಗೆ ಹೊರಡಲನುಕೂಲವಾಗುವಂತೆ ಎಲ್ಲವನ್ನೂ ಸಿದ್ಧಗೊಳಿಸಿಕೊಟ್ಟನು.

ಕೆಲದಿನಗಳಲ್ಲಿಯೇ ಪಂಜಾಬಿನಲ್ಲಿ ಘೋರಸಮರಾನಲವು ಪ್ರಜ್ವಲಿತವಾದುದು. ಖುಸರೂವು ಲಾಹೋರನ್ನು ಜಯಿಸಿ ಎಲ್ಲ ಉಪನಗರಗಳನ್ನೂ ಸ್ವಾಧೀನಪಡಿಸಿಕೊಂಡನು. ತನ್ನ ಮಗನ ಈ ಅತ್ಯಾಚಾರಗಳನ್ನು ಸಲೀಮನು ಸಹಿಸಿಕೊಳ್ಳಲರಿಯದೆ ತಾನೇ ಯುದ್ಧಕ್ಷೇತ್ರದಲ್ಲಿ ಬಂದು ನಿಂತೊಡನೆ ಪಿತಾಪುತ್ರರಿಬ್ಬರಿಗೂ ಭೀಕರವಾದ ಯುದ್ಧವು ನಡೆದುದು. ಇಂದು ತಂದೆ, ನಾಳೆ ಮಗನು, ಹೀಗೆ ಜಯಾಪಜಯಗಳನ್ನು ಸ್ವೀಕರಿಸಿದರು. ಆದರೆ ಕೊನೆಗೆ ವಿಜಯಲಕ್ಷ್ಮಿಯು ಖುಸರುವನ್ನೇ ಅನುಗ್ರಹಿಸದುದನ್ನು ಬಾದಷಹನಾದ ಸಲೀಮನು ಕಂಡು ಭೀತನಾಗಿ ಪರಾಜಿತನಾಗಿ, ಡಿಲ್ಲಿಗೆ ಹಿಂತಿರುಗಿದನು.

ಇಪ್ಪತ್ತನಾಲ್ಕನೆಯ ಪರಿಚ್ಛೇದ.

[ಪಂಚಮಾಂಕ]

ಈ ಮಹಾಸಂಗ್ರಾಮದ ಸಮಯದಲ್ಲಿ ಒಂದು ದಿನ ಉದಯ ಕಾಲದಲ್ಲಿ ಷಾಹಜಾದಾ ಖುಸರೂವು ರಣಕ್ಷೇತ್ರಾಭಿಮುಖವಾಗಿ ಕುದುರೆಯನ್ನೇರಿ ಗೋಪನದಿಂದ ಸೈನ್ಯಗಳ ಚಲನೆಯ ಸ್ಥಾನವನ್ನು ನಿರ್ಧರಿಸಲು ಹೋಗುತ್ತಿದ್ದನು. ಆಗ್ಗೆ ಒಂದು ಮರದಡಿಯಲ್ಲಿ ಒಬ್ಬ ರಮಣಿಯು ಕುಳಿತಿರುವುದನ್ನು ಕಂಡನು. ಖುಸರೂವು ಕುದುರೆಯ ಲಗಾಮನ್ನೆಳೆದನು. ಆಗ ಅದಾರದೋ ಸ್ಮರಣೆಯುಂಟಾದಂತಾಯಿತು. ಕಿನ್ತು, ಅದೂ ಸಂಭವವೆ? ಅಂತಹ ದಿನವೂ ಒದಗಬಹುದೆ? ಷಾಹಜಾದನು ಮೆಲ್ಲಮೆಲ್ಲನೆ ಆ ರಮಣೀಯ ಸಮೀಪಕ್ಕೈದಿದನು. ಅಹುದು, ನಿಜವಾಗಿಯೂ ಅವಳು ಕಮಲೆಯಾಗಿಯೇ ಇದ್ದಳು. ಆಕಸ್ಮಿಕವಾಗಿ ಆ ನಿರ್ಜನಸ್ಥಾನದಲ್ಲಿ ಖುಸರೂವನ್ನು ಕಂಡಾ

ಕಮಲೆಯು ಅಕ್ಷ ತ್ವರ್ಯಾನ್ವಿತೆಯಾದಳಾದರೂ ಖುಸರೂವು ತತೋಧಿಕವಾಗಿ ವಿಸ್ಮಯಾನ್ವಿತನಾದನು. ಕಮಲೆಗೆ ಇನ್ನು ಈಗ ಮೊದಲಿನ ಸೌಂದರ್ಯವು ಇಲ್ಲ. ಅವಳು ಕಾವಿಯ ಉಡುಗೆಗಳನ್ನು ಉಟ್ಟುಕೊಂಡು ಕಯ್ಯಲ್ಲಿ ಕಮಂಡಲುವನ್ನು ಹಿಡಿದಿದ್ದಳು. ಅಯ್ಯೋ, ಕಮಲೆ! ನಿನ್ನೀದುರ್ದಶೆಗೆ ಕಾರಣನು ಈ ನರಾಧಮನಲ್ಲವೆ? ಎಂದು ಖುಸರೂವು ತನಗೆ ತಾನೆ ಹೇಳಿಕೊಂಡನು. ಕಿನ್ತು, ಆ ದಾರುಣದುಃಖವನ್ನು ತನ್ನ ಮನಸ್ಸಿನಲ್ಲೇ ಬಚ್ಚಿಟ್ಟುಕೊಂಡು, ಇದೆಲ್ಲಿಯ ವೇಷ, ಕಮಲೆ? ಎಂದನು.

ಕಮಲೆ:—ಇದು ನನಗೆ ಉಪಯುಕ್ತವಾದ ವೇಷ. ಪ್ರಭಾವ, ಈ ಪೃಥ್ವಿಯಲ್ಲಿ ನನಗೆ ಇದ್ದ ಒಂದೇ ಸಂಬಲವು ನನ್ನ ತಾಯಿ. ಆಕೆಯೂ ಈ ಅಭಾಗಿನಿಯನ್ನು ತ್ಯಜಿಸಿ ತೆರಳಿದಮೇಲೆ ಮತ್ತಾವ ಆಸೆಯಿಂದ ತಾನೆ ಸಂಸಾರದಲ್ಲಿ ನಾನು ಬಂಧಿಸಲ್ಪಡಲಿ? ಅದುಕಾರಣ ನಾನು ಸನ್ಯಾಸಿನಿ ಯಾಗಿಯೇ ಇರುವೆನು ಧರ್ಮಚಿನ್ತನೆಯಿಂದಲೇ ನನ್ನೀ ಅಸಾರವಾದ ಜೀವನದ ಕೊನೆಯ ಕೆಲದಿನಗಳನ್ನು ಕಳೆಯಬೇಕೆಂದು ಇಚ್ಛಿಸಿರುವೆನು. ತಾವು ಪ್ರಾಣವನ್ನು ರಕ್ಷಿಸಿದ್ದಿರಿ. ಅನಾಹಾರದಿಂದ ಪೇಚಾಡುತ್ತಿದ್ದ ನನ್ನನ್ನು ಬದುಕಿಸಿದಿರಿ. ತಾವು ಬಾದಷಾಹರು. ಅಂತಹ ಅಸೀಮ ಉಪಕಾರವನ್ನು ಮರೆಮಾಡಲೆತ್ನಿಸುವುದು ನಮಗೆ ಸಾಧ್ಯವೆ?" ಎಂದು ಸ್ಥಿರ ದೃಷ್ಟಿಯಿಂದ ಕಣ್ಣೀರನ್ನು ಸುರಿಸುತ್ತ ಖುಸರೂವಿಗೆ ಮರ್ಯಾದಿದಳು

ಖುಸರು:—ಕಮಲೆ, ಪ್ರಾಣಾಧಿಕೆ! ನೀನು ಮಾಡಿದ ಪ್ರತ್ಯುಪ ಕಾರವು ವಿಶೇಷವಾದುದೇ ಆದರೂ ಮೂಷಂಡನಾದ ನಾನು ನಿನ್ನನ್ನು ಗುರು ತಿಸದೆ ಹೋದೆನಲ್ಲ!

ಕಮಲೆ:—ಅಂತಹುದನ್ನೇನೂ ನಾನು ಮಾಡಿರುದಿಲ್ಲ.

ಖುಸರ:—ಇಲ್ಲವೆ? ಆ ಘೋರ ದುರ್ದಿನದಲ್ಲಿ ನನ್ನನ್ನು ರಕ್ಷಿಸ ಬೇಕೆಂದು ನೀನು ಪ್ರಾಣಪಣವಾಗಿ ಪೇಚಾಡಲಿಲ್ಲವೆ?

ಕಮಲೆ:—ದಾಸಿಯಾದ ನನ್ನ ವಾಚಾಲತೆಯನ್ನು ಕ್ಷಮಿಸಬೇಕು. ಆದರೆ ತಮ್ಮನ್ನು ಪೂಜಿಸಿಯೇ ಈ ಜೀವನವನ್ನು ವಿನಿಯೋಗಿಸಿಕೊಳ್ಳ ಬೇಕೆಂದಿದ್ದೆನು. ಕಿನ್ತು, ತಾವು ಮೊದಲಾಗಿಯೇ ನನಗೆ ಆತ್ಮಪರಿಚಯ ವನ್ನು ಕೊಡಲಿಲ್ಲವೇಕೆ? ಸಹಾಯ ಹೀನೆಯಾದೊಬ್ಬ ಅನಾಥ ಕನ್ಯೆಗೆ

ಇಷ್ಟು ಕಷ್ಟವನ್ನು ಕೊಟ್ಟುದುದೇಕೆ ? " ಎಂದು ತನ್ನ ಹೃದಯವೇಗವನ್ನು ಸಂವರಣಮಾಡಲಾರದೆ ರೋದಿಸಿದಳು. ಮಲಿನವಾದಾಕೆಯ ನಯನಗಳೆರಡರಿಂದಲೂ ಎರಡು ಮುಕ್ತಾಮಾಲೆಗಳು ಸುರಿಯತೊಡಗಿದವು. ಆಗ ಸಂಜ್ಞಾಶೂನ್ಯನಾದ, ಪ್ರೇಮೋನ್ಮತ್ತನಾದ ಖುಸರೂವು ಆಕೆಯನ್ನಾಲಿಂಗಿಸಲು ಉದ್ಯುಕ್ತನಾದರೂ ಕಮಲೆಯು ಅವನನ್ನು ದೂರೀಕರಿಸಿದಳು.

ಹತಾಶನಾದ ಖುಸರೂವು, " ಕಮಲೆ, ಹೆಚ್ಚಿನ ಮಾತುಗಳನ್ನಾಡಲು ನನಗೆ ಅವಕಾಶವಿಲ್ಲ. ನನ್ನ ಹಿಂದೆಯೇ ಶತ್ರುಗಳಿರುವರು. ಎಲ್ಲವೂ ನಿನಗೆ ತಿಳಿದಿರುವುದರಿಂದ ಅಧಿಕವಾದ ಮಾತುಗಳು ಅವಶ್ಯಕವಾಗಿ ಇನ್ನೂ ಇರುವುವೆ ? ಮಹಾರಾಜ ಮಾನಸಿಂಹನು ನನ್ನನ್ನು ಬಾದಷಹನನ್ನಾಗಿ ಮಾಡಬೇಕೆಂದು ವಿಪರೀತವಾಗಿ ಸಾಧಿಸುತ್ತಿರಲು, ಅವನ ಅನುಕಂಪದ ರೆಸೆಯಿಂದ ನಾನು ಕಾರಾಗೃಹಮುಕ್ತನಾಗಿ ಇದೀಗಲೇ ವಿಪುಲವಾಹಿನಿಯೊಡನೆ ರಣಕ್ಷೇತ್ರದಲ್ಲಿ ಅವತೀರ್ಣನಾಗಿರುವೆನು. ಕಿನ್ತು, ಕಮಲೆ ! ಇದುವೆಯೊಂದು ಪ್ರಶ್ನೆಗೆ ಉತ್ತರವೇನು ?—ನನ್ನನ್ನು ವಿವಾಹ ಮಾಡಿಕೊಳ್ಳುವೆಯೋ ? ಬಾದಷಹನಾದರಂತೂ ಉತ್ತಮವೇ ಆಯಿತು. ಅನ್ಯಥಾ ಆದರೆ ಕೋಲಾಹಲದಿಂದ ದೂರದಲ್ಲಿರುವ ನಿರ್ಜನಸ್ಥಾನದಲ್ಲಿ ಬಾದಷಹನಂತೆ ಸುಖದಲ್ಲಿರಬಹುದು. ನಿನ್ನ ಉತ್ತರದ ಮೇಲೆಯೇ ನನ್ನ ಅದೃಷ್ಟವೂ ನನ್ನ ಕರ್ತವ್ಯಾಕರ್ತವ್ಯಗಳೂ ನಿರ್ಭರವಾಗಿರುವುವು. ನಿನ್ನನ್ನು ಕಳೆದುಕೊಂಡರೆ ನನ್ನ ಧನವೂ ಸಿಂಹಾಸನವೂ ಎಲ್ಲವೂ ವ್ಯರ್ಥವಾಗುವುವು. ಹೇಳು, ನಿನ್ನ ಉತ್ತರವೇನು ? " ಎಂದು ಕೇಳಿದನು.

ಆಗ ಕಮಲೆಯು ಗಂಭೀರಭಾವದಿಂದ, " ಬಾಲಿಕಾ ವಯಸ್ಸಿನಿಂದಲೂ ಅನೇಕ ಕಷ್ಟಗಳನ್ನು ಅನುಭವಿಸಿದೆನು. ಕ್ಲೇಶವೆಂಬುದು ನನ್ನ ಅಂಗದ ಅಮೋಘವಾದ ಆಭರಣವಾಗಿದೆ. ಆದರೆ ಧನಮಾನಗಳಿಂದ ನಾನು ಸುಖಿಯಾಗಬಲ್ಲೆನೆ ? ನಿನ್ನನ್ನು ಪಡೆವುದೊಂದಲ್ಲದೆ ಅದಕ್ಕಿಂತಲೂ ಅಧಿಕವಾದ ಪ್ರಲೋಭನೆಯು ನನ್ನಲ್ಲಿ ಆವುದುತಾನೆ ಇರಬಹುದು ? ಕಿನ್ತು, ನನ್ನ ಅದೃಷ್ಟದಲ್ಲಿರುವ ದುಃಖಕ್ಕೆ ನಾನು ಮಾಡಲಾಗುವುದೇನು ? ಮೃತ್ಯುಕಾಲದಲ್ಲಿ ನನ್ನ ಅಮ್ಮನು ನಾನು ವಿಧರ್ಮಿಯಾಗಬಾರದೆಂದು ನಿಷೇಧಿಸಿರುವಳು. ನನ್ನ ತಾಯಿಯು ಇನ್ನೂ ಅನಾಹಾರದಲ್ಲೇ ಇರಬೇಕೆಂದು ನೀನು ಆಶಿಸ

ಬಹುದೆ? ನಿನ್ನನ್ನು ವಿವಾಹಮಾಡಿಕೊಂಡರೆ ನನ್ನ ತಾಯಿಗೆ ಜಲತರ್ಪಣವನ್ನಾದರೂ ಕೊಡುವ ಅಧಿಕಾರವೂ ಸಹ ನನಗಿರಲಾರದು. ತಾಯಿಯು ಹೀಗೆ ಕ್ಷುಧಾತುರಳಾಗಿ ಬಿದ್ದುಕೊಳ್ಳುತ್ತಿರುವಾಗ ನಾನು ರಾಜ್ಯಸುಖವನ್ನು ಅನುಭವಿಸಬೇಕೆಂದು ನನ್ನನ್ನು ಪ್ರೇರೇಪಿಸಬಹುದೊ?'' ಎಂದಳು.

ಖುಸರೂವು ಕಮಲೆಯ ಬಳಿ ಮೊಳಕಾಲನ್ನೂರಿ ಕುಳಿತನು. ಇದೆಂತಹ ಪ್ರಣಯದ ಅನಿರ್ವಚನೀಯ ಕ್ಷಮತೆ! ಷಾಹಜಾದನಾದ ಖುಸರೂವು ಒಬ್ಬ ಸಾಮಾನ್ಯ ದಾಸಿಯ ಸಮ್ಮುಖದಲ್ಲಿ ನತಜಾನವಾಗಿರುವನು.

ಖುಸರು:—ನೀನು ಮಾನವಿಯಲ್ಲ, ಕಮಲೆ,—ದೇವಿ! ನಿನ್ನನ್ನು ಪಡೆವಂತಹ ಪುಣ್ಯವನ್ನು ನಾನು ಗಳಿಸಿಕೊಂಡಿಲ್ಲ. ನನ್ನ ಮೃತ್ಯುಕಾಲದಲ್ಲಿ ಒಮ್ಮೆ ನನ್ನನ್ನು ಕಾಣಬೇಕೆಂದು ನಿನ್ನನ್ನು ಪ್ರಾರ್ಥಿಸಿಕೊಳ್ಳುವೆನು. ಕಾಬೂಲದ ಕಾರಾಗಾರದಲ್ಲಿ ಇನ್ನು ಕಿಂಚಿತ್ ದಿನಗಳಲ್ಲೇ ನನ್ನನ್ನು ನೀನು ಕಾಣಬಹುದಾಗುವುದೋ ಏನೋ!

ಆಮೇಲೆ ಖುಸರೂವು ಕಮಲೆಯ ಕಡೆ ಮೊಗತಿರುಗಿಸದೆ ಅವಳದೊಂದು ಮಾತನ್ನೂ ಸಹ ಕೇಳಲಪೇಕ್ಷಿಸದೆ ತನ್ನ ತಂದೆಯ ಶಿಬಿರದ ಕಡೆಗೆ ತಾನಾಗಿ ಬಂದಿಯಾಗುವೆನೆಂದು ಮುನ್ನಡೆದನು. ಕಮಲೆಯು ಅವನ ಕಣ್ಣಿಗೆ ಕಾಣುತ್ತಿರುವಷ್ಟರವರೆಗೂ ಅವನನ್ನೇ ದಿಟ್ಟಿಸುತ್ತಿದ್ದಳು. ಕಣ್ಣೀರುಗಳಿಂದ ಅವಳ ದೃಷ್ಟಿಯು ಕುಂದಿತು. ಮತ್ತೆ ಅವಳು ಅವನನ್ನು ನೋಡಲಾರದಾದಳು. ಆಗ ಮಾತ್ರ ಅವಳದೊಂದು ದೀರ್ಘನಿಶ್ವಾಸವು ಅನಂತಾಕಾಶದಲ್ಲಿ ಲೀನವಾಗಿ ಹೋಯಿತು.

ಇಪ್ಪತ್ತೈದನೆಯ ಪರಿಚ್ಛೇದ.

[ಪುನರ್ಮಿಲನ]

ಖುಸರೂವು ಹೀಗೆ ಮುಂದರಿಸಿ ನಿರ್ಜನವಾದುದೊಂದು ಸ್ಥಳವನ್ನು ಸೇರಿ, ಬಾಲಕನಂತೆ ರೋದಿಸತೊಡಗಿದನು. "ಪಾಪಮಯವಾದ ಈ ಪೃಥ್ವಿಯಲ್ಲಿ ಇನ್ನೂ ಬದುಕಿರ

ಹುಟ್ಟಿದ ಕನ್ಯೆಯೊಡನೆ ತನ್ನ ಮಗನ ವಿವಾಹ ಮಾಡಿಸಿ ಆ ಮಾರವಾಡಿಯ ಇಚ್ಛೆಯಂತೆ ತನ್ನೆರಡು ಪುತ್ರರ ಹಂಬಲನ್ನೇ ಬಿಟ್ಟು ಚತುರ್ಥ ಪುತ್ರನನ್ನು ಸಿಂಹಾಸನದ ಮೇಲೆ ಆರೋಹಣಮಾಡಿಸುವ ಸಂಕಲ್ಪಮಾಡಿರುವನೊ ಅಂತಹ ನರಾಧಮನನ್ನು ಜಗತ್ತೆಲ್ಲವೂ ಧನ್ಯ, ಧನ್ಯನೆಂದು ಹೊಗಳುತ್ತಿರುವಾಗ ಅವನ ಆದೇಶಾನುಸಾರವಾಗಿ ನನ್ನನ್ನು ಕೊಲ್ಲಬೇಕಾಗಿ ಬಂದರೆ ಇನ್ನು ಧರ್ಮವೆಲ್ಲಿದೆ ?

ಪ್ರಹರಿ:—ಈ ಪ್ರಶ್ನೆಯನ್ನು ನಾವು ಅರಿತುಕೊಳ್ಳುವಷ್ಟು ಶಕ್ತರಲ್ಲ

ಖುಸರು:—ಇನ್ನು ವಿಳಂಬಮಾಡಬೇಡಿ. ನಾನು ಸಿದ್ಧನೇ ಆಗಿರುವೆನು. ದೇಶದಲ್ಲಿ ಧರ್ಮವಿದೆಯಾದರೆ, ಪ್ರೇತಾತ್ಮಗಳು ಮಾನವರ ಮೇಲೆ ಅಲಕ್ಷಿತ ಬಲಾತ್ಕಾರವನ್ನು ಮಾಡುವರಾದರೆ ನೀವು ನೆನಪಿನಲ್ಲಿಡಿ,—ಡಿಲ್ಲಿಯ ಅತ್ಯಾಚಾರಿಯು ಸಿಂಹಾಸನಶೂನ್ಯನಾಗುವನು. ಮೊಗಲ ಸಾಮ್ರಾಜ್ಯನಾಮವು ಭಾರತೇತಿಹಾಸದಿಂದ ಶೀಘ್ರವಾಗಿಯೇ ಅಳಿಸಿಹೋಗುವುದು.

ಇಷ್ಟು ಹೇಳಿ ಖುಸರೂವು ನಿಸ್ತಬ್ಧನಾದನು. ಘಾತುಕರು ಇನ್ನು ಸ್ವಕಾರ್ಯದಲ್ಲಿ ಪ್ರವೃತ್ತರಾಗಬಹುದೆಂದು ತನ್ನ ಇಂಗಿತವನ್ನು ಸೂಚಿಸಿದನು. ಅವರ ಖಡ್ಗಗಳು ಮೇಲಕ್ಕೆ ಏಳಲು, ಖುಸರೂವು ಕಣ್ಣುಗಳನ್ನು ಮುಚ್ಚಿದನು. ಇದುವೆ ಸಮಯದಲ್ಲಿ ವಿದ್ಯುದ್ವೇಗದಿಂದ ಅದಾರೋ ಅವತರಿಸಿ ತನ್ನ ಎದೆಯನ್ನು ಇಳಿವ ಖಡ್ಗಧಾರೆಗೆ ಆಹುತಿಯಾಗಿತ್ತು. ಭೂತಲವನ್ನೆಲ್ಲ ರಕ್ತಪ್ಲಾವನದಿಂದ ಕೆಂಪಾಗಿ ಮಾಡಿದರು.

ಖುಸರೂವು ಆಗ ಕಣ್ತೆರೆದು, "ದೇವೀ, ತಾವು ಯಾರಿರಬಹುದು?" ಎಂದು ಕೇಳಿದನು. ಆ ಸನ್ಯಾಸಿಯು ಮೃದುನಗೆಯಿಂದ " ಪ್ರತಾಪನೆ ಇಂದು ನಮಗೆ ವಿವಾಹ. ಬಾ, ಎಲ್ಲಿ ಜಾತಿಭೇದವಿಲ್ಲವೊ ಆ ದೇಶದಲ್ಲಿ ನಾವು ಒಟ್ಟಾಗಿ ಇರುವಾ " ಎಂದಳು.

ಪ್ರತಾಪನು, "ಕಮಲೆ " ಎಂದು ಚೀತ್ಕರಿಸಿ ಏಳುತಲಿರುವಷ್ಟರಲ್ಲಿ ಘಾತಕರ ಕತ್ತಿಯು ಅವನ ಕೊರಲನ್ನು ತಿವಿದಿತು. ಅದುದರಿಂದಲೇ " ಕ " ಎಂಬುವ ಶಬ್ದವು ಮಾತ್ರ ಕೇಳುತ್ತಿರುವಷ್ಟರಲ್ಲಿ ಅವನ ಛಿನ್ನ ಕಂಠವು ಭೂಪೃಷ್ಠದ ಮೇಲೆ ಪತಿತವಾದುದು.

ಕಮಲೆ, ಆ ಅನಂತಧಾಮಕ್ಕೆ ನಡೆಯಮ್ಮ ! ಇದೋ ಅಪ್ಸರಸ್ತ್ರೀಯರು ನಿನ್ನನ್ನು ಆ ವಿಮಲಸುಖರಾಜ್ಯದಲ್ಲಿ ಸ್ವಾಗತಮಾಡಿಕೊಳ್ಳಲು ಕರೆಯುತ್ತಿರುವರು. ಅಲ್ಲಾದರೂ ನಿನಗೆ ಸುಖವುಂಟಾಗಬಹುದು.

ಮನುಷ್ಯರೂ ಸುಖದುಃಖಗಳನ್ನು ಸರಿಯಾಗಿ ತಿಳಿದುಕೊಳ್ಳುವುದಿಲ್ಲ. ಸುಖದುಃಖಗಳನ್ನು ನೇಮಿಸುವವನಾರೋ ಅವನಿರುವೆಡೆಗೆ ನಡೆ. ನಿನ್ನ ದುಃಖಜ್ವಾಲೆಯೆಲ್ಲವೂ ಶೀತಲವಾಗುವುದು. ಅವನೇ ನಿನ್ನ ಹೃದಯದಲ್ಲಿ ಶಾಂತಿಧಾರೆಯನ್ನು ಸುರಿಸಿ, ಪೂರ್ಣಸುಖದ ಆಸ್ವಾದನವು ನಿನಗುಂಟಾಗುವಂತೆ ಮಾಡುವನು.

ಈ ವಿವಾಹಮಂಟಪವು ಈ ಲೋಕಕ್ಕೆ ಉಚಿತವಾದುದಲ್ಲ. ಸ್ವರ್ಗಕ್ಕೆ ನಡೆ, ಕಮಲೆ ! ದುಃಖವಿಲ್ಲದೆ ಸುಖವೂ, ಅಶಾಂತಿಯಿಲ್ಲದೆ ಶಾಂತಿಯೂ ಇರುವ ಆ ನಿತ್ಯಧಾಮಕ್ಕೆ ನಡೆ. ಅಂತಹ ನಿತ್ಯಸುಖವೇ ನಿಮ್ಮ ಅತುಲನೀಯ ಅಕ್ಷಯಪ್ರೇಮದ ಫಲ.

* ಸಂಪೂರ್ಣಂ. *

ಸೊಗಸಾದ ಕೆಲವು ಕನ್ನಡಗ್ರಂಥಗಳು.

	ಆ-ಪೈ		ಆ-ಪೈ
ವಿರಕ್ತಳಾದ ಸೌದಮುನಿ	೬-೬	ವಿಶ್ವನಾಥ	೧-೦
ಹೇಮಲತಾ	೧೨-೦	ಮೀನಾಕ್ಷಿ	೧-೦
ಸಾವಿತ್ರಿ	೧೨-೦	ನಾರಾಯಣ	೧-೦
ವಿಶಾಲಾಕ್ಷಿ	೧೨-೦	ಧರ್ಮಸುಧಾ	೧-೦
ಕಮಲಕುಮಾರಿ	೧೨-೦	ಯಕ್ಷಿಣಿಯ ಮೋಸ	೧-೦
ವಿಲಾಸಿನಿ	೧೦-೦	ದೈವಾನುಗ್ರಹ	೧-೬
ಮಧುಸೂದನ	೪-೦	ಅಂಬಾಲಿಕೆ	೧-೬
ಜಯಚಂದ್ರಿಕೆ	೪-೦	ಬಿಲ್ಲುಗಾರನಾದ ಮಲ್ಲ	೧-೬
ನೀತಿಕುಸುಮಾವತಿ	೫-೦	ಕುಮಾರಭೀಮಸಿಂಹ	೧-೦
ಚಿತ್ರಚರಿತ್ರೆ	೩-೦	ಮಾಲಿನೀ	೨-೦
ಸುವರ್ಣಸಂಪುಟ	೩-೦	ಪ್ರೇಮಪಿಪಾಸೆ	೨-೦
ಶಂಕರಕಥಾಸಾರ	೮-೦	ಸದಾಚಾರವಿವೇಚನೆ	೨-೦
ಮೃತ್ಯುಪರೀಕ್ಷೆ	೨-೦	ಶರಣಾವಲಂಬಸ್ತವ	೧-೦
ಬೃಂದಾವನ	೨-೦	ಸಿಂತ್ರೀಗೋಭಿನಿ	೨-೦
ಶ್ರೀಕಂಠಶಾಸ್ತ್ರಿಗಳ ಚರಿತ್ರೆ	೮-೦	ವಿನಾಯಕವಿಜಯ	೬-೦
ಗರಳಪುರಿಶಾಸ್ತ್ರಿಗಳ ಚರಿತ್ರೆ	೮-೦	ಸೊಬಗಿನಬಳ್ಳಿ	೨-೦
ಸುಲೋಚನಾ	೫-೦	ಮನೋರಮಾ	೨-೦
ಚಂಚಲೆ	೩-೦	ವಿಲಕ್ಷಣದೈವಘಟನೆ	೯-೦
ಸಾಹಸಕೇಸರಿ	೩-೦	ದ್ವೈತೋಪಾಸಕಮತ	೧-೦
ಅರೇಬಿಯನ್ ನೈಟ್ಸ್	೮-೦	ವಿದ್ಯಾಭಿವೃದ್ಧಿ	೪-೦
ಅದ್ಭುತರಾಮಾಯಣ	೮-೦	ಕೈಗನ್ನಡಿ	೪-೦
ಕ್ಷಾತ್ರತೇಜ	೬-೦	ಚಂದ್ರಿಕಾವಿಜಯ	೩-೦
ನನ್ನಸಂಸಾರ	೧೯-೦	ಚೂಡಾದರ್ಶನ	೨-೦
ವಿನೋದಚಂದ್ರ	೨-೦	ಹನುಮದ್ವಿಜಯ	೬-೦
ಏನೋ ಆಗಿಹೋಯಿತು	೧-೦	ಅಧ್ಯಾತ್ಮರಾಮಾಯಣ ಬಾಲಕಾಂಡ	೮-೦

೨೫ ರೂಪಾಯಿಗಳ ಮೇಲ್ಪಟ್ಟ ಆರ್ಡರಿಗೆ ಉದಾರವಾದ ಕಮಿಷನ್

ನಮ್ಮ ವಿಳಾಸ:— ಎಡಿಟರ್ ಕಾದಂಬರೀಸಂಗ್ರಹ, ಚಾಮರಾಜನಗರ.